ಕೊಡಗು ಸಂಗಾತಿ

ಮೇ 1 ರಿಂದ 31, 2003 ಪಾಕ್ಷಿಕ ಪತ್ರಿಕೆ (ಪಗ್ಗ 18-31 ಬೇಶ 1-17)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R.No. KA/SK/MYS-88/2003 ಸಂಪುಟ : 7 ಸಂಚಿಕೆ : 3-4 ಪುಟಗಳು : 24 ಬೆಲೆ ರೂ. : 12-00



ನ್ಯಾಯಪಾಲನೆ ನಮ್ಮ ಯುಕ್ತಿ ನ್ಯಾಯದರ್ಶನ ನಮ್ಮ ಶಕ್ತಿ

ಶಕ್ತಿ

ಕೊಡಗಿನ ಪ್ರಪ್ರಥಮ SHAKTHI THE FIRST DAILY OF KODAGU ಕನ್ನಡ ದಿನ ಪತ್ರಿಕೆ

ಸ್ಥಾಪನೆ : 4-3-1957

ಶಾಂತಳ್ಳಿಯಸುಬ್ರಾಯ - ನಾಗವೇಣಮ್ಮ ದಂಪತಿಗಳ ಪುತ್ರನಾಗಿ, ರಾಮನಾಥ ಪುರದಲ್ಲಿ ವಾರಾನ್ನದಲ್ಲಿ ಓದಿ, ಸಹಕಾರಿ ರಂಗದಲ್ಲಿ ಗುಮಾಸ್ಥರಾಗಿ, ನಂದಾದೀಪ ವಾರಪತ್ರಿಕೆಯ ಸಂಪಾದಕರಾಗಿ, ಅಲ್ಲೂ ತೃಪ್ತಿ ಕಾಣದೆ 1957ರಲ್ಲಿ "ಶಕ್ತಿ" ದಿನ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಅಂದಿನಿಂದ ಇಂದಿನತನಕ ಒಂದೆ ತರ ದುಡಿದು ಕೊಡಗಿನ ಪತ್ರಿಕಾ ಕ್ಷೇತ್ರಕ್ಕೆ ನಿತ್ಯ ಚಿರಶಕ್ತಿ ನೀಡಿದ, ಬಹುಮುಖ ಪ್ರತಿಭೆಯ ಪ್ರತಿಭಾ ಪುಂಜ, ಲೇಖಕ, ಕವಿ, ಸಾಹಿತಿ, ಸಂಪಾದಕ, ಗಮಕಿ, ವ್ಯಾಗ್ಮಿ, ಚಿಂತಕ, ದಿವ್ಯಶಕ್ತಿ, ನಿತ್ಯಶಕ್ತಿಯಾಗಿ ಕೊಡಗಿನ ಇತಿಹಾಸದಲ್ಲಿ ಐಕ್ಯರಾದ ಕೊಡಗಿನ ರತ್ನ ಬಿ. ಎಸ್. ಗೋಪಾಲಕೃಷ್ಣರು.

: ಲೇಖನ ಒಳಪುಟದಲ್ಲಿ

ಕೊಡಗಿನ ಪ್ರಪ್ರಥಮ ದಿನಪತ್ರಿಕೆ "ಶಕ್ತಿ" ಯ ಸಂಸ್ಥಾಪಕ

ದಿ|| ಬಿ. ಎಸ್. ಗೋಪಾಲಕೃಷ್ಣ ನವರ ಒಂದು ನೆನಪು.

ಪ್ರಕಟಣೆ / ಸ್ಥಳಾಂತರ / ವಿನಂತಿ.

ನಮ್ಮ ಪ್ರೀತಿಯ ಚಂದದಾರರೇ ಮತ್ತು ಹಿತೈಷಿಗಳೇ,

"ಕೊಡಗು ಸಂಗಾತಿ" ಪತ್ರಿಕೆಯು ಈಗಾಗಲೇ ಸಾಕಷ್ಟು ಜನ ಮನ್ನಣೆಗಳಿಸಿದೆ. ಇನ್ನು ಹೆಚ್ಚಿನ ಅಭಿವೃದ್ಧಿ ಬಯಸುವುದರಿಂದಲೂ ಹಾಗೂ ಎಲ್ಲಾ ಬಂದುಗಳಿಗೂ ಅನುಕೂಲವಾಗುವ ದೃಷ್ಟಿಯಿಂದ ಮೈಸೂರಿನಲ್ಲಿರುವ ಮುಖ್ಯಕಛೇರಿಯನ್ನು ಮಡಿಕೇರಿಯಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜ್ ರಸ್ತೆಯಲ್ಲಿರುವ ಯಾವುದಾದರು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಪ್ರಯತ್ನಗಳಾಗುತ್ತಿವೆ. ಡಿ.ಟಿ.ಪಿ./ ಮುದ್ರಣ ಮತ್ತು ಇನ್ನಿತರ ಕೆಲಸ ಕಾರ್ಯಗಳ ಸುಗಮ ಕೆಲಸ ಆಗಬೇಕಿದೆ. ನಮಗಳಿಗೆ ಆದಾಯಕ್ಕಿಂತ ವ್ಯಯ ಜಾಸ್ತಿ. ಈ ನಿಟ್ಟಿನಲ್ಲಿ ಬಾಕಿ ಉಳಿಸಿಕೊಂಡಿರುವ ನಮ್ಮ ಎಲ್ಲಾ ಹಿತೈಷಿ ಚಂದದಾರರು ಆದಷ್ಟು ಶೀಘ್ರವಾಗಿ ಬಾಕಿ ಹಣ ಸಂದಾಯಿಸುವ ಇರಾದೆಯನ್ನು ಹೊಂದಬೇಕು. ಬಾಕಿಯಿಂದ ಸಂಗಾತಿಯ ಪ್ರಗತಿಗೆ ಖಂಡಿತ ಆಡಚಣೆ ಆಗಿದೆ. ಹತ್ತು ಹಲವು ಉತ್ತಮ ಕಾರ್ಯವನ್ನು ಈಗಾಗಲೇ ಮಾಡಿದೆ. ಬಾಕಿದಾರರಿಗೆ 7-8 ಜ್ಞಾಪನ ಪತ್ರ ಕಳುಹಿಸಿಯಾಗಿದೆ. ಪತ್ರಿಕೆಯೊಳಗಡೆಯೂ ಸಹ ಆಗಿಂದಾಗ್ಗೆ ಜ್ಞಾಪನ ಚೀಟಿ ಇಟ್ಟು ನೆನಪಿಸುತ್ತಿದ್ದೇವೆ. ಪತ್ರಿಕೆಯ ಉತ್ತಮ ಗುಣಮಟ್ಟ ಕಾಯ್ದುಕೊಳ್ಳಲು ತಮ್ಮ ಸಹಕಾರ ಈ ಮೂಲಕ ಅನಿವಾರ್ಯ. ನಮ್ಮ ಎಲ್ಲಾ ಸಂಗಾತಿ ಕಾರ್ಯನಿರ್ವಾಹಕರು ಆದಷ್ಟು ಮುತುವರ್ಜಿವಹಿಸಿ ಈ ನಮ್ಮ ಪವಿತ್ರ ಕೆಲಸಕ್ಕೆ ಸಹಕರಿಸಬೇಕು. ಪತ್ರಿಕೆ ಸ್ವಾರ್ಥತೆಯನ್ನು ಬದಿಗಿಟ್ಟು, ಸಾಕಷ್ಟು ಕಷ್ಟಕೋಟಲೆ ಎದುರಿಸಿದರೂ 7 ನೇ ವರ್ಷಕ್ಕೆ ಪಾದಾರ್ಪಣೆಗೈಯ್ಯಲು ನೀವೆಲ್ಲರೂ ಸಹಕರಿಸಿದ್ದೀರಿ. ಇದೆ ತರಹ ಇನ್ನು ಮುಂದಕ್ಕೂ ಇರಲೆಂಬುದಾಗಿ ನಮ್ಮ ಆಶಯ. ಹಿತೈಷಿಗಳೇ, ವಿನಾಕಾರಣ ಯಾರೊಬ್ಬರ ಅನಾವಶ್ಯಕರ ಕಿವಿಮಾತುಗಳಿಗೆ ಕಿವಿ ಕೊಡದಿರಿ. ಏನೇ ಇದ್ದರೂ ನೇರವಾಗಿ ಸಂಗಾತಿಯನ್ನು ಸಂಪರ್ಕಿಸುವುದು. ಪತ್ರಿಕೆಯನ್ನು ಉಳಿಸಿ ಬೆಳೆಸಿ ಪ್ರೋತ್ಸಾಹಿಸುವುದು ಪ್ರತಿಯೋರ್ವ ಬಂದುವಿನ, ಸಂಘ ಸಂಸ್ಥೆಗಳ, ಸಮಾಜಗಳ ಕರ್ತವ್ಯವೂ ಆಗಿದೆಯೆನ್ನುವುದನ್ನು ನೆನಪಿಡಬೇಕು. ಪತ್ರಿಕೆ ನಿಮ್ಮದು ಪ್ರಯತ್ನ ನಮ್ಮದು. ಒಂದು "ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿ" ಎಂಬುದರಲ್ಲಿ ನಮಗಿನ್ನು ಗಾಡವಾದ ವಿಶ್ವಾಸವಿದೆ. ತಪ್ಪದೆ ಕೂಡಲೇ ಬಾಕಿಯನ್ನು Mo/D.D./ ನಗದು ಮೂಲಕ ಪತ್ರಿಕಾಭಿವೃದ್ಧಿಗೆ ಸಹಕರಿಸುವಂತೆ ನನ್ನ ಕಳಕಳಿಯ ವಿನಂತಿಯಾಗಿದೆ. ಮೈಸೂರಿನ ಸ್ಥಳೀಯ ಚೆಕ್‌ಗಳನ್ನು ಸ್ವೀಕರಿಸಲಾಗುವುದು.

*ದಿನಾಂಕ **11-05-2003** ರಿಂದ ಪ್ರಾರಂಭವಾಗುವ ದಂಬೇಕೋಡಿ ಕಪ್ ಕ್ರಿಕೆಟೋತ್ಸವದಲ್ಲಿ ಸಂಗಾತಿ ಬಾಕಿದಾರರು ಬಂದಾಗ ನೀಡಬಹುದು.*

ಪಟ್ಟಡ ಶೀಲಾಮಣಿ, ಸಂಪಾದಕಿ

ಡಾ॥ ಸೂರ್ಯನಾಥ ಕಾಮತ್‌ಗೆ ಚಿದಾನಂದ ಪ್ರಶಸ್ತಿ

ಕರ್ನಾಟಕ ಖ್ಯಾತ ಇತಿಹಾಸ ತಜ್ಞ ಸಂಶೋಧಕ ಸೂರ್ಯನಾಥ ಕಾಮತ್‌ರಿಗೆ **2003**ನೇ ಸಾಲಿನ ಚಿದಾನಂದ ಪ್ರಶಸ್ತಿಗೆ ಭಾಜನರಾಗಿದ್ದಾರೆ. **15-05-2003**ರಂದು ಬೆಂಗಳೂರಿನ ಮಥಿಕ್ ಸೊಸೈಟಿ ಆವರಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಪ್ರಶಸ್ತಿಪ್ರಧಾನ ಮಾಡಲಿರುವುದಾಗಿ ಚಿದಾನಂದ ಪ್ರಶಸ್ತಿ ಪ್ರಧಾನ ಸಮಿತಿ ತಿಳಿಸಿದೆ. ಈ ಪ್ರಶಸ್ತಿಯು **10** ಸಾವಿರ ರೂಪಾಯಿ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ ಎಂದು ತಿಳಿದು ಬಂದಿದೆ.

- ವರದಿ ಸಂಗಾತಿ

ದಿ॥ ಪೂಜಾರಿ ಮನೆ ಸೋಮಯ್ಯ

ಸವಿನೆನಪು



ಜನನ : **11-2-1929**
ಮರಣ : **19-5-1982**

ನೀವು ನಮ್ಮೆಲ್ಲರನ್ನು ಅಗಲಿ ಇಂದಿಗೆ 21 ವರುಷಗಳು ಸಂದರು ಸಹ ನಿಮ್ಮ ಪ್ರೀತಿ, ವಾತ್ಸಲ್ಯ, ಮಮತೆ ಮತ್ತು ಒಡನಾಟದ ಆ ಸುಂದರ ಕ್ಷಣದ ಸವಿನೆನಪು ಆಗಿಂದಾಗ್ಯೆ ಮರುಕಳಿಸುತ್ತಿದ್ದು ನೀವು ತೋರಿಸಿದ ಹಾದಿಯಲ್ಲಿಯೇ ಮುನ್ನಡೆಯುತ್ತಿರುವೆವು. ಅಲ್ಲದೆ ಸದಾ ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಅನುದಿನವು ಪ್ರಾರ್ಥಿಸುತ್ತಿರುವೆವು.

ಇಂತಿ ನಿಮ್ಮ ಪತ್ನಿ : ಲಲಿತ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.

ವಿಳಾಸ : ಸೋಮಯ್ಯ ಪಾರಂ, ಬೇಲೂರು ರಸ್ತೆ, ಏರ್‌ಪೋರ್ಸ್ ಸ್ಟೇಷನ್ ಹತ್ತಿರ, ಯಲಹಂಕ, ಬೆಂಗಳೂರು - 63

2003, ಮೇ 1 ರಿಂದ 31ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. ಫೋನ್: **0821/404290**
	ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 ಫೋನ್ : **416790**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/228047**
	ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **12**ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಸಾಮಾಜಿಕ - ಬಹಿಷ್ಕಾರ (Social Boycott)

ಸಮಾಜದಲ್ಲಿ ಏಕತೆ ಮತ್ತು ಸಾಮರಸ್ಯವಿದ್ದರೆ ಮಾತ್ರ ಒಂದು ಸಮಾಜದ ಅಭಿವೃದ್ಧಿಗೆ ಸುಗಮವಾದ ದಾರಿ. ಆದರೆ ಒಂದು ಸಮಾಜದಲ್ಲಿ ಬಡವ ಬಲ್ಲಿದ ಎಂಬ ಬೇಧ ಭಾವ ಇದ್ದೇ ಇರುತ್ತದೆ. ಇದು ಬಹು ಪುರಾತನ ಕಾಲದಿಂದಲೂ ನಡೆದು ಬರುತ್ತಿರುವುದನ್ನು ಕಂಡಿದ್ದೇವೆ. ಆದರೆ ಈ ಭೇದ ಭಾವ ಹೆಚ್ಚಾಗುತ್ತಾ ಹೋದರೆ ಅದು ಸಮಾಜದ ಕಂಟಕವಾಗಿ ಪರಿಣಮಿಸುತ್ತದೆ.

ಈಗ್ಗೆ ಸುಮಾರು 30-40 ವರ್ಷಗಳಿಂದೀಚೆ ಈ ರೀತಿಯ ಭಿನ್ನ ಭೇದಗಳು ನಮ್ಮ ಸಮಾಜದಲ್ಲಿ ಕಂಡು ಬರುತ್ತಿದೆ. ವಿದ್ಯಾವಂತರು, ವಿದ್ಯಾವಂತರಲ್ಲದವರೊಡನೆ, ಪಟ್ಟಣದವರು ಗ್ರಾಮಜನರೊಡನೆ, ಸ್ಥಿತಿವಂತರು ಸ್ಥಿತಿವಂತರಲ್ಲದವರೊಡನೆ ನಡೆದುಕೊಳ್ಳುವ ರೀತಿ, ಉಚ್ಚ ಮಟ್ಟದ ಜೀವನ ನಡೆಸುತ್ತಿರುವ ಜನರು ಉಚ್ಚ ಮಟ್ಟದ ಸ್ಥಿತಿಯಲ್ಲಿರುವವರೊಡನೆ ಮಾತ್ರ ಸಂಬಂಧ, ಒಡನಾಟ. ಇದು ಒಂದು ರೀತಿಯ ಸಾಮಾಜಿಕ ಬಹಿಷ್ಕಾರ (Social Boycott)ಆಗಿ ಪರಿವರ್ತಿಸಿದೆ. ಉಚ್ಚ ಸ್ಥಿತಿಯಲ್ಲಿರುವವರ ಹತ್ತಿರ ರಕ್ತ ಸಂಬಂಧಿಗಳಾಗಿದ್ದರೂ ಉಚ್ಚ ಸ್ಥಿತಿಯವರ ಮದುವೆ ಮತ್ತು ಇನ್ನಿತರ ಕಾರ್ಯಗಳಿಗೆ ಕರೆಯೋಲೆಗಳನ್ನೇ ಕೊಡದೆಯೇ ಇರುವುದು ಒಂದು ರೀತಿ ಸಾಮಾಜಿಕ ಬಹಿಷ್ಕಾರವೇ ಆಗಿದೆ. ಎಂತಹ ವಿಪರ್ಯಾಸ ಇದು.

ಈ ರೀತಿಯ ತಾರತಮ್ಯ ಬೆಳೆಯುತ್ತಿರುವುದು ಒಂದು ಸಮಾಜದ ಅಭಿವೃದ್ಧಿಗೆ ಭವಿಷ್ಯತ್‌ನಲ್ಲಿ ಖಂಡಿತವಾಗಿಯೂ ಕಂಟಕಪ್ರಾಯವಾಗಿ ಪರಿಣಮಿಸುತ್ತದೆ. ಇದರಿಂದಾಗಿ ಸಮಾಜದ ಒಗ್ಗಟ್ಟು ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಧಕ್ಕೆ ಉಂಟಾಗುತ್ತದೆ. ಒಂದು ಜನಾಂಗವು ಯಾವುದೇ ತಾರತಮ್ಯವಿಲ್ಲದೆ ಅಡಿಯಿಂದ ಮುಡಿಯ ವರೆಗೆ ಅಭಿವೃದ್ಧಿ ಹೊಂದುವುದು ಮುಖ್ಯವಲ್ಲದೆ, ಏರುಪೇರುಗಳಾಗಿ ಒಂದೊಂದು ವರ್ಗಗಳಾಗಿ, ಭಿನ್ನಾಭಿಪ್ರಾಯಗಳೊಡನೆ ಹಿಂದು ಮುಂದು ಅಭಿವೃದ್ಧಿ ಹೊಂದುತಲ್ಲಿದ್ದರೆ ಅದು ಅಭಿವೃದ್ಧಿಯ ಸಂಕೇತ ವಲ್ಲವೆಂದು, ಇಂತಹ ನ್ಯೂನತೆಗಳನ್ನು ಸಮಾಜದ ಬುದ್ಧಿ ಜೀವಿಗಳು, ಹಿತ ಚಿಂತಕರು, ನಿವೃತ್ತಿದಾರರು ಈ ಬಗ್ಗೆ ಚರ್ಚಿಸಿ ಹೋಗಲಾಡಿಸುವುದು ಸೂಕ್ತವೂ ಸಮಂಜಸವು ಆಗಿದೆ. ಒಂದು ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿಯೆಂಬ "ಧ್ಯೇಯ ವಚನದಲ್ಲಿ" ನಮಗಿನ್ನೂ ಪೂರ್ಣ ನಂಬಿಕೆ ಇದೆ ಎನ್ನುವುದು ಸಂಗಾತಿಯ ಅಭಿಪ್ರಾಯವಾಗಿದೆ.

ಆರ್ಥಿಕ ಸ್ವಾವಲಂಬನೆಗೆ ಗಿರಿರಾಜ

ಗ್ರಾಮೀಣ ಮಹಿಳೆಯರ ಉನ್ನತಿಗಾಗಿ ಯೋಜನೆಯೊಂದನ್ನು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರೂಪಿಸಿದೆ. ಅತಿ ಬಡ ಕುಟುಂಬಗಳಿಗೆ ಗಿರಿರಾಜ ಕೋಳಿ ಸಾಕಾಣಿಕೆ ಅನುಕೂಲವನ್ನು ಸರಕಾರ ಮಾಡಿಕೊಡುತ್ತಿದೆ.

ಗಿರಿರಾಜ ಒಂದು ಸುಧಾರಿತ ದೇಶಿ ಕೋಳಿ ತಳಿ. ಇದರಿಂದ ಸಾಮಾನ್ಯ ನಾಟಿಕೋಳಿಗಳಿಂದ ಪಡೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಾಂಸ ಮತ್ತು ಮೊಟ್ಟೆ ಪಡೆಯಬಹುದು. ಈ ಕೋಳಿ ಯಾವುದೇ ರೀತಿಯ ಪ್ರತಿಕೂಲ ಹವಾಗುಣಕ್ಕೆ ಹೊಂದಿಕೊಳ್ಳಬಲ್ಲದು. 1980 ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಕೋಳಿ ತಳಿಯ ಸಂವರ್ಧನಾ ಕಾರ್ಯ ಕೈಗೊಂಡರು. ಅದರ ಫಲವಾಗಿ ಉದಯಿಸಿದ್ದು 'ಗಿರಿರಾಜ'.

ವೈಶಿಷ್ಟ್ಯ: ಈ ಕೋಳಿ ತಳಿಯ ಮರಿಗಳು ಎಂಟು ವಾರಗಳಲ್ಲಿ 1.3-1.4 ಕೆ. ಜಿ. ತೂಗುತ್ತವೆ. ನಾಟಿ ಕೋಳಿ ಈ ಅವಧಿಯಲ್ಲಿ 400-600 ಗ್ರಾಂ ಬೆಳೆಯಬಲ್ಲುದು. ದೇಶಿ ಕೋಳಿಗಳಿಗೆ ಹೋಲಿಸಿದರೆ ಗಿರಿರಾಜ ಹೆಚ್ಚು ಮೊಟ್ಟೆ ಇಡಬಲ್ಲುದು. ನಾಟಿ ಕೋಳಿ 500 ದಿನಗಳಲ್ಲಿ ಸುಮಾರು 65 ರಿಂದ 68 ಮೊಟ್ಟೆ ಇಟ್ಟರೆ, ಗಿರಿರಾಜ ಅದೇ ಅವಧಿಯಲ್ಲಿ 120 ರಿಂದ 150 ಮೊಟ್ಟೆ ಇಡುತ್ತದೆ. ಅಲ್ಲದೆ, ಇವುಗಳ ಮೊಟ್ಟೆಯ ತೂಕವೂ ಹೆಚ್ಚು. ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಹಲವು ವಾಣಿಜ್ಯ ಗುಣಮಟ್ಟದ ಮಾಂಸ ಮತ್ತು ಮೊಟ್ಟೆ ಕೋಳಿಗಳಿಗೆ ಹೋಲಿಸಿದರೆ ಗಿರಿರಾಜದ ಉತ್ಪಾದನಾ ಸಾಮರ್ಥ್ಯ ಕಡಿಮೆ, ಆದರೆ, ಇದರ ನಿರ್ವಹಣೆ ಸುಲಭ. ಮನೆಯ ಹಿತ್ತಲಿನಲ್ಲಿ ಅಧಿಕ ವೆಚ್ಚವಿಲ್ಲದೆ, ಹೆಚ್ಚಿನ ತಾಂತ್ರಿಕತೆಯ ನೆರವಿಲ್ಲದೆ ಈ ಕೋಳಿ ಸಾಕಬಹುದು. ಈ ದೃಷ್ಟಿಯಿಂದ ಇವು ಗ್ರಾಮೀಣ ರೈತ ಮಹಿಳೆಯರಿಗೆ ವರದಾನವಿದ್ದಂತೆ. ಕರ್ನಾಟಕ ಸರಕಾರದ ಪಶು ವೈದ್ಯಕೀಯ ಮತ್ತು ಪಶುಪಾಲನಾ ಇಲಾಖೆ ಗ್ರಾಮೀಣ ಮಹಿಳೆಯರಿಗೆ ಉಪ ಕಸುಬು ಕಲ್ಪಿಸುವ ಉದ್ದೇಶದಿಂದ ಸಬ್ಸಿಡಿ ದರದಲ್ಲಿ ಗಿರಿರಾಜ ಕೋಳಿ ಮರಿಗಳನ್ನು ಆಯ್ದ ಫಲಾನುಭವಿಗಳಿಗೆ ನೀಡುತ್ತಿದೆ.

ಸಾಕಷ್ಟು ಬೆಳವಣಿಗೆ ಹೊಂದಿದ ಗಿರಿರಾಜ ಕೋಳಿ ಮತ್ತು ಹೆಂಟೆಗಳನ್ನು ನೀಡುವುದರಿಂದ, ಪ್ರಾರಂಭಿಕ ಹಂತದ ತೊಂದರೆಗಳು ರೈತರನ್ನು ಬಾಧಿಸುವುದಿಲ್ಲ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಧಣಾಪುರ ಗ್ರಾಮದಲ್ಲಿ ಈ ಯೋಜನೆಯ ಪ್ರಯೋಜನ ಪಡೆದ ಹಲವು ರೈತ ಮಹಿಳೆಯರು ಇಂದು ಸ್ವಲ್ಪ ಮಟ್ಟಿನ ಆರ್ಥಿಕ ಸ್ವಾವಲಂಬನೆ ಸಾಧಿಸಿದ್ದಾರೆ. ಈ ಯೋಜನೆ ಕುರಿತ ಹೆಚ್ಚು ವಿವರ ಸಮೀಪದ ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಲಭ್ಯ.

-ಸಂಗಾತಿ.

ಪಾಂಡು ರಾಜನ ಹೆಂಡತಿಯರಾದ ಕುಂತಿ ಮತ್ತು ಮಾದ್ರಿಯರಿಗೆ ಐದು ಮಂದಿ ಮಕ್ಕಳಾದರು.

ಶ್ರೀ ಬಿ. ಎಸ್. ಗೋಪಾಲಕೃಷ್ಣ ಅವರ ಕಿರುಪರಿಚಯ

ಕೊಡಗು ಜಿಲ್ಲೆಯ ಸೋಮವಾರಪೇಟೆ ಬಳಿ ಸುಬ್ರಾಯ ಅವರ ಪುತ್ರರಾಗಿ ತಾ 24-8-1930 ರಂದು ಜನನ.

ಕೊಡಗು ಜಿಲ್ಲೆಯ ಹಿರಿಯ ಸಹಕಾರ ಸಂಘವೊಂದರಲ್ಲಿ ಒಂಭತ್ತುವರೆ ವರ್ಷ ಕೆಲಸ ಮಾಡಿದ ಅನುಭವ, 1955 ರಿಂದ 3 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ 'ನಂದಾದೀಪ' ಎನ್ನುವ ಕನ್ನಡ ಮಾಸ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರೂ ಆಗಿದ್ದರು. ಕೊಡಗು ಜಿಲ್ಲೆಯಲ್ಲಿ ಪ್ರಥಮ ದಿನ ಪತ್ರಿಕೆಯಾಗಿ "ಶಕ್ತಿ" ಎಂಬ ದಿನ ಪತ್ರಿಕೆಯನ್ನು1957 ರ ಮಾರ್ಚ್ 4 ರಂದು ಪ್ರಾರಂಭಿಸಿದರು. ಈ ಪತ್ರಿಕೆಯು ಜಿಲ್ಲೆಯ ಪ್ರಧಾನ ದಿನಪತ್ರಿಕೆಯಾಗಿ ಈಗಲೂ ಪ್ರಸಾರದಲ್ಲಿದೆ. ಪತ್ರಿಕೋದ್ಯಮದಲ್ಲಿಯೇ ಆಸಕ್ತರಾದ ಅವರ ಪುತ್ರರಿಂದ ನಡೆಸಲ್ಪಡುತ್ತಿದ್ದ ಭೌಗೋಳಿಕವಾಗಿ, ಪ್ರಾಕೃತಿಕವಾಗಿ ಸಂಪರ್ಕಗಳ ಸೂಕ್ತ ವ್ಯವಸ್ಥೆಯ ಕೊರತೆಯಲ್ಲಿ ಹಾಗೂ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವಾದ ಮಳೆಗಾಲದ ಮಲೆನಾಡಿನಲ್ಲಿ ಪತ್ರಿಕೆಯನ್ನು ಎಷ್ಟೇ ಕಷ್ಟಗಳ ನಡುವೆಯೂ ಯಶಸ್ವಿಯಾಗಿ ನಡೆಸಲಾಗಿದೆ. ಮಡಿಕೇರಿಯಿಂದ "ಸಂಧ್ಯಾದೀಪ" ಎನ್ನುವ ಸಂಜೆ ದಿನಪತ್ರಿಕೆಯೊಂದನ್ನು ಹೊರಡಿಸಿ 2 ವರ್ಷ ನಡೆಸಿದರು. "ಚೇತನ " ಎನ್ನುವ ಕನ್ನಡ ವಾರಪತ್ರಿಕೆಯನ್ನು ಮಡಿಕೇರಿಯಿಂದ ಹೊರಡಿಸಿ 18 ತಿಂಗಳ ಕಾಲ ನಿರ್ವಹಿಸಿದರು. ಸುಮಾರು ಎರಡೂವರೆ ವರ್ಷಗಳ ಅವಧಿಯವರೆಗೆ ರಾಜ್ಯ ಮಟ್ಟದ "ಸಂಯುಕ್ತ ಕರ್ನಾಟಕ" ದಿನಪತ್ರಿಕೆ ಮತ್ತು "ಕಸ್ತೂರಿ" ಮಾಸ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಸ್ವತಃ ರಾಜ್ಯ ಮಟ್ಟದಲ್ಲಿ "ಶಕ್ತಿ" ಎನ್ನುವ ಹೆಸರಿನಲ್ಲಿಯೇ ಬೆಂಗಳೂರಿನಿಂದ 1983 ರಲ್ಲಿ ವಾರಪತ್ರಿಕೆಯೊಂದನ್ನು ಹೊರಡಿಸಿ 2 ವರ್ಷ ಕಾಲ ನಡೆಸಿದರು. ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕನ್ನಡ ಪ್ರಕಟಣೆಗಳ ವಿಬಾಗದಲ್ಲಿ ಸಲಹೆಗಾರರಾಗಿ ಒಂದು ವರ್ಷ ಸೇವೆ ಸಲ್ಲಿಸಿದರು. ರಾಜ್ಯ ಸಣ್ಣ ಮತ್ತು ಜಿಲ್ಲಾ ಮಟ್ಟದ ಪತ್ರಿಕೆಗಳ ಸಂಘದ ಅಧ್ಯಕ್ಷರಾಗಿ ಸುಮಾರು 3 ವರ್ಷ ಕಾಲ ಕಾರ್ಯ ನಿರ್ವಹಿಸಿದರು. 'ಭಗ್ನತಂತು" ಎನ್ನುವ ಸಾಮಾಜಿಕ ಕಾದಂಬರಿ ಹಾಗೂ ಪ್ರಶ್ನೋತ್ತರಗಳ ಸಂಗ್ರಹವಾದ "ಉಭಯ ಕುಶಲೋಪರಿ" ಎನ್ನುವ ಪುಸ್ತಕ ಮತ್ತು "ಮಹಾಭಾರತದ ಭೀಮ" ಎನ್ನುವ ವ್ಯಕ್ತಿತ್ವ ಗುಣಾವಟ್ಟು, ವಿಮರ್ಶೆಯ ಪುಸ್ತಕ ಇವುಗಳನ್ನು ಬರೆದು ಪ್ರಕಟಿಸಿದ್ದಲ್ಲದೆ, ಕೊನೆಯ ಎರಡು ಪುಸ್ತಕಗಳು ಪುನರ್ ಮುದ್ರಣಗೊಂಡಿರುತ್ತವೆ. ಇನ್ನಿತರ 4 ಪುಸ್ತಕಗಳೆಂದರೆ ಆಕಾಶವಾಣಿಯಲ್ಲಿ ಪ್ರಸಾರಗೊಂಡ "ಸಂಗ್ರಹಾತಿ ಚಿಂತನ" ಕವನಗಳ ಸಂಗ್ರಹಾತಿ 'ಸೊಡರು' ಆಯುರ್ವೇದಿಕ್ ಔಷಧಿಗೆ ಸಂಬಂದ ಪಟ್ಟಂತೆ 'ಸರಳ ಚಿಕಿತ್ಸೆ" ಮತ್ತು 9 ಪ್ರಬಂಧಗಳ ಸಂಗ್ರಹರೂಪ 'ರತ್ನಗರ್ಭ; ಇವರ ಬರಹ ಪ್ರಪಂಚದ ಮುಖ್ಯ ಕೆಲಸವಾದ 'ಭಗವದ್ಗೀತೆ"ಯ ಮೇಲೆ ಟೀಕೆ ಟಿಪ್ಪಣಿ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದೆ. ಶ್ರೀಬಿ. ಎಸ್. ಗೋಪಾಲಕೃಷ್ಣ ಅವರು ಗಮಕ ವಿದ್ವಾನ ಕೂಡ ಹೌದು. ಅವರು ಕುಮಾರವ್ಯಾಸ ಭಾರತದ ಆಳ ಅಧ್ಯಯನ ನಡೆಸಿದ್ದಾರೆ. ಇವರು ಕರ್ನಾಟಕ ಸಂಗೀತದಲ್ಲಿ ಆಸಕ್ತರು, ಹಿಂದೂ ತತ್ವಶಾಸ್ತ್ರವೂ ಇವರ ಅಚ್ಚುಮೆಚ್ಚಿನ ವಿಷಯ. 1987 ರಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ಆಕಾಡೆಮಿಯು ಇವರನ್ನು ರಾಜ್ಯ ಪ್ರಶಸ್ತಿಯೊಂದಿಗೆ ಗೌರವಿಸಿತು. ಮಡಿಕೇರಿ ಪುರಸಭೆಯು 1989 ರಲ್ಲಿ ಶ್ರೀಯುತರನ್ನು ಸನ್ಮಾನಿಸಿತು. ಕರ್ನಾಟಕ ಪತ್ರಿಕಾ ಆಕಾಡೆಮಿ ಬೆಂಗಳೂರು ಇವರು ತಾ. 24-1-1990 ರಲ್ಲಿ 'ಶಕ್ತಿ" ಯ ಸೇವೆಯನ್ನು ಪರಿಗಣಿಸಿ ಸನ್ಮಾನ ಪತ್ರ ನೀಡಿದ್ದಾರೆ. 1991 ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಶ್ರೀಯುತರಿಗೆ ನೀಡಿ ಗೌರವಿಸಲಾಗಿದೆ. ಶ್ರೀಯುತರು ಕೊಡಗು ಜಿಲ್ಲಾ ಪತ್ರಕರ್ತರ ಸಂಘಕ್ಕೆ ನೀಡಿರುವ ರೂ. 10,000 ರೂಪಾಯಿಯಲ್ಲಿ ವರ್ಷಂಪ್ರತಿ ಜಿಲ್ಲೆಯಲ್ಲಿ ಉತ್ತಮ ವರದಿ ಪ್ರಕಟಿಸಿದ ಪತ್ರಕರ್ತರಿಗೆ ಬಹುಮಾನ ಹಾಗೂ ಪ್ರಶಸ್ತಿಯನ್ನು ನೀಡಲಾಗುತ್ತಿದೆ. 'ದ ಟ್ರುತ್' ಎಂಬ ಭಗವದ್ಗೀತೆಯ ಮೇಲಿನ ಇಂಗ್ಲೀಷ್ ಟಿಪ್ಪಣಿ "ಕೃಷ್ಣ ಚರಿತ್ರೆ", " ಲೈಟ್ ಆನ್ ದ ಪಾತ್ ಫ್ರಂ ಫಿನೈಟ್ ಟು ದ ಇನ್ ಫಿನೈಟ್ ", "ದ ವರ್ಲ್ಡ್ ಈಜ್ ಎ ನಾಟ್" ಮತ್ತು " ಸಾರ್ಥಕ ಬದುಕಿಗೆ ಭಗವದ್ಗೀತೆ" ಎಂಬ ಇಂಗ್ಲೀಷ್ ಮತ್ತು ಕನ್ನಡ ಬರಹಗಳು ಮುದ್ರಣಕ್ಕೆ ತಯಾರಿವೆ.

ಮೂರು ಚಿಕ್ಕ ತಾಲ್ಲೂಕುಗಳಿರುವ, 100 ಮೈಲು ವಿಸ್ತಾರದ, 4 ಲಕ್ಷ ಜನಸಂಖ್ಯೆಯಿದ್ದ, ರಾಜ್ಯದ ಮಲೆನಾಡು ಜಿಲ್ಲೆ ಕೊಡಗಿನಲ್ಲಿ ಪತ್ರಿಕೆಯೊಂದನ್ನು ಸ್ಥಾಪಿಸಿ, ಪತ್ರಿಕೋದ್ಯಮ ಬೆಳೆಯಲು ಕಾರಣವಾಗಿ, ಸಾಹಿತಿಯಾಗಿ, ಕವಿಯಾಗಿ, ವ್ಯಾಗ್ಮಿಯಾಗಿ, ಗಮಕಿಯಾಗಿ ಹೆಸರುಮಾಡಿರುವ ಅಪೂರ್ವ "ಶಕ್ತಿ" ಯ ಹೆಸರು. ಬಿ. ಎಸ್. ಗೋಪಾಲಕೃಷ್ಣ. "ಶಕ್ತಿ " ಗೋಪಾಲಕೃಷ್ಣ ಎಂದೇ ಹೆಸರುವಾಸಿ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಎಂಬ ಕುಗ್ರಾಮದಲ್ಲಿ ಸುಬ್ರಾಯ ಮತ್ತು ನಾಗವೇಣಮ್ಮನವರ ಪುತ್ರರಾಗಿ ಜನಿಸಿದ ಗೋಪಾಲಕೃಷ್ಣ ಇಂದು ಜನರ "ಶಕ್ತಿ"ಯಾಗಿ ಬೆಳೆದದ್ದು ಒಂದು ದೊಡ್ಡ ಕಥೆ. ಪತ್ರಿಕೋದ್ಯಮಕ್ಕೆ ತನ್ನನ್ನೇ ಮುಡಿಪಾಗಿಟ್ಟ ವ್ಯಕ್ತಿಯ ಪರಿಶ್ರಮದ ಸತ್ಯ ಕಥೆ.

ಆರ್ಥಿಕ ದುಸ್ಥಿತಿಯಿಂದ ದಿನಕ್ಕೆ ಎರಡ್ ಹೊತ್ತು ಆಹಾರ ಸಿಗುತ್ತಿದ್ದ ಪರಿಸ್ಥಿತಿಯಲ್ಲಿ ಗೋಪಾಲಕೃಷ್ಣ ಬಾಲ್ಯ ಜೀವನ ಸಾಗಿತು. ಪ್ರತಿ ತರಗತಿಯಲ್ಲೂ ಹೆಚ್ಚಿನ ಅಂಕ ಗಳಿಸಿ ಪಾಸಾಗುತ್ತಿದ್ದ ಯುವಕ, ಮುಂದಿನ ತರಗತಿಗೆ ಹೋಗಬೇಕೇ ಬೇಡವೇ ಎಂಬ ಮಾತು ಮನೆಯಲ್ಲಿ ದಿನನಿತ್ಯದ ಚರ್ಚೆಗೆ ಕಾರಣವಾಗಿತ್ತು. ಹುಡುಗ ಶಾಲೆಗೆ ಹೋದರೆ ಸೌದೆ ತರುವವರು ಯಾರು ? ದನ ಮೇಯಿಸುವವರು ಯಾರು? ಕಲಿಯಬೇಕೆಂಬ ಮಹತ್ವಕಾಂಕ್ಷೆ ಹೊಂದಿದ್ದ ಗೋಪಾಲಕೃಷ್ಣ ದಿನದಲ್ಲಿ ಎರಡೂ ಕರ್ತವ್ಯಗಳನ್ನೂ ಮಾಡಲು ಸಿದ್ಧರಾಗಿದ್ದರು.

ಬೆಳಿಗ್ಗೆ ಶಾಲೆಯ ಸಮೀಪದಲ್ಲಿ ಮೈದಾನಕ್ಕೆ ದನ ಹೊಡೆದುಕೊಂಡು ಹೋಗುವದು, ದನಗಳನ್ನು ಹುಲ್ಲು ಮೇಯಲು ಬಿಟ್ಟು ತರಗತಿಗೆ ಹೋಗುವದು, ಆಟದ ಸಮಯದಲ್ಲಿ ಮತ್ತೆ ದನಗಳ ಬಳಿಗೆ...! ಅತ್ತ ತರಗತಿಯ ವಿದ್ಯಾರ್ಥಿಯಾದ ಹಾಗೂ ಆಯಿತು. ಇತ್ತ ದನ ಮೇಯಿಸಿದ ಹಾಗೂ ಆಯಿತು. ಸಂಜೆ ದನಗಳನ್ನು ಕೊಟ್ಟಿಗೆಗೆ ಬಿಟ್ಟು, ಕತ್ತಿ ಹಿಡಿದು ಕಾಡಿಗೆ ಹೋಗಿ ಸೌದೆ ತರುವ ಕೆಲಸ. ಈ ಹುಡುಗ ಈ ಕೆಲಸಗಳನ್ನು ಎಂದೂ ಬೇಸರಿಸಿಕೊಂಡು, ಗೊಣಗಿಕೊಂಡು ಮಾಡಲೇ ಇಲ್ಲ. ಬದಲಿಗೆ ಸೌದೆ ತರುವಾಗ, ದನ ಮೇಯಿಸುವಾಗ ತನ್ನ ಕರ್ತವ್ಯ ಶ್ರದ್ಧೆಯಿಂದ ಮಾಡುತ್ತಿದ್ದ ತೃಪ್ತಿ ಹುಡುಗನ ಮುಖದಲ್ಲಿತ್ತು. ಹತ್ತನೆ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ ಗೋಪಾಲಕೃಷ್ಣ, ಕಾಲೇಜು ಸೇರುವ ಬಯಕೆ ವ್ಯಕ್ತ ಪಡಿಸಿದರು. ಪರಿಚಯಸ್ಥರ ಮೂಲಕ ಬೆಂಗಳೂರಿನ ಕಾಲೇಜಿಗೆ ಗೋಪಾಲಕೃಷ್ಣ ಸೇರಿದರು. ಕಾಲೇಜಿಗೆ ಹೋದ ಮೊದಲ ದಿನದ ಎರಡು ತರಗತಿಗಳು ಮುಗಿದಿದ್ದವು. ಕಾಲೇಜು ಕಛೇರಿಯಿಂದ ಬುಲಾವ್ ಬಂತು. "ಫೀಸು ಕಟ್ಟಿದ ನಂತರ ಕಾಲೇಜಿಗೆ ಬಾ" ಎನ್ನುವ ಉತ್ತರ ಗೋಪಾಲಕೃಷ್ಣರ ಅರ್ಧ ದಿನ ಕಾಲೇಜು ಜೀವನಕ್ಕೆ ಕೊನೆ ಹಾಡಿತು.

ಹದಿನೆಂಟು ವರ್ಷದ ಹುಡುಗ ಕೆಲಸಕ್ಕಾಗಿ ಅಲೆದಾಟ. ಸರಿ ಕಾಣದ್ದನ್ನು ಜಪ್ಪಯ್ಯ ಎಂದರೂ ಮಾಡಲಿಚ್ಛಿಸದ ಗುಣ ಗೋಪಾಲಕೃಷ್ಣರದು. ಹಲವಾರು ಕಛೇರಿಗಳಲ್ಲಿ ಕೆಲಸ. ಯಾವುದೂ ಸರಿ ಕಾಣಲಿಲ್ಲ. ಆಗಲೇ 26 ವರ್ಷ ಪ್ರಾಯವಾಗಿತ್ತು. ತನಗಿಷ್ಟವಾದ ಕ್ಷೇತ್ರ ಯಾವುದೆಂಬದರ ಕುರಿತು ಯೋಚಿಸುವ ವಯಸ್ಸು ದಾಟುತಲ್ಲಿತ್ತು.

ಕೊಡಗಿನಲ್ಲಿ ಪತ್ರಿಕೆಗಳೇ ಇಲ್ಲದಿರುವುದು ಗೋಪಾಲಕೃಷ್ಣರ

ಸೂರ್ಯನ ಮಂತ್ರದಿಂದ ಕರ್ಣ

ಕಣ್ಣಿಗೆ ಬಿತ್ತು. ಮನಸ್ಸು ಹುಮ್ಮಸ್ಸು ನೀಡಿತು. ಇದ್ದಬದ್ದ ಹಣವನ್ನೆಲ್ಲಾ ಸೇರಿಸಿ ಪತ್ರಿಕೆ ಹೊರ ತರಲು ಪ್ರಯತ್ನ ಮಾಡಲಾಯಿತು.

1957 ಮಾರ್ಚ್ 4 ರಂದು ಕೊಡಗಿನ ಪ್ರಪಥಮ ದಿನ ಪತ್ರಿಕೆಯಾಗಿ "ಶಕ್ತಿ" ಹೊರ ಬಂದಿತು. ವಿಪರೀತ ಮಳೆಯಿರುವ ಪ್ರದೇಶ. ಬೆಟ್ಟಗುಡ್ಡಗಳಿಂದ ಕೂಡಿದ ಜಿಲ್ಲೆ. ದೂರದೂರದಲ್ಲಿ ಮನೆಗಳಿರುವ ಗ್ರಾಮಗಳು ದೂರದೂರದಲ್ಲಿ ಹಳ್ಳಿಗಳಿರುವ ಜಿಲ್ಲೆ. ಜಾಹೀರಾತಿನ ಬೆಂಬಲ ನೀಡಲು ಕೈಗಾರಿಕೆಗಳೂ ಇಲ್ಲ. ಕೊಡಗಿನ ವಿಶಿಷ್ಟ ಸಂಸ್ಕೃತಿಯಿಂದಾಗಿ ಜಿಲ್ಲೆಯಾಚೆ ಕೊಡಗಿನ ವಿದ್ಯಮಾನಗಳ ಬಗ್ಗೆ ಯಾರಿಗೂ ಆಸಕ್ತಿ ಇಲ್ಲದಿರುವ ಪರಿಸ್ಥಿತಿ. ಇಂತಹ ಒಂದು ತೀರಾ ನಿರಾಶದಾಯಕ ಪರಿಸ್ಥಿತಿಯಲ್ಲಿ ದಿನಪತ್ರಿಕೆಯೊಂದು ಹುಟ್ಟಿಕೊಂಡದ್ದೇ ಒಂದು ವಿಸ್ಮಯದ ವಿಷಯ. ಆಗಿನ ಜನರಿಗೂ ಹಾಗೆಯೇ ಆಯಿತು. ಪತ್ರಿಕೆ ಕೊನೆಯುಸಿರೆಳೆಯುವುದನ್ನೇ ಹೆಚ್ಚಿನವರು ಎದುರು ನೋಡಿದರು. ಪತ್ರಿಕೆ ಎಂಬುದೇ ಒಂದು ಹೊಸ ವಿಷಯವಾಗಿರುವಾಗ ಸುದ್ದಿಗಳು ಕಪ್ಪಕ್ಷರದಲ್ಲಿ ಮುದ್ರಿತವಾಗುವದೇ ಒಂದು ವಿಶೇಷ ಸುದ್ದಿಯಾಗಿರುವಾಗ ಜನ ಹೇಗೆ ತಾನೇ ಪತ್ರಿಕೆಯೊಂದಕ್ಕೆ ಸ್ವಾಗತ ನೀಡಿಯಾರು? ಕೊಡಗಿನಲ್ಲಿ ಆಗ "ಶಕ್ತಿ" ಪತ್ರಿಕೆ ತಮಾಷೆಯ ವಸ್ತುವಾಗಿತ್ತು. ಗೋಪಾಲಕೃಷ್ಣ ಜನರ ದೃಷ್ಟಿಯಲ್ಲಿ ಹಾಸ್ಯ ಮಾಡುವ ಹಾಸ್ಯಗಾರನಾಗಿದ್ದರು!

ಪತ್ರಿಕೆ ಮಡಿಕೇರಿಯ ಪ್ರಥಮ ಮುದ್ರಣಾಲಯ ಉದಯ ಪ್ರೆಸ್‌ನಲ್ಲಿ ಮುದ್ರಣಗೊಳ್ಳುತ್ತಿತ್ತು. ಮುದ್ರಣಾಲಯದ ಬಿಲ್ ಪಾವತಿಗೂ ಪತ್ರಿಕೆಯ ಸಂಪಾದಕರಲ್ಲಿ ಹಣವಿರಲಿಲ್ಲ. ಜೊತೆಗೆ ವರದಿಗಾರರ ಕೊರತೆ ಬೇರೆ. ಸರಿಯಾಗಿ ನಿಲ್ಲದ ಪತ್ರಿಕೆಗೆ ಯಾರು ವರದಿಗಾರರಾಗುತ್ತಾರೆ. ಇವೆಲ್ಲದರ ಒಟ್ಟು ಪರಿಣಾಮ ಗೋಪಾಲಕೃಷ್ಣರಿಗೆ ನಿರಾಸೆ. ಜೀವನದಲ್ಲಿ ತಾನು ನಂಬಿದ್ದ ತತ್ವಗಳು, ಪ್ರಯತ್ನಗಳು ಸೋಲನ್ನಪ್ಪುತ್ತಿರುವಾಗ, ನಾಳಿನ ಬದುಕು ಅಸಾಧ್ಯ ಎನಿಸಿದಾಗ ವ್ಯಕ್ತಿಯೊಬ್ಬ ಏನು ಮಾಡಬಲ್ಲ? ಆತ್ಮಹತ್ಯೆ! ಈ ಹಾದಿಯನ್ನೇ ಗೋಪಾಲಕೃಷ್ಣ.......... ಕೊಡಗಿನ ಪ್ರಥಮ ಪತ್ರಿಕೆಯ ಸಂಪಾದಕ ಆರಿಸಲು ನಿಶ್ಚಯಿಸಿದರು! ಪತ್ರಿಕೆ, ಕುಟುಂಬ, ಪ್ರಬಂಧ ಯಾವದೂ ಬೇಡವೆಂದು ಜೀವ ತೊರೆಯಲು ಹೊರಟ ವ್ಯಕ್ತಿಯನ್ನು 'ಅಗೋಚರ ಶಕ್ತಿ" ತಡೆಯಿತು. ಸಾವಿನೊಡನೆ ಸ್ನೇಹ ಹಸ್ತ ಚಾಚಲು ಹೋದ ವ್ಯಕ್ತಿ ಅದಕ್ಕೆ ನಮಸ್ಕಾರ ಹೇಳಿದರು ! ಮರುದಿನ ಪತ್ರಿಕಾ ಕಛೇರಿಗೆ ಹೋದರು. ಸುದ್ದಿಗಳು ರಸವತ್ತಾಗಿ ಕೊಡಲಾರಂಭಿಸಿದರು. ಆದರೂ, ಪ್ರಯೋಜನವಾಗಲಿಲ್ಲ. ಓದುಗರ ಸಂಖ್ಯೆ ಬೆರಳೆಣಿಕೆಯಷ್ಟೇ ಇತ್ತು. ಗೋಪಾಲಕೃಷ್ಣ ಪ್ರಯೋಗದ ಪ್ರಯತ್ನ ಬಿಡಲಿಲ್ಲ. ಕೊನೆಗೂ ಅವರದರಲ್ಲಿ ಯಶಸ್ವಾದರು. 1960 ರಲ್ಲಿ "ಶಕ್ತಿ" ತನ್ನದೇ ಆದ ಹೆಸರನ್ನು ಪಡೆಯಲಾರಂಭಿಸಿತು. 1961 ರಿಂದ ತನ್ನದೇ ಸ್ವಂತ "ಶಕ್ತಿ" ಮುದ್ರಣಾಲಯದಲ್ಲಿ ಪತ್ರಿಕೆ ಮುದ್ರಣವಾಗುವ ಮಟ್ಟಿಗೆ ಪತ್ರಿಕೆಯ ಆರ್ಥಿಕ ಸ್ಥಿತಿ ಸುಧಾರಿಸಿತು.

ಪತ್ರಿಕೆಯ 'ಬೋರಣ ಬಾಣ' ಅಂಕಣ ಜಿಲ್ಲೆಯಲ್ಲಿ ಆಗ ಹುಟ್ಟಿಕೊಳ್ಳುತ್ತಿದ್ದ ಭ್ರಷ್ಟ ಅಧಿಕಾರಿಗಳ ಪಾಲಿಗೆ ಚುಚ್ಚು ಮದ್ದಾಯಿತು. "ಶಕ್ತಿ ಎಂದರೆ ಗೋಪಾಲಕೃಷ್ಣ.....ಗೋಪಾಲಕೃಷ್ಣ ಎಂದರೆ "ಶಕ್ತಿ" ಎನ್ನುವಷ್ಟು ಪತ್ರಿಕೆ ಹಾಗೂ ಗೋಪಾಲಕೃಷ್ಣ ಹೆಸರು ಮಾಡಿದರು.

ಹಳ್ಳಿ ಮೂಲೆಯ ಪ್ರಾಥಮಿಕ ಶಾಲೆಗೆ 20 ರೂಪಾಯಿಯ ಗಡಿಯಾರ ಕೊಟ್ಟವರ ಹೆಸರೂ "ಶಕ್ತಿ" ಗೆ ಸುದ್ದಿಯೇ, ಚೀನಾ ಭಾರತದ ಮೇಲೆ ಆಕ್ರಮಣ ಮಾಡಿದ ಸುದ್ದಿಯೂ "ಶಕ್ತಿ"ಗೆ ವಾರ್ತೆಯೇ. ಹೀಗೆ "ಶಕ್ತಿ" ಯ ಸುದ್ದಿ ಸಂಗ್ರಹಣೆಗೆ ಎಂದೂ ವ್ಯಾಪ್ತಿ ಇರಲಿಲ್ಲ.

ಭಾರತದ ಮೇಲೆ ಚೀನಾ ಆಕ್ರಮಣ ಮಾಡಿದಾಗ "ಶಕ್ತಿ" ಭಾರತ ಸರಕಾರ ಮತ್ತು ರಕ್ಷಣಾ ಮಂತ್ರಿಯನ್ನು ಕಟುವಾಗಿ ಟೀಕಿಸಿತ್ತು. ಸ್ವತಂತ್ರ್ಯ ಭಾರತದಲ್ಲಿ ಪ್ರಥಮ ಬಾರಿಗೆ ಜಾರಿಗೆ ಬಂದ ಭಾರತದ ರಕ್ಷಣಾ ಕಾನೂನಿನ (ಡಿಐಆರ್) ಪ್ರಕಾರ "ಶಕ್ತಿ" ಯ ಮೇಲೆ ಕೇಂದ್ರ ಸರಕಾರ "ರಾಷ್ಟ್ರ ದ್ರೋಹ" ದ ಆರೋಪ ಹೊರಿಸಲು ಸಜ್ಜಾಯಿತು. ಆ ವೇಳೆಗೆ "ಶಕ್ತಿ" ಸಾವಿರಾರು ರೂ. ಗಳ ರಕ್ಷಣಾ ನಿಧಿಯನ್ನು ತನ್ನ ಓದುಗರಿಂದ ಸಂಗ್ರಹಿಸಿತು. "ಶಕ್ತಿ" ಯ ಪರ ವಹಿಸಿದ್ದ ಕೊಡಗಿನ ಜನರ ಪ್ರಬಲ ಗುಂಪನ್ನು ನೋಡಿ ಸರಕಾರ ಸಂಪಾದಕ ಗೋಪಾಲಕೃಷ್ಣರನ್ನು ಜೈಲಿಗೆ ತಳ್ಳುವ ತನ್ನ ಯೋಚನೆ ಕೈ ಬಿಟ್ಟಿತು. ನಂತರ ಶ್ರೀಮತಿ ಇಂದಿರಾಗಾಂಧಿಯವರ ತುರ್ತು ಪರಿಸ್ಥಿತಿಯನ್ನು "ಶಕ್ತಿ" ಪ್ರಬಲವಾಗಿ ವಿರೋಧಿಸಿತು. ಆಗ ಕೇಂದ್ರ ಸರಕಾರದ ಕಪ್ಪು ಪಟ್ಟಿಗೆ ಎರಡು ಕನ್ನಡ ದಿನಪತ್ರಿಕೆಗಳು ಸೇರಿಕೊಂಡವು. ಎರಡರಲ್ಲಿ "ಶಕ್ತಿ" ಒಂದಾದರೆ " ಕನ್ನಡ ಪ್ರಭ" ಮತ್ತೊಂದು.

ಜಿಲ್ಲೆಯನ್ನು ವಿವಿಧ ದ್ವೀಪಗಳನ್ನಾಗಿ ಮಾಡಿ ಕೊಡಗನ್ನು ನಾಶ ಮಾಡಲಿದ್ದ ಕಂಬದಕಡ ಮತ್ತು ಬರಪೊಳೆ ಎನ್ನುವ ನೀರಾವರಿ ಯೋಜನೆಯನ್ನು ಕೊಡಗಿನ ಜನ ವಿರೋಧಿಸಿದಾಗ ಅವರಿಗೆ ಧ್ವನಿಯಾಗಿ ನಿಂತದ್ದು "ಶಕ್ತಿ. " ಯೋಜನೆಯ ವಿರೋಧದ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಂಡ ಗೋಪಾಲಕೃಷ್ಣ ತಮ್ಮ ಹರಿತ ಬರಹಗಳ ಮೂಲಕ ಸರಕಾರಕ್ಕೆ ಬಿಸಿ ಮುಟ್ಟಿಸಿ ಯೋಜನೆಯ ಸ್ಥಗಿತಕ್ಕೆ ಪ್ರಮುಖ ಕಾರಣರಾದರು.

"ಶಕ್ತಿ" ಗೋಪಾಲಕೃಷ್ಣರ ಗರಡಿ ಮನೆಯಿಂದ ಪಳಗಿದ ಪ್ರಮುಖರಲ್ಲಿ ಕೇಳಿ ಬರುವ ಹೆಸರು ಗುಂಡೂರಾವ್‌ರದು! ಗುಂಡೂರಾವ್ ಸಾರ್ವಜನಿಕ ರಂಗಕ್ಕೆ ಪಾದಾರ್ಪಣೆ ಮಾಡಿದ್ದೇ "ಶಕ್ತಿ"ಯ ಮೂಲಕ. ರಾಜ್ಯದ ಮುಖ್ಯ ಮಂತ್ರಿಯಾಗಿ ತಮ್ಮ ರಂಜಿತ ಜೀವನದಿಂದ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಮೆರೆದಿದ್ದ ಆರ್ ಗುಂಡೂರಾವ್, "ಶಕ್ತಿ" ಪರಿಚಯಿಸಿದ ರಾಜಕಾರಣಿಗಳಲೊಬ್ಬರು. ರಾಜಕೀಯಕ್ಕೆ ಬರುವ ಮುನ್ನ ಗುಂಡೂರಾವ್ 'ಶಕ್ತಿ"ಯ ಕುಶಾಲನಗರದ ವರದಿಗಾರರಾಗಿದ್ದರು. ಗುಂಡೂರಾವ್ ಪತ್ರಿಕಾ ಕ್ಷೇತ್ರ ಪ್ರವೇಶಿಸಿದ್ದೇ ಒಂದು ಆಕಸ್ಮಿಕ.

ಕುಶಾಲನಗರಕ್ಕೆ ಬೇಕಾಗಿದ್ದ ವರದಿಗಾರರಿಗೋಸ್ಕರ ಬಿ. ಎಸ್. ಜಿ. ಅರ್ಹ ವ್ಯಕ್ತಿ ಇದ್ದಾರೆಯೇ ಎಂದು ಕೇಳಲು ಗುಂಡೂರಾಯರ ತಂದೆಯವರನ್ನು ಕಾಣ ಹೋದರು. ಮಾತುಕತೆ ನಡೆಯುತ್ತಿದ್ದಾಗಲೇ ಕೈಯಲ್ಲಿ ಚೆಂಡು ಹಿಡಿದ ಹದಿ ಹರೆಯದ ಯುವಕನೊಬ್ಬ ಮನೆಯೊಳಕ್ಕೆ ಪ್ರವೇಶಿಸಿದ. ಮನೆಗೆ ಬಂದ ಅತಿಥಿಯೊಡನೆ ಮಾತುಕತೆ ನಡೆಸಿದಾಗ ಆ ಹುಡುಗ ತಾನೇ ವರದಿಗಾರನಾಗಲು ಸಿದ್ಧವಿರುವದಾಗಿ ತಿಳಿಸಿದ. ಒಂದೆರಡು ಲೇಖನಗಳನ್ನು ಬರೆದು ಕಳುಹಿಸುವಂತೆ ಹೇಳಿದರು. ನಗರದಲ್ಲಿ ನಡೆಯುತ್ತಿದ್ದ ಪುಂಡರ ಗುಂಪಿನ ದಾಂಧಲೆಯ ಕುರಿತು ಆ ಹುಡುಗ ಉತ್ತಮ ಲೇಖನ ಬರೆದಾಗ ಆತನನ್ನೇ ತಮ್ಮ ಪತ್ರಿಕೆಯ ವರದಿಗಾರನನ್ನಾಗಿಸಿದರು. ಬಿ.ಎಸ್. ಜಿ. ಹಲವು ವರ್ಷ ಪತ್ರಿಕೆಗೆ ವರದಿಗಾರರಾಗಿದ್ದ ಆರ್. ಜಿ. ಬರೆಯುತ್ತಿದ್ದದ್ದು "ಗೆಗೋರಿಯನ್" ಎಂಬ ಹೆಸರಿನಿಂದ. ಹಲವು ಭ್ರಷ್ಟರನ್ನು ಲೇಖನಿಯ ಮೂಲಕ ಮಟ್ಟ ಹಾಕಿದ ಕೀರ್ತಿ ಗುಂಡೂರಾಯರದು. "ಶಕ್ತಿ"ಯಿಂದ ಸಾರ್ವಜನಿಕ ರಂಗದ ಪರಿಚಯವಾಯಿತು. ಊರಿಂದೂರಿಗೆ ಸುತ್ತಿ ಸಾರ್ವಜನಿಕ ಸಂಪರ್ಕ ಹೆಚ್ಚಿದಂತೆ ಇಷ್ಟೊಂದು ಜನ ಬೆಂಬಲವಿರುವಾಗ ರಾಜಕೀಯ ಕ್ಷೇತ್ರಕ್ಕೇಕೆ ಇಳಿಯಬಾರದು? ಮುಖ್ಯಮಂತ್ರಿಯಾದರು. ಸಂಸತ್ ಸದಸ್ಯರೂ ಆದರು. ಸಾರ್ವಜನಿಕ ಸಂಪರ್ಕವನ್ನು ಪತ್ರಕರ್ತನ ಹುದ್ದೆ ಕಲಿಸಿತು. ಪತ್ರಕರ್ತನ ಗುಣಗಳನ್ನು "ಶಕ್ತಿ" ಕಲಿಸಿತು. ಆರ್. ಗುಂಡೂರಾಯರಿಗೆ ಗೋಪಾಲಕೃಷ್ಣ ಗುರುಗಳಿದ್ದಂತೆ". " ಗುಂಡೂರಾವ್ ಎಂದು ಪತ್ರಿಕೆಯನ್ನು ದುರುಪಯೋಗ ಮಾಡಿಕೊಳ್ಳಲಿಲ್ಲ. ಬದಲಿಗೆ ಪತ್ರಿಕೆ ಮೂಲಕ ಊರಿನ ದುಷ್ಟ ಶಕ್ತಿಗಳ ಮೂಲಕ ಸಮರ ಸಾರಿದರು. ಅದರಲ್ಲಿ ಯಶಸ್ಸನ್ನೂ ಕಂಡರು. ಪತ್ರಿಕೆ ಕಂಡ ವಿಶಿಷ್ಟ ವರದಿಗಾರರಲ್ಲಿ ರಾಯರೂ ಒಬ್ಬರು." ಎಂದು ಬಿ. ಎಸ್. ಜಿ. ಈ ವರದಿಗಾರನಿಗೆ ಅಂದೊಂದು ದಿನ ಹೇಳಿದ್ದರು.

ರಾಯರು ಮುಖ್ಯಮಂತ್ರಿಯಾದಾಗ ಬಿ. ಎಸ್. ಜಿ. ಅತ್ಯಂತ ಸಂತಸ ಪಟ್ಟರು. ಆದರೆ, ರಾಯರು ಕೆಲವು ವಿಷಯಗಳಲ್ಲಿ ತಪ್ಪು ಮಾಡುತ್ತಿದ್ದಾರೆ ಎನಿಸಿದಾಗ ಕಟುವಾಗಿ ಟೀಕಿಸಲೂ ಬಿ. ಎಸ್. ಜಿ. ಹಿಂಜರಿಯಲಿಲ್ಲ.

- ಎಚ್. ಟಿ. ಅನಿಲ್

ಯಮನ ಮಂತ್ರದಿಂದ ಧರ್ಮರಾಯ

ರಾಷ್ಟ್ರ ರಕ್ಷಣೆಗಾಗಿ ಕೊಡಗಿನ ಮತ್ತೊಂದು ವೀರ ಯೋಧನ ಬಲಿ

ಅಯ್ಯಂಗೇರಿ ಗ್ರಾಮದ ಬಾರಿಕೆ ಎ. ಪಳಂಗಪ್ಪ ಬಲಿದಾನ



ದೇಶದ ಗಡಿ ಪ್ರದೇಶದಲ್ಲಿ ಉಗ್ರಗಾಮಿ ಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭ ಹಿಮ ಪಾತದಡಿಯಲ್ಲಿ ಸಿಲುಕಿ ಬಲಿಯಾಗುವ ಮೂಲಕ ಬಾರತಾಂಭೆಯ ರಕ್ಷಣೆಗೆ ಬಲಿದಾನಗೈದ ಕೊಡಗಿನ ಯೋಧ ಬಾರಿಕೆ ಎ. ಪಳಂಗಪ್ಪ ಅವರ ಅಂತ್ಯ ಸಂಸ್ಕಾರವು ಸ್ವಗ್ರಾಮವಾದ ಅಯ್ಯಂಗೇರಿ ಯಲ್ಲಿ ಸಕಲ ಸೇನಾ ಗೌರವ ಗಳೊಂದಿಗೆ ನೆರ ವೇರಿತು. "ಪಳಂಗಪ್ಪ ಅಮರ್ ರಹೇ, ಭಾರತ್ ಮಾತಾ ಕೀ ಜೈ" ಎಂಬಿತ್ಯಾದಿ ಸಹಸ್ರ ಕಂಠಗಳ ಘೋಷಣೆಯೊಂದಿಗೆ ಅಗಲಿದ ಯೋಧನಿಗೆ ಕಂಬನಿ ತುಂಬಿದ ಅಂತಿಮ ನಮನ ಸಲ್ಲಿಸಲಾಯಿತು.

ಶ್ರೀನಗರದ ಸೌಗೌಂವ್ ಜಿಲ್ಲೆಯ ಪಟಿಯಾಲ ಉಪ ಠಾಣಾ ವ್ಯಾಪ್ತಿಯ ಪ್ರತಿ ಎಂಬಲ್ಲಿ ಭಾರೀ ಹಿಮಪಾತನದ ನಡುವೆ ವಿದ್ರೋಹಿಗಳನ್ನು ಬೆನ್ನಟ್ಟಲು ಕಾರ್ಯಾಚರಣೆ ನಡೆಸುತ್ತಿದ್ದ ಪೋಸ್ಟ್ ಕಮಾಂಡರ್ ಆಗಿ ಕಾರ್ಯಪಡೆಯ ಮುಖ್ಯಸ್ಥರಾಗಿದ್ದ ಪಳಂಗಪ್ಪ ನೇತೃತ್ವದ ಇತರ ನಾಲ್ವರು ಗಡಿಭದ್ರತಾ ಪಡೆಯ ಸಿಬ್ಬಂದಿಗಳು ತಾ 30-3-2003 ರಂದು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಕರ್ತವ್ಯ ನಿರತರಾಗಿದ್ದ ಸಂದರ್ಭ ಈ ದುರಂತ ಸಂಭವಿಸಿದೆ.

ಈ ಪೈಕಿ ಇಬ್ಬರು ಯೋಧರು ಕಾಲು ಜಾರಿ 50 ಅಡಿ ಪ್ರಪಾತಕ್ಕೆ ಜಾರಿ ಬಿದ್ದಾಗ ಅವರನ್ನು ರಕ್ಷಿಸಲು ಬಂಡೆ ಕಲ್ಲುಗಳಿಗೆ ಹಗ್ಗ ಬಿಗಿದು ಇಳಿದು ಸಾವಿನ ದವಡೆಯಲ್ಲಿ ಸಿಲುಕಿದ್ದವರ ರಕ್ಷಣೆಗೆ ತೊಡಗಿದ್ದ ಸಂದರ್ಭ ಮೇಲಿನಿಂದ ಹಿಮ ಬಂಡೆಗಳು ಇವರ ಮೇಲೆ ಉರುಳಿ ಬಿದ್ದ ಪರಿಣಾಮ ಪಶ್ಚಿಮ ಬಂಗಾಳದ ಮೂವರು, ದೆಹಲಿಯ ಓರ್ವ ಪೇದೆಗಳೊಂದಿಗೆ ಹೆಡ್ ಕಾನ್ಸ್‌ಟೇಬಲ್ ಪಳಂಗಪ್ಪ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದರು ಎಂದು ಶ್ರೀನಗರದಿಂದ ವಿಮಾನದ ಮೂಲಕ ಯೋಧ ಪಳಂಗಪ್ಪ ಅವರ ಪಾರ್ಥಿವ ಶರೀರವನ್ನು ಹುಟ್ಟೂರು ಅಯ್ಯಂಗೇರಿಗೆ ತಂದ ಉತ್ತರ ಪ್ರದೇಶದ ನಿವಾಸಿ ಗಡಿಭದ್ರತಾ ಪಡೆಯ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಎಲ್. ಬಿ. ಚತುರ್ವೇದಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

4-4-2003 ರ ಬೆಳಿಗ್ಗೆ ಬೆಂಗಳೂರಿನಿಂದ ಯೋಧ ಪಳಂಗಪ್ಪ ಅವರ ಪಾರ್ಥಿವ ಶರೀರವನ್ನು ಹೊತ್ತು ತಂದ ಸೇನಾ ವಾಹನವು ಹುಣಸೂರು ಕುಶಾಲನಗರ ಮಾರ್ಗವಾಗಿ ಜಿಲ್ಲೆಗಪ್ರವೇಶಿಸಿತು. ಈ ವಾಹನವು ಕುಶಾಲನಗರ ಕೊಪ್ಪ ಗೇಟ್ ಬಳಿ ಬರುತ್ತಿದ್ದಂತೆ ಕುಶಾಲನಗರ ಪೊಲೀಸರು ಹಾಗೂ ಭಾಗಮಂಡಲ ಕಂದಾಯ ಇಲಾಖಾಧಿಕಾರಿ ರಂಗಪ್ಪ ಅವರು ಬರಮಾಡಿಕೊಂಡರು.

ಮಡಿಕೇರಿಯ ಪುರಸಭೆಯಲ್ಲಿ ಬೆಳಿಗ್ಗೆ 6 ರಿಂದ 8 ಗಂಟೆಯವರೆಗೆ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಈ ಸಂದರ್ಭ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಯಂ. ಸಿ. ನಾಣಯ್ಯ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್, ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ ಹಾಗೂ ಮಡಿಕೇರಿ ಪುರಸಭೆಯ ಉಪಾಧ್ಯಕ್ಷರು, ವಿಪಕ್ಷ ನಾಯಕರು ಹಾಗೂ ಸದಸ್ಯರುಗಳು ಮಾಲಾರ್ಪಣೆ ಮಾಡಿ ಗೌರವ ಅರ್ಪಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಶಿವಪ್ರಕಾಶ್, ಪೊಲೀಸ್ ಉನ್ನತಾಧಿಕಾರಿ ಕೆ. ವಿ. ಶರತ್‌ಚಂದ್ರ, ಮಡಿಕೇರಿ ತಾಲ್ಲೂಕು ತಹಶೀಲ್ದಾರ್ ವಿ. ಎಲ್. ಹೆಗಡೆ, ಪುರಸಭಾ ಅಧ್ಯಕ್ಷೆ ಕಾವೇರಮ್ಮ ಸೋಮಣ್ಣ, ಜಿ.ಪಂ. ಸದಸ್ಯರು,ಯೋಜನಾಧಿಕಾರಿ ಸಿದ್ದಪ್ಪ, ನಾಗರಿಕರು ಮಾಲಾರ್ಪಣೆ ಮಾಡಿ ಅಗಲಿದ ಯೋಧನಿಗೆ ಗೌರವ ಸಲ್ಲಿಸಿದರು. ಆ ನಂತರ ಸೇನಾ ವಾಹನದಲ್ಲಿ ಪಳಂಗಪ್ಪ ಅವರ ಪಾರ್ಥಿವ ಶರೀರವನ್ನು ಸ್ವಗ್ರಾಮ ಅಯ್ಯಂಗೇರಿಗೆ ಭಾಗಮಂಡಲದ ಮೂಲಕ ತರಲಾಯಿತು. ಈ ಸಂದರ್ಭ ಭಾಗಮಂಡಲದಲ್ಲಿ ಕೆಲಹೊತ್ತು ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಈ ಸಂದರ್ಭ ಜಿ. ಪಂ. ಸದಸ್ಯ ಹೊಸೂರು ಸತೀಶ್‌ಕುಮಾರ್, ಗ್ರಾ. ಪಂ. ಅಧ್ಯಕ್ಷ ಬಿ. ಕೆ. ಪ್ರಭಾಕರ, ಮಾಜಿ ಶಾಸಕ ಡಿ. ಎಸ್. ಮಾದಪ್ಪ ಹಾಗೂ ನಾಗರಿಕರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಆ ಬಳಿಕ ಅಯ್ಯಂಗೇರಿಯ ಮುಖ್ಯ ರಸ್ತೆಯಲ್ಲಿ ಇಲ್ಲಿನ ಜಮಾಅತ್ ವತಿಯಿಂದ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹೂಗುಚ್ಛವಿರಿಸಿ ಗೌರವ ಸಲ್ಲಿಸಿ ಬರಮಾಡಿಕೊಂಡರು. 10 ಗಂಟೆಗೆ ಹುತಾತ್ಮ ಯೋಧ ಪಳಂಗಪ್ಪ ಅವರ ಪಾರ್ಥಿವ ಶರೀರ ಹೊತ್ತಿದ್ದ ಸೇನಾ ವಾಹನ ಯೋಧನ ಸ್ವಗ್ರಾಮ ದಾರಿಯಲ್ಲಿ ತೆರಳಲಾಗದೆ ದಾರಿ ಮಧ್ಯೆ ನಿಲ್ಲಬೇಕಾಯಿತು. ಕೂಡಲೇ ಸ್ಥಳೀಯರೊಬ್ಬರ ಜೀಪಿನಲ್ಲಿ ಪಳಂಗಪ್ಪ ಅವರ ಮೃತದೇಹವನ್ನು 10-30 ಗಂಟೆಗೆ ಸ್ವಗ್ರಾಮಕ್ಕೆ ಸಾಗಿಸಲಾಯಿತು.

ಹುತಾತ್ಮ ಯೋಧ ಪಳಂಗಪ್ಪ ಅವರ ಪಾರ್ಥಿವ ಶರೀರ ಮನೆಗೆ ತಲುಪುತ್ತಲೇ ತಂದೆ ತಾಯಿ, ಪತ್ನಿ, ಸಹೋದರಿಯರ ದುಃಖದ ಕಟ್ಟೆಯೊಡೆಯುವದರೊಂದಿಗೆ ರೋಧಿಸುತ್ತಿದ್ದ ದೃಶ್ಯ ಕಲ್ಲು ಹೃದಯವನ್ನು ಕರಗಿಸುವಂತಿತ್ತು. ಸಂಬಂಧಿಕರು ಸಮಾಧಾನ ಪಡಿಸಲು ಯತ್ನಿಸಿದರೂ ಅದು ಫಲಕಾರಿ ಯಾಗಲಿಲ್ಲ. 11 ವರ್ಷ ಸೇವೆ ಸಲ್ಲಿಸಿದ ಮೃತ ಯೋಧ ಪಳಂಗಪ್ಪ ಅವರ ತಂದೆ ಬಾರಿಕೆ ಅಯ್ಯಣ್ಣ, ತಾಯಿ ಚೋಮವ್ವ, ಪತ್ನಿ ಕವಿತ ಅವರುಗಳು ತೀವ್ರವಾಗಿ ದುಃಖಿಸುವದರೊಂದಿಗೆ ಮನೆಯ ಆವರಣದಲ್ಲಿ ಸೇರಿದ್ದ ಅಪಾರ ಸಂಖ್ಯೆಯ ನಾಗರಿಕರ ಕಣ್ಣಂಚಿನಲ್ಲಿ ನೀರೂರಿಸಿದ್ದ ದೃಶ್ಯ ಕಂಡು ಬಂದಿತು.

ಹುತಾತ್ಮ ಯೋಧನ ಸ್ವಗೃಹಕ್ಕೆ ಆಗಮಿಸಿದ ಮಡಿಕೇರಿ ತಾಲ್ಲೂಕು ತಹಶೀಲ್ದಾರ್ ವಿ. ಎಲ್. ಹೆಗಡೆ ಅವರು, ಜಿಲ್ಲಾಡಳಿತದ ಪರವಾಗಿ ಜಿ. ಪಂ. ಅಧ್ಯಕ್ಷ ಪಾಪು ಸಣ್ಣಯ್ಯ, ಪುರಸಭಾ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣ, ಮಾಜಿ ಶಾಸಕ ಡಿ. ಎಸ್. ಮಾದಪ್ಪ, ಜಿ. ಪಂ. ಸದಸ್ಯ ಹೊಸೂರು ಸತೀಶ್‌ಕುಮಾರ್, ಭಾಗಮಂಡಲ ಗೌಡ ಸಮಾಜದ ಆಡಳಿತ ಮಂಡಳಿ ಪದಾಧಿಕಾರಿಗಳು, ನಾಪೋಕ್ಲು ಗ್ರಾ. ಪಂ. ಮಾಜಿ ಅಧ್ಯಕ್ಷ ಕೆ. ಕೆ. ಗಣೇಶ್, ಸಿದ್ಧಾಪುರ ಗ್ರಾ. ಪಂ. ಅಧ್ಯಕ್ಷ ಪುಟ್ಟಸ್ವಾಮಿ, ಆರಾಧನ ಸಮಿತಿ ಅಧ್ಯಕ್ಷ ರವಿ ಹೆಬ್ಬಾರ್, ಪಾಣತಲೆ ವಿಶ್ವನಾಥ್, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಾಗರಿಕರು, ಗ್ರಾಮಸ್ಥರು ಹೂಗುಚ್ಛವಿರಿಸಿ ಅಗಲಿದ ಯೋಧನಿಗೆ ಗೌರವ ನಮನ ಸಲ್ಲಿಸಿದರು.

ಗೌಡ ಸಂಪ್ರದಾಯದಂತೆ 12 ಗಂಟೆಗೆ ಮನೆಯಿಂದ ಸುಮಾರು 200 ಮೀಟರ್ ದೂರದಲ್ಲಿ ಅವರ ತೋಟದಲ್ಲಿಯೇ ಅಂತಿಮ ವಿಧಿ ವಿಧಾನಗಳ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು. ಹುತಾತ್ಮ ಯೋಧ ಪಳಂಗಪ್ಪ ಅವರ 3 ವರ್ಷದ ಮಗ ಹರ್ಷಿತ್ ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು.

ಈ ಸಂದರ್ಭ ಗಡಿ ಭದ್ರತಾ ಪಡೆಯ ಇನ್ಸ್‌ಪೆಕ್ಟರ್ ಕಿಶನ್‌ಚಂದ್ ಅವರ ನೇತೃತ್ವದ ಸೇನಾ ಸಿಬ್ಬಂದಿ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಸಶಸ್ತ್ರ ಪಡೆಯ ತುಕಡಿ 3 ಸುತ್ತು ಕುಶಲತೋಪು ಸಿಡಿಸಿ ಹುತಾತ್ಮ ಯೋಧ ಪಳಂಗಪ್ಪ ಅವರಿಗೆ ಗೌರವ ರಕ್ಷೆ ನೀಡಿತು. ಇದರೊಂದಿಗೆ ರಾಷ್ಟ್ರ ರಕ್ಷಣೆಯಲ್ಲಿ ಮಡಿದ ಕೊಡಗಿನ ವೀರ ಯೋಧರ ಸಾಲಿಗೆ ಮತ್ತೊಂದು ಚೇತನ ಸೇರ್ಪಡೆಗೊಂಡಿತು.

ಚಿತ್ರ: ಸದಾನಂದ ಗೌಡ, ವರದಿ: ಇ. ಕೆ. ಟಿ.

ವಾಯುವಿನ ಮಂತ್ರದಿಂದ ಭೀಮಸೇನ

ಅಖಂಡ ಕರ್ನಾಟಕದ ಪರಿಕಲ್ಪನೆಯೊಂದಿಗೆ ಕನ್ನಡ ಏಳಿಗೆಗೆ ಶ್ರಮಿಸೋಣಾ.

ಮಡಿಕೇರಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪ್ರೊ॥ ಕೋಡಿ ಕುಶಾಲಪ್ಪಗೌಡ ಕರೆ.

ಹರಿದು ಹಂಚಿಹೋಗಿದ್ದ ಕನ್ನಡನಾಡು ಏಕೀಕರಣಗೊಂಡು ಹಲವು ವರ್ಷಗಳೇ ಕಳೆದಿವೆ. ಅಖಂಡ ಕರ್ನಾಟಕ ರಚನೆಯಾದರೂ, ಪ್ರಾದೇಶಿಕ ಅಸಮತೋಲನದ ಭೇದ-ಭಾವ ಹಾಗೂ ವಿವಿಧ ರಾಜಕೀಯ ಪಕ್ಷಗಳ ಕಾದಾಟದಿಂದ ಕನ್ನಡ ಭಾಷೆ, ಸಾಹಿತ್ಯ ನಿರೀಕ್ಷಿತ ಅಭಿವೃದ್ಧಿ ಕಾಣುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ ಮಡಿಕೇರಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಪ್ರೊ. ಕೋಡಿ ಕುಶಾಲಪ್ಪ ಗೌಡ ಅವರು, ರಾಷ್ಟ್ರಕವಿ ಕುವೆಂಪು ಅವರು ಕಂಡಿದ್ದ ಅಖಂಡ ಕರ್ನಾಟಕದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ನಾವೆಲ್ಲರೂ ಕಟಿಬದ್ಧರಾಗುವ ಮೂಲಕ ಕನ್ನಡದ ಏಳಿಗೆಗೆ ಶ್ರಮಿಸುವ ಅಗತ್ಯವಿದೆ ಎಂದು ದಿನಾಂಕ 20-4-2003 ರಂದು ಕರೆ ನೀಡಿದರು.

ಮಡಿಕೇರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಮರಗೋಡು ವ್ಯಾಪ್ತಿಯ ವಿವಿಧ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಮರಗೋಡುವಿನ ಪ್ರಾಥಮಿಕ ಶಾಲಾ ಮೈದಾನದಲ್ಲಿ ದಿ. ಸಂಜೀವಶೆಟ್ಟಿ ಸಭಾಂಗಣದ ಕವಿ ಪಂಜೆ ಮಂಗೇಶರಾಯ ಸ್ಮಾರಕ ವೇದಿಕೆಯಿಂದ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ಸಾಹಿತ್ಯಾಸಕ್ತರಿಗೆ ಹಾಗೂ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ಜರುಗುತ್ತಿರುವದು ಸಂತಸದ ಸಂಗತಿ ಎಂದರಲ್ಲದೆ, ಕನ್ನಡಾಭಿಮಾನಿಗಳು ಒಂದೆಡೆ ಕಲೆತು ಚರ್ಚಿಸಲು ಅನುವು ಮಾಡಿಕೊಡಲಿದೆ ಎಂದರು.

ಅಗ್ಗದ, ಅಶ್ಲೀಲ ಮನರಂಜನೆಗೆ ಶರಣಾಗುವ ಬದಲು ಸುಸಂಸ್ಕೃತದ ಕನ್ನಡ ಸಾಹಿತ್ಯ ದತ್ತ ಆಕರ್ಷಿತರಾಗುವ ಅಗತ್ಯವಿದೆ ಎಂದ ಕುಶಾಲಪ್ಪ ಗೌಡ ಅವರು ಕೊಡಗಿನ ಸಾಹಿತ್ಯ ಚಟುವಟಿಕೆಗಳಿಗೆ ಉತ್ತೇಜನ ಕಡಿಮೆ, ಹಾಗಿದ್ದೂ ಉದಯೋನ್ಮುಖ ಪ್ರತಿಭೆಗಳು ಕನ್ನಡ ಸಾಹಿತ್ಯ ಸಮ್ಮೇಳನದ ಮೂಲಕ ಮೇಲೆ ಬರಲು ಸಹಕಾರಿಯಾಗಲಿದೆ ಎಂದರು. ಏಳು ಜ್ಞಾನಪೀಠ ಪ್ರಶಸ್ತಿ ಪಡೆಯುವ ಮೂಲಕ ಕನ್ನಡ ಸಾಹಿತ್ಯಲೋಕ ಶ್ರೀಮಂತವಾಗಿದೆ ಎಂದೂ ಪ್ರಶಂಸಿಸಿದರು.

ಕನ್ನಡ ಪರಭಾವನೆ ಅಗತ್ಯ :

ಸಮ್ಮೇಳನವನ್ನು ಉದ್ಘಾಟಿಸಿದ ನಿವೃತ್ತ ಪ್ರಾಂಶುಪಾಲರಾದ ಮಹಾಬಲೇಶ್ವರ ಭಟ್ ಅವರು ಮಾತನಾಡಿ, ಸಂಸ್ಕೃತಿ, ಸಮೃದ್ಧಿ ಹಾಗೂ ಶಾಂತಿ ಈ ಮೂರು ಅಂಶಗಳನ್ನು ಕನ್ನಡ ಪರ ಭಾವನೆಯಿಂದ ಪ್ರತಿನಿಧಿಸುವದೇ ಕನ್ನಡದ ಏಳಿಗೆಗೆ ನಾಂದಿಯಾಗಲಿದೆ ಎಂದರು. ಸಮ್ಮೇಳನದ ಪ್ರಯುಕ್ತ ಹೊರ ತಂದಿರುವ 'ಸೌಗಂಧ' ಹೆಸರಿನ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್. ಸಿ. ರಾಜಶೇಖರ್ ಅವರು ಕನ್ನಡ ಸಾಹಿತ್ಯ-ಭಾಷೆ ಬಗ್ಗೆ ಅರಿವು ಹೊಂದುವದು ಕನ್ನಡಿಗರಾದ ನಮ್ಮ ಆದ್ಯ ಕರ್ತವ್ಯ ಎಂದರು. ಮುಂದುವರಿದು, ಸಾಹಿತ್ಯದ ಮೂಲಕ ಇಡಿಯಾಗಿ ಪಡೆದು ಕನ್ನಡವನ್ನು ಕಟ್ಟಬೇಕಿದೆ. ಕನ್ನಡಕ್ಕಾಗಿ ದುಡಿದವರ ಸ್ಮರಣೆ ಮಾಡಿಕೊಳ್ಳುವ ಮುಖೇನ ಕನ್ನಡಾಂಬೆಯ ರಥವನ್ನು ಒಟ್ಟಾಗಿ ಎಳೆಯೋಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡತ್ವ, ಅಳವಡಿಕೆ ಅವಶ್ಯ :

ಹಿಂದಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಾಹಿತಿ ಎಡುರ್ಕಳ ಶಂಕರನಾರಾಯಣ ಭಟ್ ಅವರು ಆಶಯ ಭಾಷಣ ಮಾಡುತ್ತಾ ಕಳೆದ ಸಾಹಿತ್ಯ ಸಮ್ಮೇಳನಕ್ಕೆ ಹೋಲಿಸಿದಲ್ಲಿ ಕನ್ನಡ ಪರ ಜಾಗೃತಿ ಮೂಡಿರುವದು ಗೋಚರಿಸುತ್ತಿದೆ, ಕನ್ನಡಿಗರೆಂಬ ಅಭಿಮಾನ ಹಾಗೂ ಭಾಷೆ ಬಗ್ಗೆ ಸ್ವಾಭಿಮಾನ ಬೆಳೆಸಿಕೊಳ್ಳಬೇಕಿದೆ. ಕನ್ನಡತ್ವವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆಯಿತ್ತರಲ್ಲದೆ, ಕನ್ನಡ ನೆಲ-ಭಾಷೆ ಬಗ್ಗೆ ಗೌರವ ಹೊಂದುವ ಮೂಲಕ ಕ. ಸಾ. ಪ. ದ ಸದಸ್ಯರಾಗಿ ಮನೆ -ಮನದಲ್ಲಿ ಭಾಷಾಭಿವೃದ್ಧಿಗೆ ಚಿಂತಿಸಬೇಕಾದ ಅಗತ್ಯವಿದೆ ಎಂದರು.

ಸಹಕಾರದ ಪ್ರಶಂಸೆ : ಪ್ರಾಸ್ತಾವಿಕ ನುಡಿಯನಾಡಿದ ಕ. ಸಾ. ಪ. ದ ತಾಲ್ಲೂಕು ಅಧ್ಯಕ್ಷ ಟಿ. ಪಿ. ರಮೇಶ್ ಅವರು, ಕನ್ನಡ ತಾಯಿಯ ಋಣ ತೀರಿಸಲು ಇಂತಹ ಸಮ್ಮೇಳನಗಳಲ್ಲಿ ಸರ್ವರೂ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು. ಸಮ್ಮೇಳನದ ಯಶಸ್ಸಿಗೆ ಮರಗೋಡು ವ್ಯಾಪ್ತಿಯ ನಾಗರಿಕರಿಂದ ದೊರೆತ ಸಹಕಾರವನ್ನು ಪ್ರಶಂಸಿಸಿದ ರಮೇಶ್, ಸರ್ಕಾರದ ನೆರವಿಗೆ ಬದಲಾಗಿ ಕನ್ನಡಾಭಿಮಾನಿಗಳ ಸಹಕಾರದಿಂದ ಸಮ್ಮೇಳನ ನಡೆಯುತ್ತಿದೆ ಎಂದರು.

ಸಮ್ಮೇಳನದ ಹಿನ್ನಲೆಯಲ್ಲಿ ಮರಗೋಡುವಿನಲ್ಲಿ ದಿ. ತೋಟಂಬೈಲು ರಾಘವೇಂದ್ರ, ದಿ. ಬಿ. ಎಸ್. ಗೋಪಾಲಕೃಷ್ಣ, ದಿ. ಬಿ. ಡಿ. ಸುಬ್ಬಯ್ಯ ಹಾಗೂ ಬಿ. ಎಸ್. ಕುಶಾಲಪ್ಪ ಅವರುಗಳ ಹೆಸರಿನಲ್ಲಿ ದ್ವಾರಗಳನ್ನು ಸ್ಥಾಪಿಸಲಾಗಿದೆ ಎಂದು ವಿವರಿಸುತ್ತಾ ಚೆರಿಯಮನೆ ಪೊನ್ನಪ್ಪ ಸ್ಮಾರಕ ಮುಖದ್ವಾರವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಸಾಹಿತ್ಯ ಪರಿಷತ್ ಧ್ವಜಾರೋಹಣ ಮಾಡಿದ ಪಳಂಗಂಡ ಮುತ್ತಪ್ಪ. ಕನ್ನಡ ಧ್ವಜ ಹಾರಿಸಿದ ಪಿ. ಬಿ. ಶ್ರೀನಿವಾಸ್, ರಾಷ್ಟ್ರ ಧ್ವಜಾರೋಹಣ ಮಾಡಿದ ಬಿ.ಪಿ. ಕಾವೇರಪ್ಪ ಉಪಸ್ಥಿತರಿದ್ದರು. ಸಮ್ಮೇಳನದ ಆರಂಭದಲ್ಲಿ ಮರಗೋಡು ಮಾದರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಸ್ವಾಗತ ಗೀತೆ ಹಾಗೂ ಭಾರತಿ ಪ. ಪೂ. ಕಾಲೇಜು ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು. ಸಮ್ಮೇಳನದ ಅಧ್ಯಕ್ಷ ಎಂ. ಕೆ. ವೆಂಕಟೇಶ್ ಸ್ವಾಗತಿಸಿದರು. ಬಿ. ಎ. ನಾರಾಯಣಗೌಡ ಕಾರ್ಯಕ್ರಮ ನಿರೂಪಿಸಿದರೆ ಉಳುವಾರನ ಜಿ. ಹೀರಾಲಾಲ್ ವಂದಿಸಿದರು.

ಇದಕ್ಕೂ ಮೊದಲು ಭಾರತಿ ಪ. ಪೂ. ಕಾಲೇಜು ಬಳಿಯಿಂದ ಸಮ್ಮೇಳನಾಧ್ಯಕ್ಷರನ್ನು ತೆರೆದ ಜೀಪಿನಲ್ಲಿ ಪೂರ್ಣ ಕುಂಭ ಸ್ವಾಗತದೊಂದಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ಈ ಸಂದರ್ಭ ವಿವಿಧ ಕಲಾ ತಂಡಗಳು ಹಾಗೂ ನೂರಾರು ಕನ್ನಡಾಭಿಮಾನಿಗಳು ಪಾಲ್ಗೊಂಡಿದ್ದರು.

\- ಸಂಗಾತಿ

ದೇವೇಂದ್ರನ ಮಂತ್ರದಿಂದ ಅರ್ಜುನ

ರಾಷ್ಟ್ರೀಯ ಮಟ್ಟದಲ್ಲಿ ಅರಳುತ್ತಿರುವ ಪ್ರತಿಭೆ ಉಳುವಾರನ ಧನುಜ ಜನಾರ್ಧನ.



ಮಡಿಕೇರಿ ತಾಲ್ಲೂಕು, ಕಾಂತೂರು ಗ್ರಾಮ ಉಳುವಾರನ ಜನಾರ್ಧನ ಮತ್ತು ಲೀಲಾವತಿ ದಂಪತಿಗಳಿಗೆ ಮೂರು ಜನ ಮಕ್ಕಳು, ಒಂದು ಗಂಡು ಎರಡು ಹೆಣ್ಣು ಮಕ್ಕಳು. ಜನಾರ್ಧನ ರವರು ಮಾಜಿ ಸೈನಿಕರು. ಹಿರಿಮಗ ಸೇನೆಯಲ್ಲಿ ಕಾರ್ಯ ನಿರ್ವಹಿಸು ತ್ತಿರುವನು. ಕಿರಿಯವಳು ಏಳನೆ ತರಗತಿಯ ವಿದ್ಯಾರ್ಥಿನಿ. ಪ್ರಥಮ ಪುತ್ರಿ ಧನುಜ. ಈಕೆ ಹುಟ್ಟಿದ್ದು 1982 ಜನವರಿ 2 ರಂದು. ಇವಳು ಪಿರಿಯಾಪಟ್ಟಣ ಹಾಗೂ ಹುಣಸೂರಿನ ಶಾಲೆಗಳಲ್ಲಿ ಓದಿ, ಎಸ್. ಎಸ್. ಎಲ್. ಸಿ., ಪಿ. ಯು. ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ ಈಗ ಬೆಂಗಳೂರಿನಲ್ಲಿ ಬಿ. ಎಸ್ಸಿ., ಅಗ್ರಿಕಲ್ಚರ್ 2 ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿನಿ.

ಕಳೆದ ಫೆ. 7ರಿಂದ 11ರ ತನಕ ಆಂಧ್ರ ಪ್ರದೇಶದ ವಾರಂಗಲ್‌ನ ಕಾಕತೀಯ ಯೂನಿವರ್ಸಿಟಿಯಲ್ಲಿ ರಾಷ್ಟ್ರ ಮಟ್ಟದ ನಾಟಕ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ಪಂಜಾಬ್ ತಂಡ ಪಡೆದು ಕೊಂಡರೆ, ಧನುಜ ಅಭಿನಯಿಸಿದ "ಬೂಟು ಬಂದೂಕುಗಳ ನಡುವೆ" ಎಂಬ ದೃಶ್ಯ ರೂಪಕವು 2 ನೇ ಸ್ಥಾನ ಪಡೆಯಿತು. ಇದು ಸ್ವಾತಂತ್ರ್ಯ ಪೂರ್ವದ ಚಳುವಳಿಯಲ್ಲಿ ನಡೆದ ಘಟನೆಯನ್ನು ಆದರಿಸಿತ್ತು. ಈ ನಾಟಕ ಮಲೆನಾಡಿನ ಒಂದು ಸಂಸಾರದ ಕಥೆ. ಇದರಲ್ಲಿ ಧನುಜಳದು ಸ್ವಾತಂತ್ರ್ಯ ಚಳುವಳಿಕಾರನ ಹೆಂಡತಿಯ ಪಾತ್ರ. ಮೊದಲು ನಾಟಕ ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆ (ಮಂಗಳೂರು)ಯಲ್ಲಿ ಮೊದಲ ಸ್ಥಾನ ಪಡೆದು, ದಕ್ಷಿಣ ವಲಯದ ಯುವ ಜನೋತ್ಸವದಲ್ಲಿ ಭಾಗವಹಿಸಲು ಅರ್ಹತೆ ಪಡೆದು 28 ನಾಟಕಗಳ ಜೊತೆಗೆ ಸ್ಪರ್ಧಿಸಿ ಪ್ರಥಮ ಸ್ಥಾನ ಪಡೆಯಿತು. ಚೆನ್ನೈನ ಸತ್ಯಭಾಮಾ ಡೀಮ್ಡ್ ಯೂನಿವರ್ಸಿಟಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಲು ಅರ್ಹತೆ ಪಡೆಯಿತು. ಹಾಗೂ ರಾಷ್ಟ್ರಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆಯಿತು. ಸಂಗಾತಿ ಪರವಾಗಿ ಈ ಲೇಖನದ ಲೇಖಕರು ಧನುಜಳನ್ನು ಭೇಟಿಯಾದಾಗ ತನ್ನ ಮನಸ್ಸಿನ ವಿಶಾಲತೆಯನ್ನು ಪ್ರದರ್ಶಿಸಿ ವಿವರ ನೀಡಿದ್ದಾರೆ.

ಈ ನಾಟಕದ ನಿರ್ವಹಣೆ ಯಾರದು ನಿಮಗೆ ಈ ಪಾತ್ರದಿಂದ ತೃಪ್ತಿ ಸಿಕ್ಕಿದೆಯಾ ಎಂದು ಪ್ರಶ್ನಿಸಿದಾಗ, ಈ ನಾಟಕವನ್ನು "ಭೂಮಿಕಾ" ತಂಡ ನಿರ್ಮಿಸಿ ಮಾಲತೇಶ ಬಡಿಗರ್ ನಿರ್ದೇಶಿಸಿದ್ದಾರೆ. ಈ ನಾಟಕದಲ್ಲಿ ನಟಿಸಿದ ಎಲ್ಲಾ ಪಾತ್ರ ವರ್ಗದವರು ಕೂಡ ತಮ್ಮ ಶಕ್ತಿ ಮೀರಿ ಈ ಕಲೆಗೆ ಜೀವ ತುಂಬಿ ಪ್ರೇಕ್ಷಕರ ಗಮನವನ್ನು ಸೆಳೆದಿದ್ದಾರೆ ಇದರಲ್ಲಿನ ನನ್ನ ಪಾತ್ರ ತುಂಬಾನೆ ತೃಪ್ತಿ ಹಾಗೂ ಸಂತೋಷ ನೀಡಿದೆ ಎಂದು ಮನದುಂಬಿ ಹೇಳಿದರು.

ನಿಮ್ಮ ಈ ಕಲೆಗೆ ಮುಖ್ಯವಾಗಿ ಯಾರ ಪ್ರೋತ್ಸಾಹ ಎಂದು ಕೇಳಿದಾಗ ಮುಖ್ಯವಾಗಿ ದೇವರ ಕೃಪೆ, "ಭೂಮಿಕಾ" ತಂಡದ ಸದಸ್ಯರು, ಸಹಪಾಠಿಗಳು ಕಾರಣ ಹಾಗೂ ಗುರುಹಿರಿಯರ ಆಶೀರ್ವಾದ ಎನ್ನುತ್ತಾಳೆ. ಯುವ ಜನೋತ್ಸವ ಟೀಮ್‌ಗೆ ತುಂಬಾ ಸಹಾಯ ಮಾಡಿದ D.D.S.W. ಮತ್ತು ಪ್ರೊ. ಕೆದಂಬಾಡಿ ಸೋಮಣ್ಣನವರಿಗೆ, ಅಧ್ಯಾಪಕ ವರ್ಗದವರಿಗೆ ಹಾಗೂ ಪಾತ್ರವರ್ಗದವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತಾಳೆ.

ತನ್ನ ಚಿಕ್ಕ ವಯಸ್ಸಿನಿಂದ ಹಿರಿಯರ ನುಡಿ ಮುತ್ತುಗಳನ್ನು ಸಂಗ್ರಹಿಸುವುದು, ಹಾಡು ಕೇಳುವುದು, ಲೇಖನ ಬರೆಯುವುದು ಅದರಲ್ಲೂ ವಿಜ್ಞಾನಕ್ಕೆ ಸಂಬಂಧಪಟ್ಟ ಲೇಖನವನ್ನು ಬರೆಯುವುದು ಇವಳ ಹವ್ಯಾಸಗಳು. ಈ ಹಿಂದೆ ಕೆಲವು ಲೇಖನಗಳು ಕೊಡಗು ಸಂಗಾತಿಯಲ್ಲಿ ಪ್ರಕಟವಾಗಿರುತ್ತದೆ. ಕೈಗಾರಿಕೆಗಳು, ಚಿಕ್ಕಪುಟ್ಟ ಮನೆ ಕೆಲಸ ಮಾಡುವುದು ಮತ್ತು ಮನೆಯ ಮುಂದೆ ಹೂ ಗಿಡಗಳನ್ನು ನೆಟ್ಟು ಅಲಂಕರಿಸುವುದು ಇಂತಹ ಕೆಲಸಗಳು ಮನಸ್ಸಿಗೆ ತೃಪ್ತಿ ಸಿಗುತ್ತದೆ ಮತ್ತು ಆರೋಗ್ಯಕರವಾಗಿರಲು ಹಾಗೂ ಮನಸ್ಸು ಉಲ್ಲಾಸದಾಯ ವಾಗಿರಲು ಪ್ರಕೃತಿ ಮತ್ತು ಪರಿಸರ ಸಹಕಾರವಾಗುತ್ತದೆ ಎಂದು ಹೇಳುತ್ತಾಳೆ.

ಶಾಲಾ ದಿನಗಳಲ್ಲಿ ತನ್ನ ಅಭಿನಯ ಚಾತುರ್ಯತೆಯನ್ನು ಪ್ರದರ್ಶಿಸುವ ಅವಕಾಶ ಸಿಕ್ಕಿದೆಯಾ ಎಂಬ ಪ್ರಶ್ನೆಗೆ ಇಲ್ಲ ಅಂತಹ ಅವಕಾಶ ನನಗೆ ಒದಗಿ ಬಂದಿಲ್ಲ. ಕೆಲವೊಂದು ನಾಟಕಗಳನ್ನು ಮತ್ತು ಮನೋರಂಜನೆ ಕಾರ್ಯಕ್ರಮದಲ್ಲಿ ನಟಿಸುವವರನ್ನು ಕಂಡಾಗ ನಾನು ನಟಿಸಬೇಕೆಂಬ ಆಸೆ ನನ್ನ ಮನಸ್ಸಿನಲ್ಲಿ ಮನೆ ಮಾಡಿತ್ತು. ಆದರೆ ಕಾಲೇಜಿನ ದಿನಗಳಲ್ಲಿ ಇಂತಹ ಅವಕಾಶ ನನಗೆ ಸಿಕ್ಕಿದೆ. ನನ್ನ ಗೆಳತಿಯರು ಮತ್ತು ಉಪನ್ಯಾಸಕರ ಸಹಕಾರದಿಂದ ನನ್ನ ಪಾತ್ರಗಳಿಗೆ ಸ್ಫೂರ್ತಿ ಸಿಕ್ಕಂತಾಗಿದೆ ಎಂದು ಹೇಳುತ್ತಾಳೆ.

ಯಾವ ತರಹದ ಪಾತ್ರ ಮಾಡಲು ಇಷ್ಟ ಪಡುತ್ತೀರಾ ಎಂದು ಪ್ರಶ್ನಿಸಿದಾಗ ಎಲ್ಲಾ ತರಹದ ಪಾತ್ರಕ್ಕೆ ಜೀವ ತುಂಬಲ್ಲು ಖಂಡಿತ ಪ್ರಯತ್ನಿಸುತ್ತೇನೆ. ಅಂತಹ ಅವಕಾಶ ಬಂದಲ್ಲಿ ನೋಡುವ ಎಂಬ ಉದ್ಗಾರ! ಹೆಚ್ಚಾಗಿ ಅಳುವ ಮತ್ತು ಹುಚ್ಚಿಯ ಪಾತ್ರ ಇಷ್ಟ ಎಂದು ಹೇಳುತ್ತಾಳೆ.

ರಾಷ್ಟ್ರೀಯ ಪುರಸ್ಕಾರ, ಸರ್ಟಿಫಿಕೇಟ್ ಮತ್ತು ಮೆಡಲ್ ಸಿಕ್ಕಿದ್ದು ನನಗೆ ಮತ್ತು ಸಂಬಂಧಿಕರಿಗೆ ಸಂತೋಷ ನೀಡಿದೆ. ಬಂದು ಬಳಗದವರು ನಾಡಿಗೆ ಕೀರ್ತಿ ತರುವಂತೆ ನನ್ನನ್ನು ಆಶೀರ್ವದಿಸಿದ್ದಾರೆ ಎಂದು ಸಂತೃಪ್ತಿ ವ್ಯಕ್ತ ಪಡಿಸುವಳು. ಇವಳು ಮುಂದೆ ಅಗ್ರಿಕಲ್ಚರ್‌ನಲ್ಲಿ Phd, ಮತ್ತು ಸಮಾಜದಲ್ಲಿ ಆದರ್ಶ ಮಹಿಳೆಯಾಗುವುದು ಇವಳ ಉದ್ದೇಶವಾಗಿದೆ. ಧನುಜರವರಿಗೆ ಸಾರ್ಕ್‌ನಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದ್ದು ಅವಳ ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಬಂಡವಾಳ ಮತ್ತು ಸ್ಪಾನ್ಸರ್ ಇಲ್ಲದ ಕಾರಣ ಅವಕಾಶದಿಂದ ವಂಚಿತರಾಗಿದ್ದು ಅವಳ ದುರದೃಷ್ಟಕರ ಎಂದು ಹೇಳಬಹುದು. ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂರವರು ಮಾತಿನಂತೆ ನನ್ನದು ಸಹ "ಮೊದಲು ಅನುಭವ ನಂತರ ಕನಸು" ಎಂದೆನ್ನುತ್ತಾಳೆ. ಮುಂದೆ ಕುಮಾರಿ ಉಳುವಾರನ ಧನುಜಳು ಕೂಡ ವಿಶ್ವದ ಸಾಂಸ್ಕೃತಿಕ ಮೇಳದಲ್ಲಿ ಭಾಗವಹಿಸಿ ಜನಾಂಗಕ್ಕೂ ನಾಡಿಗೂ ಕೀರ್ತಿ ತರಲಿ ಎಂದು ಹಾರೈಸೋಣಾ.

ವರದಿ-ಆಜಡ್ಕ ರಾಣಿ ಬಾಲಕೃಷ್ಣ

ಅಶ್ವಿನೀ ದೇವತೆಗಳ ಮಂತ್ರದಿಂದ ನಕುಲ ಮತ್ತು ಸಹದೇವರು ಹುಟ್ಟಿದರು.

ಸರಕಾರದ ಯತ್ನಗಳು ಸೀಮಿತ : ಕೊರತೆ ತುಂಬಿದ ಮಠಗಳು : ಕೃಷ್ಣ

ಸರಕಾರದಿಂದಲೇ ಎಲ್ಲಾ ಮೂಲಭೂತ ಸೌಲಭ್ಯಗಳ ಪೂರೈಕೆ ಸಾಧ್ಯವಿಲ್ಲ. ಸರಕಾರದ ಪ್ರಯತ್ನಗಲು ಸೀಮಿತವಾದ ಕಡೆಗಳಲ್ಲಿ ಮಠಗಳು ಮಧ್ಯ ಪ್ರವೇಶಿಸಿ ಅಂತಹ ಕೊರತೆಗಳನ್ನು ತುಂಬಿಸಿತಮ್ಮದೇ ಕೊಡುಗೆ ನೀಡಿವೆ ಎಂದು ಮುಖ್ಯಮಂತ್ರಿ [illegible] 20 ರಂದು ಮಂಗಳೂರಿನಲ್ಲಿ ನಡೆದ ಗೌಡ ಸಮ್ಮೇಳನದಲ್ಲಿ ಶ್ಲಾಘಿಸಿದರು.

ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠಾಧೀಶ ಶ್ರೀ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿಯವರ ಜನ್ಮವರ್ಧತ್ಯುತ್ಸವ ಮತ್ತು ಬೆಳ್ಳಿ ತುಲಾಭಾರ, ಮಂಗಳೂರು ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘದ ಬೆಳ್ಳಿಹಬ್ಬ ಮತ್ತು ಗೌಡರ ಬೃಹತ್ ಸಮ್ಮೇಳನವನ್ನು ಮುಖ್ಯಮಂತ್ರಿ ಉದ್ಘಾಟಿಸಿದರು. ಎಲ್ಲ ಮೂಲಭೂತ ಸೌಲಭ್ಯಗಳಿಗೆ ಸರಕಾರವನ್ನೇ ಅವಲಂಬಿಸಿರಲು ಸಾಧ್ಯವಿಲ್ಲ. ಆಧ್ಯಾತ್ಮಿಕ ವಿಚಾರಗಳಿಗೆ ಹೆಚ್ಚು ಗಮನ ನೀಡುವ ಮಠಗಳು ಆಧ್ಯಾತ್ಮಿಕ ವಿಚಾರದೊಂದಿಗೆ ವ್ಯವಹಾರಿಕ ಜೀವನದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ನಿವಾರಣೆಗೂ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ವಿಶಿಷ್ಟವಾದ ಮಠ ಪರಂಪರೆ ಇಲ್ಲದಿದ್ದರೆ ಅನ್ನದಾನ, ವಿಧ್ಯಾದಾನ, ನ್ಯಾಯದಾನ ಆಧ್ಯಾತ್ಮಿಕ ಮಾರ್ಗದರ್ಶನ ಪರಂಪರೆ ಮುಂದುವರಿಯಲು ಸಾಧ್ಯವಿರಲಿಲ್ಲ. ಇದು ಯಾವುದೇ ಒಂದು ಮಠಕ್ಕೆ ಸೀಮಿತವಲ್ಲ ಶೈವ, ವೈಷ್ಣವ, ಮಧ್ವ ಪರಂಪರೆಯ ಎಲ್ಲಾ ಮಠಗಳು ಸಮಾನವಾಗಿ ಸೇವಾಭಾವದಿಂದ ಕೆಲಸ ಮಾಡಿ ಮನೆಮಾತಾಗಿವೆ. ದೇಶದ ಗಮನ ಸೆಳೆದಿವೆ. ಅಂತಹ ಮಠಗಳಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠವೂ ಸೇರಿದೆ ಎಂದು ಬಣ್ಣಿಸಿದರು.

ಶ್ರೀ ಬಾಲಗಂಗಾಧರ ಸ್ವಾಮೀಜಿಯವರು 5 ವರ್ಷಗಳಲ್ಲಿ 5 ಕೋಟಿ ಸಸಿ ನೆಡುವ ಯೋಜನೆ ರೂಪಿಸಿದ್ದಾರೆ. ದಿನನಿತ್ಯವೂ ನಮ್ಮ ನ್ಯಾಯಾಲಯಗಳಲ್ಲಿ ಪರಿಸರ ಖಟ್ಲೆಗಳು ವಿಚಾರಣೆಯಾಗುತ್ತಿವೆ. ಈಗ ಪರಿಸರ ಕುರಿತು ಕಾಳಜಿ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಸ್ವಾಮೀಜಿ ದೃಢ ಹೆಜ್ಜೆಯಿರಿಸಿದ್ದು, ಇತರ ಮಠಗಳು, ಮಸೀದಿ, ಚರ್ಚುಗಳೂ ಈ ಯೋಜನೆಯಲ್ಲಿ ಪಾಲ್ಗೊಳ್ಳುತ್ತಿವೆ. ನಮ್ಮ ಪರಿಸರ ಸಸ್ಯಶಾಮಲೆಯಾಗಿ ಕಂಗೊಳಿಸಬೇಕೆಂಬುದು ಅವರ ಅಪೇಕ್ಷೆ. ಸ್ವಾಮೀಜಿ ಅವರ ದೃಷ್ಟಿ ಕೇವಲ ಜನರ ಮೇಲಷ್ಟೆಯಲ್ಲ. ಮೂಕ ಪ್ರಾಣಿಗಳ ಬಗ್ಗೆಯೂ ಅವರು ಕಳಕಳಿ ಹೊಂದಿದ್ದಾರೆ. ರಾಜ್ಯದಲ್ಲಿ 10 ಸಾವಿರ ಗೋವುಗಳನ್ನು ಸಾಕಬಹುದಾದ 150 ಎಕರೆ ಪ್ರದೇಶಗಳಲ್ಲಿ ಆಧುನಿಕ ರೀತಿಯಲ್ಲಿ 'ಗೋ ಶಾಲೆ' ಆರಂಭಿಸುವ ಯೋಜನೆಯನ್ನು ರೂಪಿಸಿದ್ದಾರೆ. ಮಹತ್ವಾಕಾಂಕ್ಷೆಯ ಈ ಯೋಜನೆಗೆ ಎಲ್ಲರ ಬೆಂಬಲ ಅಗತ್ಯ ಎಂದು ಮುಖ್ಯಮಂತ್ರಿ ನುಡಿದರು.

ಕರಾವಳಿ ಭಾಗದ ಗೌಡ ಸಮುದಾಯದ ಜನರು ತಮ್ಮ ಮುನ್ನಡೆ ಕುರಿತು ಚರ್ಚಿಸಲು ಒಂದೆಡೆ ಸೇರಿರುವುದು ಸ್ವಾಗತಾರ್ಹ, ಜನರು ರಾಜಕೀಯ ಭೇದಭಾವವಿಲ್ಲದೆ ಐಕ್ಯರಾಗಬೇಕು. ಆ ಗುರಿಯತ್ತ ಸಾಗಲು ಶ್ರೀ ಗುರುಗಳು ಆಶೀರ್ವಚನ ನೀಡಿ ಚೈತನ್ಯ ತುಂಬಬೇಕು.

ಮಠಮಾನ್ಯಗಳು ನಿತ್ಯ ಜೀವನದಲ್ಲಿ ಪೂರಕವಾಗಬಹುದು ಎಂಬುದನ್ನು 25 ವರ್ಷಗಳಿಂದ ಶ್ರೀ ಸ್ವಾಮೀಜಿಯವರು ತೋರಿಸಿಕೊಟ್ಟಿದ್ದಾರೆ. ಸ್ವಾಮೀಜಿಯವರು ಧರ್ಮ, ಆಧ್ಯಾತ್ಮ, ಜಪತಪ ವಿಚಾರವನ್ನಷ್ಟೆ ಮುಂದಿಟ್ಟು ಕುಳಿತಿಲ್ಲ. ಅದರ ಜೊತೆಯಲ್ಲೇ ಶಿಕ್ಷಣ, ಪರಿಸರ ಸಂರಕ್ಷಣೆ, ವೈದ್ಯಕೀಯ, ಕಲಾ ಸಂಪತ್ತು, ಮಹಿಳೆ, ಯುವ ಕಲ್ಯಾಣ ಮುಂತಾದ ಕ್ಷೇತ್ರದಲ್ಲೂ ಕ್ರಿಯಾಶೀಲರಾಗಿ ಕೆಲಸ ಮಾಡಿದ್ದಾರೆ. ಸಮಾಜಕ್ಕೆ ಸನ್ಯಾಸಿಯೊಬ್ಬರು ನೀಡಬಹುದಾದ ಎಲ್ಲ ಕೊಡುಗೆ, ಮಾರ್ಗದರ್ಶನವನ್ನು ಅವರು ನೀಡಿದ್ದಾರೆ. ಧರ್ಮ ಭೇದ ಮಾಡದೆ, ಜಾತಿಯ ವಿಷ ಸುಳಿಗೆ ಸಿಲುಕದೆ ಯಾವ ರೀತಿ ಅನುಕರಣೀಯ ಸೇವೆಯನ್ನು ಮಾಡಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿಗಳು ಶ್ಲಾಘಿಸಿದರು.

ಸುಳ್ಯದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್‌ನ ಸ್ಥಾಪಕರಾಧ್ಯಕ್ಷ, ಸಮ್ಮೇಳನದ ಗೌರವಾಧ್ಯಕ್ಷ ಶ್ರೀ ಕುರುಂಜಿ ವೆಂಕಟ್ರಮಣ ಗೌಡ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನ ಸಮಿತಿ ಅಧ್ಯಕ್ಷ ಶ್ರೀ ಡಿ. ವಿ. ಸದಾನಂದ ಗೌಡ ಸ್ವಾಗತಿಸಿದರು. ರಾಜ್ಯ ಕಂದಾಯ ಸಚಿವ ಶ್ರೀ ಎಚ್. ಸಿ. ಶ್ರೀಕಂಠಯ್ಯ, ಕಾನೂನು ಸಚಿವ ಶ್ರೀ ಡಿ. ಬಿ. ಚಂದ್ರೇಗೌಡ, ಸಾರಿಗೆ ಸಚಿವ ಶ್ರೀ ಬಿ. ರಮಾನಾಥ ರೈ. ಮಾಜಿ ಸಚಿವ ಶ್ರೀ ಸಿ. ಭೈರೇಗೌಡ, ದಿಲ್ಲಿಯಲ್ಲಿ ರಾಜ್ಯ ಸರಕಾರದ ವಿಶೇಷ ಪ್ರತಿನಿಧಿ ಶ್ರೀ ಟಿ. ಬಿ. ಜಯಚಂದ್ರ, ಸಂಸದರಾದ ಶ್ರೀ ಅಂಬರೀಷ್, ಶ್ರೀ ವಿನಯಕುಮಾರ್ ಸೊರಕೆ, ವಿಧಾನ ಪರಿಷತ್ ಸದಸ್ಯರಾದ ಶ್ರೀ ರಾಮಚಂದ್ರ ಗೌಡ, ಶ್ರೀಮತಿ ವಿಮಲಾ ಗೌಡ, ಶಾಸಕರಾದ ಶ್ರೀ ವಿಜಯಕುಮಾರ್ ಶೆಟ್ಟಿ, ಶ್ರೀ ಆರಗ ಜ್ಞಾನೇಂದ್ರ, ಶ್ರೀ ಮಂಜು, ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಶ್ರೀ ಶಶಿಧರ ಹೆಗ್ಡೆ, ದ. ಕ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಶಶಿಧರ ಹೆಗ್ಡೆ, ದ. ಕ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಬ್ಲೇಸಿಯಸ್ ಡಿ'ಸೋಜಾ, ಮಾಜಿ ಶಾಸಕ ಶ್ರೀ ಡಿ. ಎಸ್. ಮಾದಪ್ಪ, ಬೆಂಗಳೂರು ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ಸಿ. ವಿಠಲ್, ನಿವೃತ್ತ ಮುಖ್ಯ ಕಾನೂನು ಕಾರ್ಯದರ್ಶಿ ಶ್ರೀ ಕೆ. ಆರ್. ಚಾಮಯ್ಯ, ಸಮ್ಮೇಳನದ ಕಾರ್ಯಾಧ್ಯಕ್ಷ ಶ್ರೀ ಸಿ. ಪಿ. ಜಯರಾಮ ಗೌಡ, ಕಾರ್ಯದರ್ಶಿಗಳಾದ ಶ್ರೀ ಲೋಕಯ್ಯ ಗೌಡ, ಶ್ರೀ ಬರೆಮೇಲು ಕರುಣಾಕರ ಗೌಡ, ಖಜಾಂಚಿ ಶ್ರೀ ಎಂ. ಪಿ. ಉಮೇಶ್ ಮುಂತಾದವರು ಉಪಸ್ಥಿತರಿದ್ದರು.

-ಸಂಗಾತಿ

ಹಾಗೆಯೇ ಧೃತರಾಷ್ಟ್ರನ ಹೆಂಡತಿಯಾದ ಗಾಂಧಾರಿಗೆ ವ್ಯಾಸ ಮುನಿಗಳ ಹರಕೆಯಿಂದ ನೂರೊಂದು ಮಕ್ಕಳು ಹುಟ್ಟಿದರು.

ಕೋಮಲ ಹೃದಯಿಗಳಿಗೊಂದು ಕಿವಿ ಮಾತು

ಭವಿಷ್ಯದ ಪ್ರಜೆಗಳೇ........ತಾವೆಲ್ಲರು ಈಗ ತಾನೇ ತಮ್ಮ ಶೈಕ್ಷಣಿಕ ಕಂತುಗಳನ್ನು ಮುಗಿಸಿಕೊಂಡು, ಒಂದೆರಡು ತಿಂಗಳ ಸುದೀರ್ಘ ಕಾಲದ ರಜಾದಿನಗಳನ್ನು ಕಳೆಯಲು ತಮ್ಮ ತಮ್ಮ ಸಂಬಂಧಿಕರ ಮನೆಗೆ ಅದರಲ್ಲೂ ಹುಟ್ಟೂರಿಗೆ ಅಥವಾ ಅಪ್ಪ-ತಾತನ ಮನೆಗೆ ಅಥವಾ ಮಾವನ ಮನೆಗೆ ಅಥವಾ ಚಿಕ್ಕಪ್ಪನ ಇಲ್ಲ ಅತ್ತೆ ಮನೆಗೆ ಅಥವಾ ಮಿತ್ರರ ತವರೂರಿಗೆ ಅಥವಾ ಪಕ್ಕದ ಮನೆಯ ಮಿತ್ರರ ಸಂಬಂಧಿಕರ ಮನೆ, ಇದಾವುದೂ ಅಲ್ಲದಿದ್ದರೆ ಒಂದೆರಡು ದಿನಗಳ ಮಟ್ಟಿಗಾದರು 'ಪಿಕ್‌ನಿಕ್' ಗಾಗಿಯಾದರೂ ಹೊಸ ಹೊಸ ಸ್ಥಳಗಳಿಗೆ ಭೇಟಿ ಮಾಡಲೇ ಬೇಕಾದದ್ದು ಮಕ್ಕಳ ರಜಾಧರ್ಮ! ಬಹುಶಃ ಈ ಸಲ ಮನೆಕಟ್ಟುವುದು ಅಥವಾ ಅಕ್ಕ-ಅಣ್ಣನ ಮದುವೆ ಅಥವಾ ಅತ್ತೆ ಮಗಳ ಮದುವೆ ಇಲ್ಲವೇ ಮತ್ತಾವುದೋ ಸಾಂಸಾರಿಕ ತೊಂದರೆ ತಾಪತ್ರಗಳಿಗೆ ತಮ್ಮ ಪೋಷಕರು ಸಿಕ್ಕಿ, ಸಮಯ, ಆರ್ಥಿಕ ಅಡಚಣೆ, ಮಾನಸಿಕ ಅಸ್ಥಿರತೆ ಇವೇ ಮೊದಲಾದ ಕಾರಣವೊಡ್ಡಿ ತಮ್ಮ ಮಕ್ಕಳನ್ನು ಒಂದು ದಿನವೂ ತಮ್ಮಿಂದ ದೂರ ಕಳುಹಿಸಿರದೇ ಇರುವವರೂ ಸಿಗಬಹುದು. ಆದರೆ ಇಂತವರ ಸಂಖ್ಯೆ ಇಂದಿನ ಸಮಾಜದಲ್ಲಿ ಎಷ್ಟಿರಬಹುದು ಹಾಗೂ ಪೋಷಕರ ಇಂತಹ ಮಾತುಗಳಿಗೆ ತಲೆಯಾಡಿಸಿಕೊಂಡು ಕೂರುವ ಅದೆಷ್ಟು ಮಕ್ಕಳಿರುತ್ತಾರೆ ನೀವೇ ಊಹಿಸಿಕೊಳ್ಳಿ!

ಒಟ್ಟಿನಲ್ಲಿ ಈಗಾಗಲೇ ಮಕ್ಕಳನೇಕರು ರಜಾ ದಿನಗಳ ಸವಿಯುಣ್ಣುತ್ತಿರುವ ಈ ಸಂದರ್ಭದಲ್ಲಿ ಅಥವಾ ಇವತ್ತೋ, ನಾಳೆಯೋ, ಇಲ್ಲ ಮುಂದಿನ ವಾರವಾದರೂ ಊರಿನ ಮಾರ್ಗ ಹಿಡಿಯುವ ತವಕದಲ್ಲಿರುವ ಮೃದು ಹೃದಯಿಗಳೇ..............

ಊರು ಅಂದಾಕ್ಷಣ ಒಂದು ಮಾತು ಹೇಳಲು ನೆನಪಾಗುತ್ತದೆ. "ದಕ್ಷಿಣದ "ಕಾಶ್ಮೀರ ಎಂದೇ ಹೆಸರಾಗಿರುವ ನಮ್ಮೆಲ್ಲರ ಮೂಲ ಸ್ಥಳ ಕೊಡಗು ಹಾಗೂ ಕೊಡಗಿನ ಸುತ್ತ ಮುತ್ತಲಿನ ಸುಂದರವಾದ ತಾಣ. ಗಿಡಮರಗಳ ಹಸಿರಿನ ಸಿರಿಯನ್ನು ಹೊಂದಿರುವ, ಅಲ್ಲಲ್ಲಿ ಬೆಟ್ಟ ಗುಡ್ಡಗಳಿಂದ, ಕವಲು ದಾರಿಗಳಿಂದ, ತೋಟ-ಗದ್ದೆಗಳಿಂದ ಕೂಡಿದ ಸುಂದರ ತಾಣವಿದೆ, ಅದೇ ನಮ್ಮೂರು.

ಬ್ರಹ್ಮಗಿರಿಯ ತಪ್ಪಲಿನಿಂದ ಕುಶಾಲನಗರದ ಕೊಡಗನ ಮನೆ ದಿವಂಗತ ಪೊನ್ನಪ್ಪನವರ ಹೊಲ-ಗದ್ದೆಗಳನ್ನು ಸುತ್ತಿಕೊಂಡು ಮೈಸೂರು ಜಿಲ್ಲೆಯನ್ನು ಸಂಪರ್ಕಿಸುವ ಮಧ್ಯೆ ಮಳೆಗಾಲದಲ್ಲಿ ಮೈದುಂಬಿ ಹರಿಯುವ ಕಾವೇರಿಯು ಬೇಸಿಗೆಯಲ್ಲಿ ಸವಿಯಾದ ತಣ್ಣನೆಯ ನೀರಿನಿಂದ ಹತ್ತು ಹಲವಾರು ಕಡೆ ಆಳವಾಗಿ ಹಾಗೂ ಅಗಲವಾಗಿ ಮೈಚಾಚಿದರೆ, ಕೆಲವು ಕಡೆ ಮೊಣಕಾಲುವರೆವಿಗೂ ನೀರಿಲ್ಲದೆ, ಮರಳು ಗುಡ್ಡೆಗಳ ರಾಶಿಯೊಂದಿಗೆ ಅಲ್ಲಲ್ಲಿ ನಿಂತು ಹರಿಯುವ ದೃಶ್ಯವನ್ನು ನಾಡಿನ ಉದ್ದಗಲದಲ್ಲಿಯೂ ಕಾಣಬಹುದಾಗಿದೆ. ಮಕ್ಕಳೇ, ಹೀಗೆ ಕೊಡಗಿನ -ನೆಲ-ಜಲದ, ಸೊಗಸು ಗಾಂಭೀರ್ಯಗಳನ್ನು ಮೈಗೂಡಿಸಿಕೊಂಡಿರುವ ಇಲ್ಲಿನ ಸಹೃದಯಿಗಳ ನೆನಪುಗಳನ್ನು ಕೇವಲ ಬೇಸಿಗೆ ರಜಾದಿನಗಳಲ್ಲಿ ಮಾತ್ರ ಊಹಿಸಿಕೊಳ್ಳದೇ ಜೀಹನದುದ್ದಕ್ಕೂ ಕೊಡಗಿನ ಸಂಗಾತಿಗಳಾಗಿಯೇ ಹೆಜ್ಜೆ ಇಡುವ ಪಣತೊಡಬೇಕಾಗಿದೆ.

ಇಂದಿಗೂ ಅಚ್ಚಳಿಯದೇ ಉಳಿದಿರುವ ನಮ್ಮ ಭಾಷೆ, ಉಡಿಗೆ, ತೊಡಿಗೆ, ಆಚಾರ-ವಿಚಾರ ಹಾಗೂ ಸಾಮಾಜಿಕ ಕಟ್ಟುಪಾಡುಗಳನ್ನು ರಜಾದಿನಗಳಲ್ಲಿ ಊರಿನಲ್ಲಿರುವ ತಮ್ಮ ಕುಟುಂಬದ ಹಿರಿಯರೊಂದಿಗೆ ಬೆರೆತು, ಈ ಸಂದರ್ಭಗಳಲ್ಲಿ ಆಚರಿಸುವ ವಿವಿಧ ಹಬ್ಬ ಹರಿದಿನಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ, ಈಗಾಗಲೇ ಹೊರ ಊರಿನಲ್ಲಿ, ಹೊರ ಜಿಲ್ಲೆಗಳಲ್ಲಿ, ಹೊರ ರಾಜ್ಯಗಳಲ್ಲಿ ಹಾಗೂ ಹೊರ ದೇಶಗಳಲ್ಲಿಯೂ ವಾಸಿಸುತ್ತಿರುವ ನಮ್ಮ ಜನಾಂಗದ ವಿವಿಧ ಕುಟುಂಬದ ಸದಸ್ಯರೆಲ್ಲರೂ ಆಯಾಯ ಸ್ಥಳದ ಸಂಸ್ಕೃತಿಯೊಂದಿಗೆ ಬೆರೆತು ಅವುಗಳಲ್ಲಿರುವ ಒಳಿತು ಕೆಡಕುಗಳ ಪರಾಮರ್ಶೆಗಳಿಂದ ನಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳುವ ದೃಢ ಸಂಕಲ್ಪವನ್ನು ನಿಮ್ಮೂರಿನಿಂದಲೇ ಆರಂಭಿಸಿ.

ಈ ರಜಾದಿನಗಳಲ್ಲಿ ಊರಿನಿಂದ ಮಕ್ಕಳು ವಿವಿಧ ಪಟ್ಟಣಗಳಲ್ಲಿ ವಾಸಿಸುತ್ತಿರುವ ತಮ್ಮ ತಮ್ಮ ಸಂಬಂಧಿಕರ ಮನೆಗೆಂದು ಹೊರಡುವುದು ಅಷ್ಟೇ ಸಾಮಾನ್ಯ. ಆದರೆ ಬೇಸಿಗೆ ರಜೆಗಾಗಿ ಪಟ್ಟಣಕ್ಕೆ ಬರುವವರ ಸಂಖ್ಯೆ ಮಾತ್ರ ಕಡಿಮೆ, ಸೆಕೆ ಸೊಳ್ಳೆಕಾಟ ಹಾಗೂ ವಿವಿಧ ತಿಂಡಿತಿನಿಸುಗಳಿಂದಾಗಿ ಹರಡುವ ರೋಗ ರುಜಿನಗಳ ಭೀತಿಯೇ ಇದಕ್ಕೆ ಕಾರಣ. ಆದ್ದರಿಂದ ದಸರಾ ರಜೆಯೊಂದೇ ಸಿಟಿಗೆ ಮಕ್ಕಳು ಹೋಗಲು ಸೂಕ್ತ ಕಾಲ ಎನ್ನಬಹುದು.

ಒಟ್ಟಿನಲ್ಲಿ ರಜಾದಿನಗಳಲ್ಲಿ ಕೆಲವೇ ದಿನವಾದರೂ ತಮ್ಮ ಶಾಲಾ ಚಟುವಟಿಕೆಗಳನ್ನು ಮರೆತು ಹಳೇ ಮಿತ್ರರೊಡನೆಯೂ ಸಂಬಂಧಿಕರೊಡನೆಯೂ ಊರಿನಲ್ಲಿ ಅಥವಾ ಸಿಟಿಯಲ್ಲಿ ಕಳೆಯ ಲೇಬೇಕಾಗುವುದು ಅನಿವಾರ್ಯ.

ಇಂತಹ ಸಂದರ್ಭದಲ್ಲಿ ಕೋಮಲ ಹೃದಯಿಗಳಿಗೆ ಎಚ್ಚರಿಕೆಯ ಅಂಶಗಳೆಂದರೆ :

1) ಇಡೀ ವರ್ಷ ಹಳ್ಳಿ ಅಥವಾ ಸಿಟಿಯ ಪರಿಸರದಲ್ಲಿ ತಾವು ನೋಡಿದ ಅಥವಾ ಕೇಳಿದ ವಿಷಯಗಳ ಪ್ರಯೋಗಗಳನ್ನು ತಮ್ಮ ಹಿರಿಕರ (ವಯಸ್ಕರ) ನೆರವು ಇಲ್ಲದೇ ಮಾಡಲು ಪ್ರಯತ್ನಿಸಬೇಡಿ. 2) ತಮ್ಮ ಹೊಸ ಸ್ಥಳದಲ್ಲಿ ತಮಗೆ ಪೋಷಕರ ಭಯವಿಲ್ಲದ ಕಾರಣ ತಾವು ತಮಗಿಂತ -ಚಿಕ್ಕ-ಮಕ್ಕಳೊಡನೆ ಆಡುವ ಯಾವುದೇ ಆಟಗಳು ಆ ಎಳೆಯ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವಾಗದಂತೆ ಎಚ್ಚರ ವಹಿಸಿ. 3) ಟಿ. ವಿ. ಅಥವಾ ಸಿನಿಮಾದಲ್ಲಿ ಬರುವ ಯಾವುದೇ ಅಪ್ರಸ್ತುತ ವಿಷಯಗಳ ಪ್ರಯೋಗ ಮಾಡಬೇಡಿ. 4) ಹಲವಾರು ವರ್ಷಗಳಿಂದ ಪ್ರೀತಿಯಿಂದ ಬೆಳೆಸಿದ ಪ್ರಾಣಿ-ಪಕ್ಷಿಗಳ, ಗಿಡ-ಮರಗಳ ಅಥವಾ ಹಿತ್ತಲು ತೋಟಗಳನ್ನು ಅಂದಗೆಡಿಸಬೇಡಿ. 5) ಎಲ್ಲಕ್ಕಿಂತಲೂ ಹೆಚ್ಚಾಗಿ ತಮ್ಮ ಬಂಧುಗಳಿಗೆ ತಿಳಿಸದೇ ತೋಟ -ಗದ್ದೆ, ಬೆಟ್ಟ- ಗುಡ್ಡ ಹಾಗೂ ಹೊಳೆ ಹಳ್ಳಗಳೆಂಬ ಹೊಸ ಸ್ಥಳಗಳಿಗೆ ಹೋಗುವುದು ಸರಿಯಲ್ಲ.

ಹೀಗೆ ತಾವು ಕಳೆಯುವ 2 ತಿಂಗಳ ರಜಾ ದಿನಗಳು ತಮ್ಮ ಮೃದು ಮನಸ್ಸಿನ ಮೇಲೆ ತಾವು ಸಾಧಿಸ ಹೊರಟ ಭವಿಷ್ಯದ ಸಾಧನೆಗಳ ಬಗ್ಗೆ 10 ತಿಂಗಳ ಶಾಲಾ ಪಾಠ ಪ್ರವಚನಗಳಿಗಿಂತಲೂ ಮಿಗಿಲಾದುದು. ಈ ಸಂದರ್ಭದಲ್ಲಿ ಮಕ್ಕಳ ಮತ್ತು ಕುಟುಂಬದ ಆಪ್ತ ವರ್ಗದಲ್ಲಿ ಪ್ರೀತಿ ವಿಶ್ವಾಸ, ನೆಮ್ಮದಿ ತುಂಬಿ, ಕುಟುಂಬದಲ್ಲಿ ಎಲ್ಲರೂ ಸಮಾನರು ಎಂಬ ಅರಿವು ಮೂಡಬಲ್ಲದು. ಜೊತೆಗೆ ಕುಟುಂಬದ ಇಳಿ ವಯಸ್ಸಿನವರಿಗೂ ಮಕ್ಕಳ, ಮೊಮ್ಮಕ್ಕಳ ಹಾಗೂ ಅವರ ಬುದ್ಧಿ ಶಕ್ತಿಗಳು ಹೊಸ ಹುರುಪನ್ನು ನೀಡಿ ಜೀವನ ಸಾರ್ಥಕವಾಯಿತೆಂಬ ತೃಪ್ತಿ ಸಿಗುವಂತಾಗಬೇಕು.

ಎಳೆ ವಯಸ್ಸಿನ ಮೇಲೆ "ಕೊಡಗಿನ ಸಂಗಾತಿ" ಎಂಬ ಅರಿವು ಮೂಡಿದರ ಸಾಕು, ಆ ಮಗುವಿನ ಕುಟುಂಬ ಎಂದೂ, ತಮ್ಮ ಭಾಷೆ ಆಚಾರ-ವಿಚಾರಗಳು ಹಾಗೂ ಸಂಸ್ಕೃತಿಯನ್ನು ವಿಶ್ವದ ಯಾವ ಮೂಲೆಯಲ್ಲಿದ್ದರೂ ಉಳಿಸಿ ಬೆಳೆಸಿಕೊಳ್ಳಬಲ್ಲದು!

ವಿ.ಸೂ. : ಬೇಸಿಗೆ ರಜಾ ದಿನಗಳಲ್ಲಿ ತಾವು ಅನುಭವಿಸಿದ ತಮ್ಮ ಅನುಭವಗಳನ್ನು "ಕೊಡಗು ಸಂಗಾತಿ"ಯ ಮೂಲಕ ಬರೆದು ತಿಳಿಸಿದರೆ ಬಹುಮಾನವಿದೆ.

(ಆಯ್ದ 3 ಲೇಖನಗಳಿಗೆ ಬಹುಮಾನವಿದೆ)

ಪಾಣತ್ತಲೆ ಹೊನ್ನಪ್ಪ ಗೋಪಾಲ, ಅಭಿವೃದ್ಧಿ ಅಧಿಕಾರಿ, ಭಾರತೀಯ ಜೀವಾ ವಿಮಾ ನಿಗಮ, ಪಾಂಡವಪುರ, ಶ್ರೀರಂಗಪಟ್ಟಣ ಶಾಖೆ.
Ph. : 08236-255384 / Mobile : 9448218222

1.ದುರ್ಯೋಧನ, 2.ದುಶ್ಶಾಸನ, 3.ಸಮ, 4.ದುಃಸಹ, 5.ಜಲಸಂಘ, 6.ಸಹ

ಗುಡ್ಡೆಮನೆ ಡಾ॥ ರಾಘುವಗೌಡ ಡೈರೆಕ್ಟರ್ ಗ್ರಾಜುವೇಟ್ ಪ್ರೋಗ್ರಾಮ್ ಗಣಕೀಕರಣ ವಿಜ್ಞಾನ ವಿಭಾಗ, ದೇಟ್ರೋನ್ ಯೂನಿರ್ವಸಿಟಿ, ದೇಟ್ರೋನ್, ಅಮೇರಿಕಾ. ಅಲ್ಲಿ, ಅವರು ದಿನಾಂಕ 5,6 ಜುಲೈ 2002 ರಂದು ಚೆಸಪೀಕೆ ವರ್ಜನಿಯಾ ಬೀಚಿನಲ್ಲಿ ಒಕ್ಕಲಿಗ ಪರಿಷತ್ ಅಕಾಡೆಮಿ ಅದರ ಏಳನೆ ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ಭಾಷಣ.

ಸ್ನೇಹಿತರೇ,

ಗೌಡ ಮತ್ತು ಹೆಗ್ಗಡೆಗಳ ಮುಂದೆ ನನಗೆ ಒಂದು ಪದ್ಯವನ್ನು ಓದಲು ತುಂಬಾ ಸಂತೋಷವಾಗುತ್ತಿದೆ. ಪದ್ಯವನ್ನು ಬರೆಯಲು ಪ್ರೋತ್ಸಾಹಿಸಿದ ನಮ್ಮ ಒಕ್ಕಲಿಗ ಪರಿಷತ್ ಅಕಾಡೆಮಿ ಅಧ್ಯಕ್ಷರಾದ ಶ್ರೀಯುತ ಶ್ರೀನೀವಾಸಗೌಡರಿಗೆ ನನ್ನ ವಂದನೆಗಳು. ಈ ಪದ್ಯದಲ್ಲಿ ನಾನು ಒಕ್ಕಲಿಗರು ಅವರು ನಡೆದು ಬಂದ ದಾರಿ, ಅವರು ಅವರ ಕನಸು, ಮತ್ತು ಒಕ್ಕಲಿಗ ವಿಶ್ವ ವಿದ್ಯಾಲಯ ಅದರ ಬಗ್ಗೆ ತಿಳಿಯಬಯಸುತ್ತೇನೆ. ಈ ಪದ್ಯವನ್ನು ಸನ್ 1837 ನೇ ಸ್ವಾತಂತ್ರ್ಯ ಸಂಗ್ರಾಮ ಅಂದರೆ ಅಮರ ಸುಳ್ಯದ ದಂಗೆಯಲ್ಲಿ ಪ್ರಾಣಾರ್ಪಣೆ ಮಾಡಿರುವ ನಮ್ಮ ಪೂರ್ವಿಕರಿಗೆ (ಹುತಾತ್ಮರು) ಮತ್ತು ಚಿಂತನೆ ಮಾಡುವ ಒಕ್ಕಲಿಗ ಪರಿಷತ್ ಅಕಾಡೆಮಿ ಯುವಕರಿಗೆ ಅರ್ಪಿಸುತ್ತೇನೆ.

ಗೌಡರ ಇತಿಹಾಸವು ವಿಖ್ಯಾತವಾದದ್ದು. ಮುಖ್ಯವಾಗಿ ನಾವು ರೈತಾಪಿ ವರ್ಗದವರು. ಗೌಡರು ರಾಷ್ಟ್ರಕೂಟ, ಗಂಗ, ಕದಂಬ, ಚಾಲುಕ್ಯ ಮತ್ತು ಹೊಯ್ಸಳ ರಾಜ ವಂಶದ ಜನರ ಕಾಲದಲ್ಲಿ ಯೋಧರಾಗಿ ಸೇವೆ ಸಲ್ಲಿಸಿದ ಕೀರ್ತಿ ಇಂದೂ ಇದೆ. ನಮ್ಮ ಇತಿಹಾಸದ ಬಗ್ಗೆ ಬೇರೆ ಬೇರೆ ವರ್ಣನೆಗಳಿವೆ. ಮಹಾ ಭಾರತದಲ್ಲಿ ವರ್ಣಿಸಿರುವಂತೆ ನಾವು ಬಂಗಾಳದ ಹೆಸರು ವಾಸಿಯಾದ ಗೌಡ ದೇಶದಿಂದ ಬಂದವರೆಂದು ಹೇಳುತ್ತಾರೆ. ಇಂದಿನ ವರ್ಷಗಳಲ್ಲಿ ನಾವು ತಿಳಿದಂತೆ ಬೆಂಗಳೂರು ಸ್ಥಾಪಕ ಕೆಂಪೇಗೌಡನು ಮೊರಸು ಎಂಬ ತಮಿಳು ನಾಡಿನ ಊರಿನಿಂದ ಬಂದವನು. ಗೌಡರು ಕರ್ನಾಟಕದ ಬಯಲು ಸೀಮೆಗಳಲ್ಲಿ ನೆಲೆನಿಂತು ಕೊನೆಗೆ ಕೊಡಗು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ವಲಸೆ ಬಂದು ಮಲೆನಾಡು ಪ್ರದೇಶಗಳಾದ ಸುಳ್ಯ, ಸುಬ್ರಮಣ್ಯ ಸ್ಥಳಗಳಲ್ಲಿ ನೆಲೆನಿಂತರು. 1857 ರ ಸಿಪಾಯಿ ದಂಗೆ ಅಥವಾ ಸ್ವಾತಂತ್ರ್ಯ ಸಂಗ್ರಾಮವು ನಮಗೆಲ್ಲಾ ತಿಳಿದ ವಿಷಯವಾದರೂ, ಇಪ್ಪತ್ತು ವರುಷಗಳ ಹಿಂದೆಯೇ ಇದೇ ನಮ್ಮ ಗೌಡ ಜನಾಂಗದವರು 1837 ರಲ್ಲಿ ಆಂಗ್ಲರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಗೌಡರೇ ಮುಂದಾಳತ್ವವನ್ನು ವಹಿಸಿದ 1837 ರ ಚಳುವಳಿಯನ್ನು ದುರಾದೃಷ್ಟಕ್ಕೆ ಇತಿಹಾಸದ ಪುಸ್ತಕಗಳಲ್ಲಿ ಸರಿಯಾಗಿ ದಾಖಲಾಗದೇ ಉಳಿಯಿತು.

ಸನ್ 1834ರಲ್ಲಿ ಕೊಡಗಿನ ಲಿಂಗಾಯಿತ ಅರಸ ಚಿಕ್ಕವೀರರಾಜನನ್ನು ಆಂಗ್ಲ ಸರ್ಕಾರ ದಿವಾನ್ ಬೋಪು ಹಾಗೂ ಲಕ್ಷ್ಮೀನಾರಾಯಣರ ಬೆಂಬಲದಿಂದ ಗಡಿಪಾರು ಮಾಡಿದರು. ಆಂಗ್ಲರ ವಿರುದ್ಧ ಕಾರ್ಯಾಚರಣೆಯನ್ನು ಆ ಸಮಯದಲ್ಲಿ ಹಾಲೇರಿಯ ಸಂತ ಪುರುಷ ಅಪರಂಪರನು ಪ್ರಾರಂಭಿಸಿದನು. ಆತನಿಗೆ ಕೊಡಗರಿಂದ ಹೆಚ್ಚಿನ ಬೆಂಬಲ ದೊರೆಯಲಿಲ್ಲ. ಅಪರಂಪರನು ಈ ಕಾರ್ಯಕ್ಕಾಗಿ ಜೈಲಿಗೆ ತಳ್ಳಲ್ಪಟ್ಟನು. ಆತನ ಶಿಷ್ಯ (ಅನುಯಾಯಿ) ಕಲ್ಯಾಣಸ್ವಾಮಿ ಜೊತೆ 1837 ರ ಏಪ್ರಿಲ್ ತಿಂಗಳಲ್ಲಿ ಸುಮಾರು 2000 ಗೌಡ ಯೋಧರು ಸುಳ್ಯದಲ್ಲಿ ಒಗ್ಗೂಡಿದರು. ಇದೇ ಸ್ಥಳ ಮುಂದೆ "ಅಮರ ಸುಳ್ಯ"ವಾಯಿತು.

ಈ ಹೋರಾಟಗಾರರು ಬೆಳ್ಳಾರೆ ಮತ್ತು ಇತರ ಸ್ಥಳಗಳ ಸರಕಾರಿ ಖಜಾನೆಗಳನ್ನು ವಶಪಡಿಸಿದಲ್ಲದೆ ಪುತ್ತೂರಿನತ್ತ ನುಗ್ಗಿ ನಡೆದು ಮುಂದೆ ಬ್ರಿಟಿಷರ ಮುಖ್ಯ ಠಾಣೆಯಾದ ಮಂಗಳೂರನ್ನು ಸೆರೆಹಿಡಿಯಲು ಸಫಲರಾದರು. ಬ್ರಿಟಿಷರು ಕಣ್ಣಾನೂರಿಗೆ ಪಲಾಯನಗೈದರು. ಮಂಗಳೂರನ್ನು ಹದಿಮೂರು ದಿನಗಳ ಕಾಲ ಗೌಡರು ರಾಜ್ಯಭಾರ ಮಾಡಿದರು. ಆದರೆ ಆನಂತರ ಬ್ರಿಟಿಷರಿಂದ ಸೋಲಲ್ಪಟ್ಟರು. ಹೆಚ್ಚಿನ ಮಂದಿ ತಮ್ಮ ಕಾರ್ಯಾಚರಣೆಗಾಗಿ ಗಲ್ಲುಗೇರಿಸಲ್ಪಟ್ಟರು. ಹುತಾತ್ಮರಾದವರಲ್ಲಿ ಗುಡ್ಡೆಮನೆ ಅಪ್ಪಯ್ಯಗೌಡ ಮತ್ತು ರಾಮಗೌಡರು ಪ್ರಮುಖರು.

ನಾನು ಶಾಲೆಯಲ್ಲಿ ಓದುತ್ತಿದ್ದಾಗ ಈ ಕತೆಗಳನ್ನು ಕೇಳಿದ್ದೇನೆ. ಯಕ್ಷಗಾನ ಬಯಲಾಟ ದೃಶ್ಯಗಳನ್ನು ನೋಡಿದ್ದೇನೆ. ಈ ಸಾಹಸೀ ಹಳೆಯ ಕಾಲದ ಕತೆಗಳ ನೆನಪು ನನ್ನ ಮಿದುಳಿನಲ್ಲಿ ಚಿರವಾಗಿ ಉಳಿದಿವೆ. ನಡೆದ ಬಂಡಾಯದ ಕಾರಣವನ್ನು ಕೆನರಾ ಕಲೆಕ್ಟರಾದ ಎಂ. ಲೆವಿನ್, ಮೇಜರ್ ಜನರಲ್‌ವಿಗೋರ್ನೆಕ್ಸ್, ಚಾಲ್ಸ್‌ರೋಬರ್ಟ್ ಕಾಟ್, ಅವರುಗಳಿಗೆ ಸಲ್ಲಿಸಿದ ವರದಿಯಲ್ಲಿ ದಾಖಲೆಯಾಗಿದೆ. ಕನ್ನಡಕ್ಕೆ ಇದನ್ನು ಭಾಷಾಂತರಿಸಿದ ಶ್ರೀ ಎನ್. ಎಸ್. ದೇವಿಪ್ರಸಾದ್ ಅವರ ಕೃತಿಗಳನ್ನು ಸ್ವೀಕರಿಸಿಕೊಂಡಿದ್ದೇನೆ. ಜತೆಗೆ ಒಕ್ಕಲಿಗರ ಪರಿಷತ್ ಅಕಾಡೆಮಿಯು ಈ ನಿಟ್ಟಿನಲ್ಲಿ ಮಲೆನಾಡು ಪ್ರದೇಶದಲ್ಲಿ ಒಕ್ಕಲಿಗ ಯೂನಿರ್ವಸಿಟಿಯನ್ನು ಗೌಡರ ಏಳ್ಗೆಗಾಗಿ ತೆರೆಯುವಂತಾಗಬೇಕು. ಇದನ್ನು ನಾನು ಇಷ್ಟಪಡುತ್ತೇನೆ. ವಿವಿಧ ಕಲಾಶಾಸ್ತ್ರದೊಂದಿಗೆ ಆ ನಿಟ್ಟಿನಲ್ಲಿ ನಾವು ಯೂನಿರ್ವಸಿಟಿಯನ್ನು ಪ್ರಾರಂಭಿಸಿ ನಂತರ ಬನಾರಸ್ ಹಿಂದೂಯೂನಿರ್ವಸಿಟಿ, ವಿಶ್ವಭಾರತಿ ಯೂನಿರ್ವಸಿಟಿಯ ಮಾದರಿಯಲ್ಲಿ ಒಕ್ಕಲಿಗೆಲ್ಲರಿಗಾಗಿ ತೆರೆದು ಸ್ವಂತ ಯೂನಿ ವರ್ಸಿಟಿಯನ್ನು ಶಾಂತಿನಿಕೇತನದಲ್ಲಿ ಸ್ಥಾಪಿಸಲು ಸಾಧ್ಯವಿದೆ.

ಭಾಷಾಂತರ : ಬೈತಡ್ಕ ಬೆಳ್ಯಪ್ಪ, ಮಡಿಕೇರಿ

7.ಅನುವಿಂದ, 8.ವಿಂದ, 9.ದುರ್ಧರ್ಷ, 10.ದುರ್ಮರ್ಷಣ, 11.ದುಷ್ಪ್ರದರ್ಶನ, 12.ಸಬಾಹು

ಮಹಾನ್ ವ್ಯಕ್ತಿ ದಿ॥ ಪೂಜಾರಿ ಅಪ್ಪಯ್ಯನವರು : *ಲೇಖಕ ಪ್ರೋ॥ ಪೂಜಾರಿ ಮೊಣ್ಣಪ್ಪ*

ಪೂಜಾರಿ ಚೊಲ್ಲಣ್ಣನವರು ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು, ಸುಬ್ರಮಣ್ಯದ ಹತ್ತಿರದ ಯಾನೇಕಲ್ಲು ಗ್ರಾಮದಿಂದ ಆಗಿನ ಕೊಡಗು ರಾಜರ ವಿನಂತಿ ಮೇರೆಗೆ 1797 ರಲ್ಲಿ ಅರ್ವತೊಕ್ಲು ಗ್ರಾಮಕ್ಕೆ ಬಂದು ನೆಲೆಸಿ ಚಾತುರನ ಕುಟುಂಬ ಅಳಿದು ಹೋದುದರಿಂದ ಆ ಕುಟುಂಬದ ವರ್ಗದ ಭೂಮಿಯನ್ನು ಸಾಗುವಳಿ ಮಾಡಿ 1809 ರಂದು ನಿರೂಪವನ್ನು ಪಡೆದುಕೊಂಡು ಅರ್ವತ್ತೊಕ್ಲು ಗ್ರಾಮದ ನೆರೆ ಗ್ರಾಮವಾದ ಪೈಕೇ ಮನೆಯಿಂದ ಮದುವೆಯಾಗಿ ಅವರಿಗೆ 1 ನೇ ಕಾಳಪ್ಪ, 2 ನೇ ಅಪ್ಪಯ್ಯ, 3 ನೇ ಸಣ್ಣಕ್ಕ ಎಂಬ ಮೂರು ಮಕ್ಕಳಾಗಿ 2 ನೇ ಮಗ ಅಪ್ಪಯ್ಯನವರು ಸುಮಾರು 1833 ರಲ್ಲಿ ಜನಿಸಿದರು. ಇವರು 1833 ರಿಂದ ಸುಮಾರು 1860ರ ವರೆಗೆ ಅರ್ವತೊಕ್ಲು ಗ್ರಾಮದ ಐನ್ ಮನೆಯಲ್ಲಿ ವಾಸವಾಗಿದ್ದು, ಬಿಳಿಗೇರಿ ಗ್ರಾಮದ ಸರ್ವೆ ನಂ. 5ರಲ್ಲಿ ಈಗ ಕುದು ಎಂಬ ಜಾಗದಲ್ಲಿ ತಾತ್ಕಾಲಿಕವಾಗಿ ಮನೆಕಟ್ಟಿಕೊಂಡು 1875 ರಲ್ಲಿ ಈ ಬಿಳಿಗೇರಿ ಗ್ರಾಮದ ಸರ್ವೇ ನಂ. 2 ರ ಹಿತ್ಲುಮನೆ ದಳದಲ್ಲಿ ಹೊಸ ಮನೆಯನ್ನು ಸೇರುವಾಗ ಅವರ ಪ್ರಥಮ ಪುತ್ರ ದಿವಂಗತ ಪೂಜಾರಿ ರಾಮಪ್ಪನವರ ತೊಟ್ಟಿಲ್ಲನ್ನು ತೆಗೆದುಕೊಂಡು ಹತ್ತಿದರೆಂದು ಹಿರಿಯರು ಹೇಳುತ್ತಿದ್ದರು. ದಿವಂಗತ ಶ್ರೀ ಅಪ್ಪಯ್ಯನವರ ಮೊದಲನೇ ಹೆಂಡತಿಯನ್ನು ಚೆಟ್ಟಳ್ಳಿ ಕರುಣಯ್ಯನ ಮನೆಯಿಂದ ತಂದು, ಅವರಿಗೆ ಮಗಳು ಎಂಬ ಮಗಳನ್ನು ಜನ್ಮವಿತ್ತು ಮಗಳನ್ನು ಕುಯ್ಯಂಗೇರಿ ಗ್ರಾಮದ ತಡಿಯಪ್ಪನ ಚಂಗಪ್ಪನವರಿಗೆ ಮದುವೆ ಮಾಡಿಕೊಟ್ಟರು. ಶ್ರೀ ಅಪ್ಪಯ್ಯನವರ ಮೊದಲನೇ ಹೆಂಡತಿ ತೀರಿಹೋದ ನಂತರ ಕಾರಗುಂದ ಗ್ರಾಮದ ಕೊಡಗನ ಕರಿಯಪ್ಪನವರ ತಂಗಿಯನ್ನು ಮದುವೆಯಾಗಿ ಅವರೂ ತೀರಿಕೊಂಡ ಮೇಲೆ 3 ನೇ ಹೆಂಡತಿ ಗಾಳಿಬೀಡು ಗ್ರಾಮದ ಉಡುದೋಳಿ ಮೋಟಕ್ಕನವರನ್ನು ಮದುವೆಯಾಗಿ 1 ನೇ ಮಗ ರಾಮಪ್ಪ 2 ನೇ ಅಮ್ಮ, 3 ನೇ ಸಣ್ಣಯ್ಯ, 4 ನೇ ಗೋಪಿ 5 ನೇ ನಿಂಗಪ್ಪ, 6 ನೇ ಪಿಳ್ಳಣ್ಣ, 7 ನೇ ಕಾರ್ಯಪ್ಪ 8 ನೇ ಯಂಕಪ್ಪರೆಂಬ ಮಕ್ಕಳಾದರು.

ದಿವಂಗತ ಶ್ರೀ ಅಪ್ಪಯ್ಯನವರು ತನ್ನ ಒಂದನೇ ಹೆಂಡತಿಯನ್ನು ಚೆಟ್ಟಳ್ಳಿ ಕರುಣಯ್ಯನ ಮನೆಯಿಂದ ಮದುವೆಯಾದಾಗ ಅವರಿಗೆ ಸ್ವಲ್ಪ ಕಾಫಿ ತೋಟವನ್ನು ಉಡುಗೊರೆಯಾಗಿ ಕೊಟ್ಟಿದ್ದರೆಂದು ಆ ಕಾಫಿ ತೋಟ ಅರ್ವತ್ತೊಕ್ಲು ಬಿಳಿಗೇರಿ ಗ್ರಾಮಗಳಿಗೆ ಬಹಳ ದೂರವಾದುದರಿಂದ ಚೆಟ್ಟಳ್ಳಿಗೆ ಹೋಗಿ ಕಾಫಿ ಸಾಗುವಳಿ ಮಾಡುವುದು ಕಷ್ಟವೆಂದು ಆ ಕಾಫಿ ತೋಟವನ್ನು ಮಾರಿ ಬಿಳಿಗೇರಿ ಗ್ರಾಮದ ಸರ್ವೇ ನಂ. 1 ರ ಒತ್ತುವರಿಯಾಗಿದ್ದ ಸರ್ವೆ ನಂ. 4 ರ ತರಿ ಭೂಮಿಯನ್ನು ಕ್ರಯಕ್ಕೆ ಪಡೆದುಕೊಂಡು, ಬಂಜರಾಗಿದ್ದ ಭೂಮಿಯನ್ನು ಸಮತಟ್ಟಾಗಿ ಮಾರ್ಪಡಿಸಿದರೆಂದು ಹಿರಿಯರು ಹೇಳುತ್ತಿದ್ದರು. 1897 ರಲ್ಲಿ ಸರ್ವೇ ನಂ. 5 ರಲ್ಲಿ 90 ಸೆಂಟ್ ಭೂಮಿಗೆ ಈಗಿನ ನೀರಿನ ಕಣಿಯನ್ನು ಮೂಟೆ ಮನೆಯವರ ಜಾಗದಿಂದ ನೀರಿನ ನಾಲೆಯನ್ನು ಮಾಡಿ ನೀರಾವರಿ ಭೂಮಿಯನ್ನಾಗಿ ಮಾರ್ಪಡಿಸಿದರು. ಅದಲ್ಲದೆ ಬಿಳಿಗೇರಿ ಗ್ರಾಮದ ಸರ್ವೇ ನಂ. 1 ರ ಭೂಮಿ ಸಾಗುವಾಗಿ 1867 ರಲ್ಲಿ ಗಟ್ಟಿ ಜಮ್ಮವಾಗಿ ಪರಿವರ್ತಿಸಿ 1906 ರಿಂದ 1911 ರ ವರೆಗೆ ಮನೆಯ ಎಲ್ಲಾ ಯಾವಕರನ್ನು ಸೇರಿಸಿ ಕಾಯರ ಮನೆಯ ಭೂಮಿಯಿಂದ 5/1 ರ ವರೆಗಿನ ಎಲ್ಲಾ ಜಾಗವನ್ನು ಹಳ್ಳ ದಿಣ್ಣೆ ಮರಗಳನ್ನು ಕಡಿದು ತರಿ ಭೂಮಿಯನ್ನಾಗಿ ಪರಿವರ್ತಿಸಿ ಅಲ್ಲಿ ಕೆಲಸ ಮಾಡಿದ ಎಲ್ಲರಿಗೂ ಆಳುಪಾಲಿನಂತೆ 1910-1911 ರಲ್ಲಿ ಪಾಲು ಹಾಕಿಕೊಟ್ಟರು. ಆದ್ದರಿಂದ 1910-1911 ರ ಒಳಗೆ ಸರ್ವೇ ನಂ. 1, 5/1 ಮತ್ತು ಸರ್ವೇ ನಂ. 1 ನ್ನು ಇವರ ಕಾಲದಲ್ಲಿ ರೂಢಿ ಮಾಡಿ ಮನೆಯನರೆಲ್ಲರೂ ಕೂಡಿ ಉತ್ತು ಬಿತ್ತಿ ಭತ್ತದ ಗದ್ದೆಯನ್ನು ಹೊಂದಲು ಕಾರಣಕರ್ತರಾದರು. ಇವರ ಕಾಲದಲ್ಲಿ ಅಂದರೆ 1906 ರಲ್ಲಿ 5/2 ರ ಮತ್ತು ಸರ್ವೇ 7/2 ರ ಪೈಸಾರಿಯನ್ನು ಸರ್ಕಾರದಿಂದ ಮಂಜೂರು ಮಾಡಿಸಿ ಅರವತ್ತು ಏಕ್ರೆ ಜಾಗವನ್ನು ಪಡೆದುಕೊಂಡರು.

ದಿವಂಗತ ಅಪ್ಪಯ್ಯನವರು ಕುಟುಂಬದ 9 ಜನ ಯುವಕರಿಗೆ ಒಂದೇ ಚಪ್ಪರದಲ್ಲಿ ಅರ್ವತೊಕ್ಲು ಐನ್ ಮನೆಯಲ್ಲಿ ಮದುವೆ ಮಾಡಿಸಿದ್ದರೆಂದು ನನ್ನ ಅಜ್ಜಿ ದಿವಂಗತ ಕಾಳಮ್ಮನವರು ಹೇಳುತ್ತಿದ್ದರು. ಇದು ಈ ಮನೆಯ ಹೆಗ್ಗಳಿಕೆಯನ್ನು ತೋರಿಸಿಕೊಟ್ಟಿದೆ. ಅಲ್ಲದೆ ಅರ್ವತ್ತೊಕ್ಲು ಐನ್ ಮನೆಯ ಹತ್ತಿರ ಒಂದು ಸೇದು ಬಾವಿಯನ್ನು ಕಲ್ಲಿನಿಂದ ಕಟ್ಟಿಸಿ ಕುಟುಂಬದವರಿಗೆ ಒಳ್ಳೆ ನೀರು ಸಿಗುವಂತೆ ಮಾಡಿದರು. ಇದಲ್ಲದೆ ಬಡ-ಬಗ್ಗರಿಗೆ ಉದಾರವಾಗಿ ದಾನವನ್ನು ಮಾಡಿ ಆಗಿನ ಕಾಲದ ಒಬ್ಬ ಧೀಮಂತ ವ್ಯಕ್ತಿಯಾಗಿ ಬದುಕಿ ಬಾಳಿದ್ದಾರೆ.

ಇವರು 1875 ರಲ್ಲಿ ಕಟ್ಟಿಸಿದ ಮನೆ ಚಿಕ್ಕದಾದರು ಗಟ್ಟಿಯಾದ ಗೋಡೆಗಳು ಮತ್ತು ಉಪಯೋಗಿಸಿದ ಮರಗಳು ಸುಂದರವಾಗಿ ಕೆತ್ತಲ್ಪಟ್ಟಿವೆ. ಹಳೆಯಕಾಲದ ಶೈಲಿಯಿಂದ ಕೂಡಿರುವ ಈ ಮನೆಯು ದಿವಂಗತ ಶ್ರೀ ಅಪ್ಪಯ್ಯರವರ ಹೆಸರನ್ನು ಹೇಳುವ ಸ್ಮಾರಕವಾಗಿ ಇಂದಿಗೂ ಬಿಳಿಗೇರಿ ಗ್ರಾಮದಲ್ಲಿ ನಿಂತಿದೆ. ಇದನ್ನು ಉಳಿಸುವುದಕ್ಕಾಗಿ ಅವರ ಮೊಮ್ಮಕ್ಕಳು, ಮರಿಮಕ್ಕಳು ಸೇರಿ 2002 ನೇ ಇಸವಿಯಲ್ಲಿ ದುರಸ್ತಿ ಕೆಲಸವನ್ನು ಮಾಡಿಸಿ, ದಿನಾಂಕ 14-4-2003 ನೇ ಸೋಮವಾರ ಶ್ರೀ ಸತ್ಯನಾರಾಯಣ ಪೂಜಾ ವಿಧಿಯೊಡನೆ ನೆರವೇರಿಸಿದರು. ಅಲ್ಲದೆ ಕುಟುಂಬದವರ ಸಹಕಾರದೊಂದಿಗೆ ತವರು ಮನೆಯ ಪ್ರೇಮಿಗಳಾದ, ಇಂದಿರಾ, ಮಣಿಶೀಲಾವತಿ, ಮಾಚಮ್ಮ, ನಂಗಾರು ನಾಣಯ್ಯ, ನಂಗಾರು ನಿಂಗರಾಜು ಇನ್ನೂ ಹಲವರು ತಮ್ಮ ಸಹಾಯವನ್ನು ಈ ಐನ್ ಮನೆಯ ಜೀರ್ಣೋದ್ಧಾರ ಕಾರ್ಯಕ್ಕೆ ನೀಡಿದ್ದಾರೆ. ಕುಟುಂಬದ ಐನ್ ಮನೆಯ ದುರಸ್ತಿ ಕಾರ್ಯಕ್ಕೆ ನೆಂಟರಿಷ್ಟರು ಅಪಾರ ಸಂಖ್ಯೆ ಆಗಮಿಸಿದ್ದರು. ಈ ಶುಭ ಸಮಾರಂಭದಲ್ಲಿ ಸಂಗಾತಿಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರನವರು ಆಗಮಿಸಿ ಮೆಚ್ಚುಗೆಯ ಮಾತನಾಡಿದರು. ಕೊಡಗಿನ ಎಲ್ಲೆಡೆ ಐನ್ ಮನೆಗಳು ವಾಸವಿಲ್ಲದೆ ನಾಶವಾಗುತ್ತಿರುವಾಗಲೇ ಈ ಜೀರ್ಣೋದ್ಧಾರ ಕಾರ್ಯ ಶುಭ ಸೂಚನೆಯಾಗಿದೆ.

13.ದುರ್ಮುಖ, 14.ವಿಕರ್ಣ, 15.ಕರ್ಣ, 16.ಶಲ, 17.ವಿವಿಂಶತ, 18.ದುಷ್ಕರ್ಣ

ಇಕ್ಕೇರಿ ಗೌಡ ಅರಸರ ಮತ್ತು ಗುಂಡಣ್ಣ ಬಳಿಯ ಕುರಿತಾಗಿ - ಒಂದು ಅವಲೋಕನ.



ಸಂಶೋಧನೆ : ಕ್ರಿ. ಶ. ಪ್ರಾರಂಭದಲ್ಲಿ ಭೂತಾಳ ಪಾಂಡ್ಯ ಅರಸರು ತುಳುನಾಡಿನ ಕುಟುಂಬಗಳಿಗೆ 'ಬಳಿ'ಪ್ರಧಾನ ಮಾಡಿದಂತೆ ಇತಿಹಾಸದಲ್ಲಿ ಕಂಡುಬರುತ್ತದೆ. ಮೇಲ್ನೋಟಕ್ಕೆ ಇದೊಂದು ರಾಜಕೀಯವಾಗಿ ಕಂಡು ಬಂದರೂ, ಇದು ಹಲವಾರು ವಿಧದಿಂದ ಸಮಾಜದಲ್ಲಿ ಸುಸಂಸ್ಕೃತವಾಗಿ ಮುನ್ನಡೆದುದಲ್ಲದೆ, ಕೌಟುಂಬಿಕ ವ್ಯವಸ್ಥೆಯಲ್ಲಿ ಅಗ್ರಸ್ಥಾನ ಪಡೆದಿದೆ. ಮೊದಲಾಗಿ ಕುಟುಂಬಗಳನ್ನು ಹದಿನೆಂಟು ಬಳಿಗಳಿಂದ ವಿಭಾಗಿಸಿದ್ದರು. ಮುಂದೆ ಐದು ನೀರು ಬಳಿಗಳನ್ನು ಸೇರಿಸಿ, ಬಾರಕೂರು ಕೇಂದ್ರ ಅರಸರಿಂದ ಬಳಿ ಕೊಡುವ ಅಧಿಕಾರ ಸಂಸ್ಥಾನಧಿಪತಿಗಳಿಗೆ ದೊರೆಯಿತೆಂದು ಪೊಳಲಿ ಶೀನಪ್ಪ ಹೆಗ್ಡೆಯವರ ಸಮಗ್ರ ಇತಿಹಾಸದಲ್ಲಿ ಕಂಡು ಬರುವುದು. ಇದು ಸಮಾಜದ ವೈವಾಹಿಕ ಅನುಕೂಲತೆಗೆ ವರಪ್ರಸಾದವಾಯಿತು. "ಬಳಿ" ಅಂದರೆ ರಕ್ತಗುಣ ವಿಂಗಡಿಸುವ ಪ್ರಾಮಾಣಿಕ ವ್ಯವಸ್ಥೆ. ಒಂದೇ ರಕ್ತ ಗುಣವಿರುವ ದಂಪತಿಗಳಿಂದ ಹುಟ್ಟುವ ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗಳು ಕುಂಠಿತವಾಗಿ ಆದರ್ಶ ಮಕ್ಕಳನ್ನು ಪಡೆಯುವಲ್ಲಿ ವಿಫಲವಾದಂತೆ ಕಂಡು ಬಂದಿದೆ. ಇತ್ತೀಚೆಗೆ ಗೋಪಾಲನೆಯಲ್ಲಿಯೂ ಈ ಕುರಿತು ಸಂಶೋಧಕರು ಉಲ್ಲೇಖಿಸುತ್ತಾರೆ. "ಒಂದು ಹೋರಿಗೆ ಹುಟ್ಟಿದ ದನಕ್ಕೆ ಅದೇ ಹೋರಿಯಿಂದ ಜೋಡಿ ಮಾಡಿಸಬಾರದೆಂದು ಕೊಡುವ ಸಲಹೆ ಒಪ್ಪತಕ್ಕದ್ದಾಗಿದೆ. ಇದೇ ರೀತಿ ಕೃಷಿ ರಂಗದಲ್ಲಿಯೂ ಸ್ವಲ್ಪಾಂಶ ಕಂಡು ಬರುತ್ತದೆ. ಘಟ್ಟದ ಮೇಲಿನ ಏಲಕ್ಕಿ, ಕಿತ್ತಳೆ ನಮ್ಮ ತುಳು ನಾಡಿನಲ್ಲಿ ಸರಿಯಾಗಿ ಬೆಳೆಯುವುದಿಲ್ಲ. ನಮ್ಮ ತುಳುನಾಡಿನ ಅಡಿಕೆ, ಗೇರು ಘಟ್ಟದ ಮೇಲೆ ಸರಿಯಾಗಿ ಬೆಳೆಯುವುದಿಲ್ಲ. ಹಲವೆಡೆ ಬೆಳೆದರೂ ಫಲ ಮಾತ್ರ ಕಾಣಲಾರರು. ಬೇರೆ ಬೇರೆ ಬಳಿಗಳ ರಕ್ತಗುಣ ಬೇರೆ ಬೇರೆ ಇರುವುದರಿಂದ ಮಾನವ ಬೀಜ ಬಿತ್ತುವ ಮಣ್ಣು ಬೆಳೆಗೆ ಯೋಗ್ಯವಾಗಿರಲೇಬೇಕು. ಒಂದು ಬಳಿ ಎಲ್ಲಾ ಬಳಿಗೆ ಹೊಂದಿಕೊಂಡಿರುವುದಿಲ್ಲ. ಉತ್ತಮ ಬಳಿಯೆಂದು ಹೇಳಿಕೊಳ್ಳುವವರಿಗೂ ಹಲವು ಬಳಿಗಳು ಕೂಡಿ ಬರುವುದಿಲ್ಲ. ಇದು ವೈಜ್ಞಾನಿಕವಾಗಿಯೂ ಸರಿಯೆಂದು ವಿದ್ವಾಂಸರು ಹೇಳುತ್ತಾರೆ. ಅಕ್ರಮ ಸಂಬಂಧಗಳಿಂದ ಸಮಸ್ಯೆಯುಂಟಾದಾಗ ವೈದ್ಯರು ರಕ್ತಗುಣ ಕಂಡು ಹಿಡಿದು, ಸತ್ಯ ಹೊರ ಹಾಕುತ್ತಾರೆ. ಹೀಗಾಗಿ ಸಂಶೋಧಕರು ಹೇಳುವಂತೆ ರಕ್ತಗುಣ ಪರೀಕ್ಷಿಸಿ ವಧೂವರರ ಆಯ್ಕೆ ಮಾಡಬಹುದು.

ಗುಂಡಣ್ಣ ಬಳಿಯವರು ಗೌಡರಲ್ಲಿ ಮಾತ್ರ ಇರುವುದಲ್ಲ. ತುಳು ನಾಡಿನ ಪ್ರಾಚೀನ ವಂಶದಲ್ಲಿಯೂ ಕಂಡು ಬರುತ್ತದೆ. ತುಳು ನಾಡಿನಲ್ಲಿ ಬಳಿ ಆರಂಭವಾದಾಗಲೇ, ಗುಂಡಣ್ಣ ಬಳಿ ಪ್ರಧಾನ ಮಾಡಿದ್ದಾರೆ. ಗುಂಡಣ್ಣ ಬಳಿಯವರನ್ನು ಮತ್ತು ಸಮಾಜದ ಹಿರಿಯರನ್ನು ಸಂಪರ್ಕಿಸಿದಾಗ ಗುಂಡಣ್ಣ ಬಳಿಯ ಕುರಿತಾಗಿ ಈ ರೀತಿ ಅಭಿಪ್ರಾಯಗಳು ಸಿಗುತ್ತವೆ. ಸಮಾಜದಲ್ಲಿ ಗುಂಡು ಕಲ್ಲಿನಂತೆ ಹೊರಳಿ ತಪ್ಪಿಸಿಕೊಳ್ಳುವ ಈ ಬಳಿ ಬಂದಿತಂತೆ! ಇನ್ನೊಂದು ಹೇಳಿಕೆ ಬೇರೆಯೇ ಇದೆ. ಸಮಾಜದಲ್ಲಿ ನ್ಯಾಯವನ್ನು ತೀರಿಸುವ ಕಟ್ಟೆಗಳು ಆದಿಯಲ್ಲಿಯೇ ಇದ್ದುವಂತೆ. ನ್ಯಾಯ ಕಟ್ಟೆಗಳಂತೆ ಕುಳಿತ ರಾಜ ಪ್ರತಿನಿಧಿ ವಿಧಿಸಿದ ನ್ಯಾಯ ತೀರ್ಮಾನಕ್ಕೆ ಒಪ್ಪದವನೊಬ್ಬ, ನ್ಯಾಯವಾದಿಯನ್ನು ಗುಂಡದಿಂದ ಎಳೆದು ಹಾಕಿ ಒದ್ದು ಪರಾರಿಯಾದವನಿಗೆ ಗುಂಡಣ್ಣ ಬಳಿ ಕೊಡಲಾಯಿತೆಂದು ಹೇಳುವರು. ಇದು ಆದಿಮೂಲ ತುಳುವರ ಬಳಿ ಕುರಿತಾಗಿ ಕೇಳಿ ಬರುವ ಕತೆಗಳು. ಗೌಡರು ತುಳುನಾಡಿನ ಆದಿಮೂಲ ಜನಾಂಗದವರಲ್ಲ. 16 ನೇ ಶತಮಾನದ ಆದಿ ಭಾಗದಲ್ಲಿ ತುಳುನಾಡಿಗೆ ಬಂದವರೆಂದು ತಿಳಿದು ಬರುತ್ತದೆ. ಇವರಲ್ಲಿಯೂ ಗುಂಡಣ್ಣ ಬಳಿಯಿದೆ. ಇವರಿಗೆ ಗುಂಡಣ್ಣ ಬಳಿ ಬಂದ ಬಗೆ ಬೇರೆಯೇ ಇತಿಹಾಸನೆ ಇದೆ.

16ನೇ ಶತಮಾನದಲ್ಲಿ ಗೌಡರು ತುಳುನಾಡಿಗೆ ಬಂದಾಗ ತುಳುನಾಡಿನ ಬಳಿ ಪದ್ಧತಿಯನ್ನು ಸ್ವೀಕರಿಸಬೇಕಿತ್ತು. ರಾಜ ಪ್ರತಿನಿಧಿ ಬಂದವರನ್ನು ಒಟ್ಟುಗೂಡಿಸಿ ಬಳಿ ನಿರ್ಣಯಿಸುವ ಕಾರ್ಯಕ್ರಮಕ್ಕೆ ಮುಂದಾದ. ಬಳಿ ಕೊಡುವಾಗ ಕುಟುಂಬದ ಇತಿಹಾಸ, ಸದ್ಗುಣ, ದುರ್ಗುಣಗಳನ್ನು ಅವಲೋಕಿಸಿ ಬಳಿ ಕೊಟ್ಟ. ಇವರ ಪೈಕಿ ಒಬ್ಬನನ್ನು ವಿಚಾರಿಸಿದಾಗ "ನನ್ನ ಹಿರಿಯರು ಮಹಾರಾಜರಾಗಿದ್ದು ವಿರೋಧಿಯನ್ನು ಗುಂಡದಲ್ಲಿಯೇ ತಲೆ ಕಡಿದವರೆಂದು ವಿವರವಿತ್ತ. ತುಳುನಾಡಿನ ಗುಂಡಣ್ಣ ಬಳಿಯ ಕತೆಗೆ ಪೂರಕವಾಗಿ ಈತನಿಂದ ವಿವರ ಸಿಕ್ಕಿತು. ಹಾಗೆ ಇವನಿಗೂ ಗುಂಡಣ್ಣ ಬಳಿ ಕೊಡಲಾಯಿತೆಂದು ಹೇಳುವ ಮೌಖಿಕ ಕತೆಗಳನ್ನು ಹಳ್ಳಿಯಲ್ಲಿ ಈಗಲೂ ಕೇಳಬಹುದು. ಇಲ್ಲಿಯೇ ನಡೆದಿದೆಯೆನ್ನಲಾದ ಬೇರೊಂದು ಕತೆ ಇದೆ. ಬಳಿ ಪ್ರಧಾನ ಮಾಡಿದ ರಾಜ ಪ್ರತಿನಿಧಿ, ತನ್ನ ಕೆಲಸ ಮುಗಿಸಿದವನು- ಮೂತ್ರಶಂಕೆ ಮಾಡಲು ಹೋದ. ತಡವಾಗಿ ಬಂದವರು ಅಲ್ಲಿಗೆ ಹೋಗಿ ಅವರ ಬಳಿಯೇನೆಂದು ಕೇಳಿದಾಗ ಮುನಿಸಿಕೊಂಡ ಪ್ರತಿನಿಧಿ ನಿನಗೆ ಇದೇ ಬಳಿ.... ಅಂದರೆ "ತುಣ್ಣೆ ಬಳಿ" ಅಂದು ಬಿಟ್ಟ. "ತುಣ್ಣೆ ಬಳಿ" ಅಶ್ಲೀಲವಾದ್ದರಿಂದ ಮುಂದೆ ಈ ಬಳಿಯವರು ಗೌಡ ಬಳಿ ಎಂದು ಹೆಸರು ಬದಲಾಯಿಸಿ ಕೊಂಡರಂತೆ. ಇದರಿಂದ ಏನು ಅರ್ಥವಾಗುವುದೆಂದರೆ ಗೌಡರಿಗೆ ಮೊದಲು ಬಳಿಯಿರಲಿಲ್ಲ. ಇಲ್ಲಿಗೆ ಬರುವಾಗ ಬಳಿ ಬೇಕಾಯಿತು. ಇಲ್ಲಿ ಬಳಿ ಪಡೆದು ಇರುವಾಗ ಇಲ್ಲಿಯ ಅನೇಕರು

19.ಚಿತ್ರ, 20.ಸತ್ವ, 21.ಉಪಚಿತ್ರ, 22.ಸುಲೋಚನ, 23.ಚಿತ್ರಾಕ್ಷ, 24.ದುರ್ಮದ

ಕೊಡಗಿನ ವೀರರಾಜನ ಕೆರೆಬಂತು. ಅಲ್ಲಿ ಭೂಮಿ ಒದಗಿಸುವುದಾಗಿ ಭರವಸೆ ಕೊಟ್ಟ ಹಾಗೆಯೇ ಇಲ್ಲಿಯ ಅನೇಕರು ಅಲ್ಲಿಗೆ ವಲಸೆ ಹೋದರು. ಇದು ವೀರ ರಾಜೇಂದ್ರ (1790-1809) ನ ಕಾಲದಲ್ಲಿಯೆಂದು ತಿಳಿಯಲಾಗಿದೆ. ಇಲ್ಲಿ ಬಳಿ ಪಡೆದವರು ಕೊಡಗಿನಲ್ಲಿಯೂ ಬಳಿ ಉಳಿಸಿಕೊಂಡಂತೆ ತಿಳಿದು ಬರುತ್ತದೆ.

'ಗುಂಡ' ಎಂದರೆ ದೇವರ ಪೀಠ, ರಾಜರು ಕುಳಿತುಕೊಳ್ಳುವ ಪೀಠಕ್ಕೂ ಗ್ರಾಮ್ಯವಾಗಿ ಗುಂಡ ಎನ್ನುವ ರೂಢಿ ಇತ್ತು. ರಾಜಪ್ರತಿನಿಧಿಗೂ ಅದೇ ಹೆಸರು ಮಾಮೂಲಾಯಿತು. ರಾಜ ಪ್ರತಿನಿಧಿ ಮತ್ತು ದೊಡ್ಡ ಮನುಷ್ಯರನ್ನು "ದೇವರು" ಎಂದು ಕರೆಯುವ ವಾಡಿಕೆ ಹೆಚ್ಚಾಗಿತ್ತು. ಇದೊಂದು ಗೌರವ-ಆದರದ ಪ್ರತೀಕವಾಗಿ ಕಂಡು ಬರುತ್ತದೆ. "ದೇವರೇ ಅಡ್ಡ ಬಿದ್ದೆ" ಎಂದು ಪ್ರತಿಷ್ಠಿತರನ್ನು ದೀನ ದಲಿತರು ಕರೆಯುವ ಪದ್ಧತಿ ಈಗಲೂ ಹಳ್ಳಿಗಳಲ್ಲಿ ಕಂಡು ಬರುತ್ತದೆ.

ಗುಂಡಣ್ಣ ಬಳಿಯವರಿಗೆ ಹೊರಿಸಿಲಾದ ಅಪವಾದಗಳು :

ಇವರು ಗುಂಡದಲ್ಲಿ ತಲೆ ಕಡಿದವರೆಂದೂ ವಿಶ್ವಾಸಕ್ಕೆ ಪಾತ್ರರಲ್ಲವೆಂದು ಪ್ರಚಾರವಾಯಿತು. ಬಲಾಢ್ಯ ಅರಸನೊಬ್ಬ ಗೌಡ ರಾಜ್ಯದ ಮೇಲೆ ಧಾಳಿ ಮಾಡಿ ಸ್ವತಂತ್ರಹರಣ ಮಾಡಿ ಗುಲಾಮನಂತೆ ಮಾಡಿದಕ್ಕೆ ಪ್ರತಿಯಾಗಿ ಯುದ್ಧ ತಂತ್ರ ಬಳಸಿದ್ದು ತಪ್ಪೇನಿಲ್ಲ. ಶ್ರೀ ರಾಮಚಂದ್ರನೇ ವಾಲಿಯನ್ನು ಮೋಸದಿಂದ ಕೊಂದಿಲ್ಲವೇ?

ಗುಂಡಣ್ಣ ಬಳಿಯಿಂದ ಹೆಣ್ಣು ತಂದರೆ ವಂಶವೇ ನಾಶವೆಂದು ಹೇಳುವವರಿದ್ದಾರೆ. ಇಂತಹ ಹಗರಣದ ಮಾತಿಗೆ ಕೆಲವರು "ತಾವು ಹಾಲು ಗುಂಡಣ್ಣನವರೆಂದು ನುಣುಚಿಕೊಂಡ ಉದಾಹರಣೆಗಳೂ ಇವೆ. ಇದು ಬರೇ ಭ್ರಮೆ. ಯಾವ ಗುಂಡಣ್ಣನವರು ದೋಷಕಾರರಲ್ಲ. ರಕ್ತಗುಣ ಹೊಂದಿಕೊಳ್ಳುವ ಬಳಿಗೆ ಇವರು ಕಲ್ಪವೃಕ್ಷದಂತೆ. ಇದಕ್ಕೆ ಪ್ರತ್ಯಕ್ಷ ಉದಾಹರಣೆಗಳು ಸಿಗುತ್ತವೆ. ಸಂತಾನ ಭಾಗ್ಯ ಆಗದೆ ಹೋದರೆ ಬಳಿಯ ಪ್ರಭಾವವಲ್ಲ. ಅದು ಅವರ ದೈಹಿಕ ದೋಷಗಳೆಂದು ತಿಳಿಯಬೇಕು. ಕೂಡಿ ಬರುವ ಬಳಿಗಳು ದಂಪತಿಗಳಿಂದಲೂ ಮಕ್ಕಳಾಗದ ಉದಾಹರಣೆಗಳು ಸಾಕಷ್ಟಿವೆ. ಗುಂಡಣ್ಣ ಬಳಿಯ ವಿಚಾರವಾಗಿ ಅಧ್ಯಯನ ಮಾಡುತ್ತಾ ಹೋದರೆ ಹೊಸ ಹೊಸ ವಿಚಾರಗಳು ಕಂಡು ಬರುತ್ತವೆ. ಗುಂಡಣ್ಣ ಬಳಿಯವರು ಸ್ವಾಭಾವಿಕವಾಗಿ ಧೀರರು, ಕಷ್ಟ ಸಹಿಷ್ಣುಗಳು, ಸಮಾಜದ ಮುಂದಾಳುಗಳು, ರಾಜಕೀಯ ನೈಪುಣ್ಯತೆ ಪಡೆದವರು. ಗುಂಡಣ್ಣ ಬಳಿಯ ಹುಡುಗಿಯರು ಹೋದಲ್ಲೆಲ್ಲಾ ಉದ್ಧಾರವಾಗಿದೆ. ಆಗದೆ ಹೋದರೆ ಅವಳಿಂದಲ್ಲ. ಅವಳನ್ನು ಮದುವೆಯಾದ ವರ ಮಹಾಶಯನ ದುರ್ನಡತೆಯಿಂದ ಎಂದು ಕಂಡು ಬಂದಿದೆ. ಈ ಮಾತಿನ ಅರ್ಥ ಇಷ್ಟೆ. ಕುಣಿಯಲಾರದವ ವೇದಿಕೆ ಮತ್ತು ಹಿಮ್ಮೇಳ ಸರಿಯಿಲ್ಲ ಎಂದಂತೆ.

ಕಡಬ ಪ್ರದೇಶದಲ್ಲಿ ಒಂದು ಮಧ್ಯಮ ದರ್ಜೆಯ ಸುಂದರ ಹುಡುಗಿ ಗುಂಡಣ್ಣಳೆಂದು, ಮದುವೆಯಾಗುವವರು ಯಾರೂ ಮುಂದೆ ಬಾರದಾಗ ಬೆಳ್ತಂಗಡಿಯ ಹುಡುಗನೊಬ್ಬ ಗುಂಡಣ್ಣ ಬಳಿಯ ಹುಡುಗಿಯೇ ಬೇಕೆಂದು ಬಂದವನು ಈ ಹುಡುಗಿಯನ್ನು ಮದುವೆಯಾದನು. ಅವನ ತಂದೆ ಹೆಮ್ಮನ ಬಳಿಯವರು. ತಾಯಿ ಗುಂಡಣ್ಣ ಬಳಿಯವರು. ಇವರು ಬಡವರಾಗಿದ್ದರು. ಮುಂದೆ ಶ್ರೀಮಂತರಾದರು. ಅವರಿಗೆ ನಾಲ್ಕು ಮಂದಿ ಗಂಡು ಮಕ್ಕಳು, ಮೊದಲನೆಯವನು ಊರ ಪಂಚಾಯತಿದಾರನಾಗಿ ಮುಂದೆ ಪಂಚಾಯತು ಅಧ್ಯಕ್ಷನಾದ. ಇಬ್ಬರು ಪದವೀಧರರಾಗಿ ಪ್ರೌಢಶಾಲೆಯ ಅಧ್ಯಾಪಕರಾದರು. ಕೊನೆಯವನೇ ಮೇಲೆ ಹೇಳಿದ ಯುವಕ..... ಕೃಷಿಕನಾಗಿ ಈಗ ಲಕ್ಷಾಧಿಪತಿ. ಇವರಿಗೆ ಮುದ್ದಾದ ಎರಡು ಮಕ್ಕಳು. ಶಾಲಾ ತರಗತಿಗಳಲ್ಲಿ ಅವರೇ ಮುಂದು. ಇನ್ನೊಂದು ಸೋಜಿಗದ ಕತೆ ಇಂತಿದೆ. ಬಂಗಾರು ಬಳಿಯ ಹುಡುಗನೊಬ್ಬ ಗುಂಡಣ್ಣ ಬಳಿಯ ಹುಡುಗಿಯನ್ನು ಪ್ರೀತಿಸಿ ಮದುವೆಯಾಗುವ ಏರ್ಪಾಡು ಮಾಡಿ ತಂದೆಗೆ ತಿಳಿಸಿದ. ಗುಂಡಣ್ಣ ಬಳಿಯ ಹುಡುಗಿಯೆಂದು ಹೌಹಾರಿದ ತಂದೆ. ಮಗ ಮಾತ್ರ ಕೃತಕ ತಂದೆಯನ್ನು ನೇಮಿಸಿ ಮದುವೆಯಾಗಿಯೇ ಬಿಟ್ಟ. ಆ ತಂದೆಗೆ ಐದು ಮಂದಿ ಮಕ್ಕಳು. ಅವರಿಗೆ ಬೇರೆ ಬೇರೆ ಮನೆಯೂ ಇತ್ತು. ಗುಂಡಣ್ಣ ಬಳಿಯ ಹುಡುಗಿಯ ಮನೆ ಹೊಸಲನ್ನೇ ತಂದೆ ಮೆಟ್ಟುತ್ತಿರಲಿಲ್ಲ. ಕಾಲ ಉರುಳಿತು. ಇವನ ಇತರ ನಾಲ್ಕು ಮಂದಿ ಮಕ್ಕಳು ದಿವಾಳಿಯಾಗಿ ಊರು ಬಿಟ್ಟು ಹೋದರು. ನಮ್ಮ ಗುಂಡಣ್ಣ ಬಳಿಯ ಹುಡುಗಿಯ ಪತಿ, ತನಗಿದ್ದ ಐವತ್ತು ಸೆಂಟ್ಸ್ ಜಾಗಕ್ಕೆ ಒಂದು ಎಕ್ರೆ ಸೇರಿಸಿ ಅಡಿಕೆ ತೋಟ ಮಾಡಿ ಐದಾರು ಖಂಡಿ ಅಡಿಕೆಯ ಮಾಲಿಕನಾದ. ಚಿಕ್ಕದಾದರೂ ಅಂದವಾದ ಮನೆ ಕಟ್ಟಿಕೊಂಡ. ಚಿಕ್ಕ ಚಿಕ್ಕ ಮೂರು ಮಕ್ಕಳು. ಅವರು ಕಲಿಯುತ್ತಿರುವ ಪ್ರಾಥಮಿಕ ಶಾಲೆಯಲ್ಲಿ ಶೇಕಡಾ 60 ಕ್ಕಿಂತ ಹೆಚ್ಚು ಮಾರ್ಕು ಪಡೆದು ಕಲಿಯುತ್ತಿದ್ದಾರೆ. ಪ್ರಾಯ ತುಂಬಿದ ತಂದೆ, ಗುಂಡಣ್ಣ ಬಳಿಯ ಸೊಸೆಯ ಕೈನೀರು ಕುಡಿದು ಸ್ವರ್ಗ ಪದವಿ ಏರಿದ. ಸುಳ್ಯ ಪ್ರದೇಶದ ಇನ್ನೊಂದು ಕತೆ ಹೀಗಿದೆ. ಅಲ್ಲೊಂದು ಗುಂಡಣ್ಣ ಬಳಿಯ ಕುಟುಂಬ. ಈ ಕುಟುಂಬದಿಂದ ಬಂಗಾರು ಬಳಿಯ ಹುಡುಗನೊಬ್ಬ ಮದುವೆಯಾದ. ಮುಂದೆ ಈ ಪತಿಪತ್ನಿಯರು ಹಂತ ಹಂತವಾಗಿ ಏರಿ ಶ್ರೀಮಂತರಾದರು. ಮನೆ ತುಂಬಾ ಮಕ್ಕಳಾದವು. ಈಗ ಆ ಗುಂಡಣ್ಣ ಬಳಿಯ ಕುಟುಂಬದ ಕನ್ಯೆಯರನ್ನು ಸರತಿ ಸಾಲಿನಂತೆ ಬಂದು ಮದುವೆಯಾಗುತ್ತಾರೆ. ಅವರು ಹಾಲು ಗುಂಡಣ್ಣನವರೆಂದು ದೊಡ್ಡ ಪ್ರಚಾರವೂ ಆಗಿದೆ. ಹೇಗಿದೆ ನೋಡಿ ಗುಂಡಣ್ಣ ಬಳಿಯ ಕತೆ?

ಗುಂಡಣ್ಣ ಬಳಿಯವರು ರಾಜವಂಶದವರು :

ಇತಿಹಾಸ ಪ್ರಾಜ್ಞರು ಬರೆದಿರುವ ಇತಿಹಾಸದಲ್ಲಿ ಗುಂಡಣ್ಣನವರು ರಾಜವಂಶೀಯರೆಂದು ಕಂಡುಬಂದಿದೆ. ಗೌಡರ ಮೂಲ ಬಂಗಾಳವೆಂದು ಎಲ್ಲರೂ ತಿಳಿದ ವಿಚಾರ. ಥಾನೇಶ್ವರದ ರಾಜ-ರಾಜವರ್ಧನ ಪಟ್ಟವೇರಿದ ಕೂಡಲೇ ರಾಜ್ಯ

25.ಶರಾಸನ, 26.ಚಾರುಮಿತ್ರ, 27.ವಿವತ್ತು, 28.ದುರ್ವಿಗಾಹ, 29.ಊರ್ಣನಾಭ

ವಿಸ್ತರಿಸುವುದಕ್ಕಾಗಿ ದಂಡಯಾತ್ರೆ ಕೈಗೊಂಡ. ಬಲಾಢ್ಯನಾದ ಈತ ಬಂಗಾಳದ ಗೌಡ ದೇಶಕ್ಕೆ ಧಾಳಿ ಮಾಡಿದ. ಆತನ ಧಾಳಿ ಎದುರಿಸಲಾರದ ಶಶಾಂಕ ಗೌಡ ಅವನ ಸಾರ್ವಭೌಮತ್ವಕ್ಕೆ ತಲೆಬಾಗಿ, ಅವನ ವಿಜಯಯಾತ್ರೆಗೆ ಸಹಭಾಗಿಯಾಗ ಬೇಕಾಯಿತ್ತು.

ಮುಂದುವರಿದ ರಾಜವರ್ಧನ ಅನೇಕ ರಾಜರನ್ನೂ ಗೆದ್ದುಕೊಂಡು ವಿಜಯ ಪತಾಕೆ ಹಾರಿಸುತ್ತಲೇ ಸಾಗಿದ. ಅದೊಂದು ದಿನ ಪೀಠದಲ್ಲಿ ಕುಳಿತು ನೀರು ಕುಡಿಯುತ್ತಿದ್ದಾಗ ಹಿಂದಿದ್ದ ಶಶಾಂಕ ರಾಜವರ್ಧನನ ಕುತ್ತಿಗೆಗೆ ಕಡಿದು ರುಂಡ ಹಾರಿಸಿದ. ರಾಜವರ್ಧನನ ಮರಣದಿಂದ ಈತನ ಸೈನ್ಯ ಮನೋಸ್ಥೈರ್ಯ ಕಳೆದು ಯುದ್ಧ ಮಾಡಲಾರದೆ ದಿಕ್ಕು ಪಾಲಾದರು. ಶಶಾಂಕ ಗೌಡನು ಸ್ವತಂತ್ರ ರಾಜನಾಗಿ ಮೆರೆದ. ಆದರೆ ? ರಾಜವರ್ಧನನ ತಮ್ಮ ಹರ್ಷವರ್ಧನನು ಅಣ್ಣನ ದುರಂತಕ್ಕೆ ಸಿಡಿದೆದ್ದವನು ಗೌಡರ ಮೂಲವನ್ನೇ ನಾಶಮಾಡಲು ಪಣ ತೊಟ್ಟು, ಗೌಡ ದೇಶಕ್ಕೆ ರಣ ಭಯಂಕರವಾಗಿ ಮುತ್ತಿಗೆ ಹಾಕಿದನು. ಹರ್ಷವರ್ಧನನ ದಾಳಿ ಎದುರಿಸಲಾರದ ಶಶಾಂಕ ಜೀವದಾಸೆಯಿಂದ ಪ್ರಜಾ ಪರಿವಾರದೊಡನೆ ದಕ್ಷಿಣ ಹಿಂದೂಸ್ಥಾನಕ್ಕೆ ಓಡಿ ಬರಬೇಕಾಯಿತು. ನರ್ಮದಾ ನದಿ ದಾಟಿದ ಶಶಾಂಕ ಇಮ್ಮಡಿ ಪುಲಿಕೇಶಿಯ ಆಶ್ರಯ ಪಡೆದನು. ಚಾಲುಕ್ಯರಲ್ಲಿ ಪ್ರಸಿದ್ಧನಾದ ಈತ ಅಶ್ವಮೇಧಯಾಗವನ್ನೇ ಮಾಡಿ ಕೀರ್ತಿ ಗಳಿಸಿಕೊಂಡವನು. ಹರ್ಷವರ್ಧನ ಶಶಾಂಕನ ಸೇಡಿನಿಂದ ಪುಲಿಕೇಶಿಯ ರಾಜ್ಯಕ್ಕೆ ದಾಳಿ ಮಾಡಿದ. ನರ್ಮದಾ ನದಿ ತೀರದಲ್ಲಿ ಘನ ಘೋರ ಯುದ್ಧವಾಗಿ "ಉತ್ತರಾ ಪಥೇಶ್ವರ" ಬಿರುದಾಂಕಿತ ಹರ್ಷವರ್ಧನನೇ ಸೋತು ಹಿಮ್ಮೆಟ್ಟಬೇಕಾಯಿತು. ಮುಂದೆ ಶಶಾಂಕನ ವಂಶ ಮತ್ತು ಪ್ರಜಾ ಪರಿವಾರ ದಕ್ಷಿಣ ಹಿಂದೂ ಸ್ಥಾನದ ಎಲ್ಲಾ ಕಡೆ ಪಸರಿಸಿದರು. ಇದು ಏಳನೇ ಶತಮಾನದ ಮಧ್ಯಭಾಗದ ಐತಿಹಾಸಿಕ ಘಟನೆ. ಮುಂದೆ ಅನೇಕ ಶತಮಾನಗಳು ಉರುಳಿದವು. ಆ ವಂಶಗಳು ಅತ್ಯಧಿಕವಾಗಿ ಬೆಳೆದು ಕರ್ನಾಟಕ, ಆಂಧ್ರ ಪ್ರದೇಶಗಳಿಗೂ ಹಬ್ಬಿದವು. ಇವರು ವರ್ಚಸ್ಸು ಪಡೆದವರಾಗಿ ಗ್ರಾಮ ಪ್ರಮುಖ (ಯಜಮಾನ) ಗೌಡರೆಂದು ಎಲ್ಲಾ ಕ್ಷೇತ್ರಗಳಲ್ಲಿ ಪ್ರಖ್ಯಾತರಾದರು.

ಇಕ್ಕೇರಿ ಗೌಡರಸರು :

ಇಕ್ಕೇರಿಯಲ್ಲಿ ಬಸಪ್ಪ ಮತ್ತು ಬಸವ್ವ ಪತಿಪತ್ನಿಯರಾಗಿ ಗ್ರಾಮಾಧಿಪತಿಗಳಾಗಿದ್ದರು. ಕ್ರಿ. ಶ. 1399 ರಲ್ಲಿ ಒಂದು ಸಣ್ಣ ರಾಜ್ಯ ಕಟ್ಟಿದರು. ಇವರ ಮಕ್ಕಳಾದ ಚೌಡಪ್ಪ ಗೌಡ ಮತ್ತು ಭದ್ರಪ್ಪ ಗೌಡರು ತಮ್ಮ ರಾಜ್ಯವನ್ನು ವಿಸ್ತರಿಸಿ, ವಿಜಯನಗರದ ಅಧೀನ ಅರಸರಾದರು. ಭದ್ರಪ್ಪ ಗೌಡರ ಮಗ ಸದಾಶಿವ (1514-1546) ಪಟ್ಟಕ್ಕೆ ಬಂದಾಗ ವಿಜಯನಗರದ ಮೂಡು ಪ್ರದೇಶಕ್ಕೆ ಮುಸ್ಲಿಮರ ಮತ್ತು ಬೇಡರ ದಾಳಿಯಾಯಿತು. ಸದಾಶಿವನಾಯಕ ಮುಖಂಡರಾಗಿ ದಾಳಿಯನ್ನು ಹಿಮ್ಮೆಟ್ಟಿಸಿ ಓಡಿಸಿದ ಮುಸ್ಲಿಮರ ಅನೇಕ ಪ್ರದೇಶಗಳನ್ನು ಗೆದ್ದು ಕೊಂಡದಲ್ಲದೆ ಅನೇಕ ಕೋಟೆಗಳನ್ನೂ ವಶಪಡಿಸಿಕೊಂಡ. ತುಳುನಾಡಿನ ಭೈರಾದೇವಿ ಮತ್ತು ಇತರ ಮಾಂಡಲಿಕರು ದಂಗೆ ಎದ್ದಾಗ, ಅವರನ್ನು ನಿಗ್ರಹಿಸಿ ಸರಿಯಾಗಿ ಕಪ್ಪ ಕಾಣಿಕೆ ದೊರೆಯುವಂತೆ ಮಾಡಿದನು. ಇದರಿಂದ ತೃಪ್ತರಾದ ವಿಜಯನಗರದರಸರುಗಳು ಸಮಗ್ರ ತುಳುನಾಡನ್ನು ಮತ್ತು ಕೇರಳದ ನೀಲೇಶ್ವರವನ್ನು ಸದಾಶಿವ ನಾಯಕನಿಗೆ ಬಿಟ್ಟುಕೊಟ್ಟು ತಮ್ಮ ಪ್ರಾಮಾಣಿಕ ಅಧೀನ ರಾಜನನ್ನಾಗಿ ಮಾಡಿಕೊಂಡರು. ರಾಜ ಭವನಕ್ಕೆ ಕರೆದು 'ನಾಯಕ ಮಣಿ' ಎಂಬ ಬಿರುದು ಕೊಟ್ಟರು. ಮುಂದೆ ನಾಯಕರೆಂದೇ ಆತನ ವಂಶ ಮುಂದುವರಿಯಿತು. ಸದಾಶಿವನಾಯಕ ಮೊದಲಾಗಿ ಸುಬ್ರಹ್ಮಣ್ಯಕ್ಕೆ ಬಂದಾಗ ಎಲ್ಲೆಲ್ಲೂ ಕಾಡಾಗಿತ್ತು. ಸುಬ್ರಾಯ ದೇವರ ನಿತ್ಯ ಪೂಜೆಗೂ ಕಷ್ಟವಾಗಿತ್ತು. ದೈವ ದೇವರ ಆರಾಧನೆ ಸರಿಯಾಗಿ ನಡೆಯುವಂತಾಗಲು, ಇಕ್ಕೇರಿಯ ಸುತ್ತಮುತ್ತಲಿನ ಪ್ರದೇಶಕ್ಕೆ ಅದೆಷ್ಟೋ ಗೌಡ ಜನಾಂಗವನ್ನು ಬರಮಾಡಿ ಸುಬ್ರಹ್ಮಣ್ಯ ಪ್ರದೇಶದಲ್ಲಿ ನೆಲೆಗೊಳಿಸಿದರು. ಈ ಪೈಕಿ ಕೂಜುಗೋಡು ಮನೆಯವರು ಸುಬ್ರಾಯ ದೇವರ ಮೊಕ್ತೇಸರರಾಗಿಯೂ, ಬಿಳಿನೆಲೆ (ಪಠೇಲರ ಮನೆ)ನಡ್ರೋಟ್ಟು, ಚಾವಡಿ ಮನೆ, ಹೊಸೊಳಿಕೆ ಕೊಲ್ಲಮೊಗರು ಚಾವಡಿ ಕಟ್ಟೆಮನೆ ಮುಂತಾದ ಹಲವರನ್ನು ಸಹಾಯಕರನ್ನಾಗಿಯೂ ನೇಮಿಸಿ ಸುಬ್ರಾಯ ದೇವರ ಪೂಜಾದಿ ಸೇವೆಗಳು ಸರಿಯಾಗಿ ಆಗುವಂತೆ ವ್ಯವಸ್ಥೆ ಮಾಡಿದನು. ಇಲ್ಲಿಗೆ ಬಂದ ಗೌಡ ಜನಾಂಗದವರಿಂದ ಪ್ರಭಾವಿತನಾಗಿ ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ ಮುಂತಾದ ಪ್ರದೇಶಗಳಿಗೂ ಗೌಡರನ್ನು ತಂದು ನೆಲೆ ಗೊಳಿಸಿದನೆಂದು ಕಂಡು ಬರುತ್ತದೆ. ತುಳುನಾಡಿನಲ್ಲಿ ಆದಿಮೂಲ ದೈವ ದೇವರನ್ನು ನಂಬದೆ ಹೋದಲ್ಲಿ ಸರ್ವನಾಶವೆಂದು ತಿಳಿದುಕೊಂಡ ಸದಾಶಿವನಾಯಕ ಗ್ರಾಮ, ಮಾಗಣೆಗಳ ಜನರ ಆರಾಧನೆಗೆ ದೈವ ದೇವರ ಸ್ಥಾನಗಳನ್ನು ಗುರುತಿಸಿ ಆಯಾ ಪ್ರದೇಶದವರ ಮೊಕ್ತೇಸರಿಕೆಯಿಂದಲೇ ಆಡಳಿತ ನಡೆಸುವ ಏರ್ಪಾಡು ಮಾಡಿದನು. (ನಿಮ್ಮ ಗ್ರಾಮ ಮತ್ತು ಮಾಗಣೆಯ ಗತ ಕಾಲದ ಆಡಳಿತ ಕ್ರಮವನ್ನು ಅಧ್ಯಯನ ಮಾಡಿ)ಸುಬ್ರಾಯ ದೇವರ ನಿತ್ಯ ಪೂಜೆಗೆ ಮತ್ತು ದೀಪಾರಾಧನೆಗೆ ಉಂಬಳಿ ಉತ್ತರಗಳನ್ನು ಒದಗಿಸಿದನು. ಸುಬ್ರಹ್ಮಣ್ಯ ಕ್ಷೇತ್ರದ ಅಧ್ಯಯನ ಮಾಡಿದರೆ ಸುಬ್ರಾಯ ದೇವರಿಗೆ ಇಕ್ಕೇರಿ ವಂಶದ ಹದಿನಾಲ್ಕು ಮಂದಿ ಅರಸರ ಉಂಬಳಿ ಉತ್ತರಗಳು ಎಷ್ಟೆಂಬುದು ತಿಳಿದು ಬರುವುದು. ಕ್ರಿ. ಶ. 1582-1629 ಆಳಿದ ವೆಂಕಟಪ್ಪ ನಾಯಕ ಸುಬ್ರಹ್ಮಣ್ಯದಲ್ಲಿರುವ ಬ್ರಹ್ಮ ರಥವನ್ನು ಕಟ್ಟಿಸಿ ಕೊಟ್ಟ ಇತಿಹಾಸ ಯಾರೂ ಮರೆಯುವಂತಿಲ್ಲ. ಇದೇ ರೀತಿ ತುಳುನಾಡಿನ ಎಲ್ಲಾ ದೇವಸ್ಥಾನಗಳಿಗೆ ಉಂಬಳಿ ಉತ್ತರ ಒದಗಿಸಿ ಕೊಟ್ಟ ಈ ಗೌಡ ಅರಸರು ವಂದನಾರ್ಹರಾದರು.

ಇಕ್ಕೇರಿ ಅರಸು ವಂಶ ಶಶಾಂಕನ ವಂಶದವರೇ ಆಗಿರಬೇಕು. ಹಾಗೆಂತಲೇ ಇಕ್ಕೇರಿ ಅರಸರು ಪ್ರಭಾವಶಾಲಿ ಅರಸರಾಗಿ ಮೆರೆದಿರಬಹುದು. ಸಕಲ ರಾಜ ಗುಣ

ಹೊಂದಿರಬೇಕಾದರೆ ಅವರ ಮೂಲ ರಾಜವಂಶವೆಂದು ತಿಳಿಯಬೇಕಾಗುವುದು. ಈ ಅರಸರು ಜಾತಿ ಪ್ರೇಮದಿಂದ ಶಿಲಾ ಶಾಸನಗಳಲ್ಲಿ ಗೌಡರೆಂದು ಬರೆದುಕೊಂಡಿದ್ದಾರೆ. ಚೌಡ ಗೌಡರ ಮಕ್ಕಳು ಎಂಬುದನ್ನು ಶಾಸನದಲ್ಲಿ " ಚ ಉಡ ಗ ಉಡ" ಎಂದು ಉಲ್ಲೇಖಿಸಿದ್ದಾರೆ. ಬಳ್ಪ ತ್ರಿಶೂಲಿನಿ ದೇವಸ್ಥಾನದ ಪಕ್ಕದ ಬಾಕಿನೂರು ಗದ್ದೆಯ ಬದಿಯಲ್ಲಿರುವ ಶಿಲಾ ಶಾಸನದಲ್ಲಿ ಹೀಗಿದೆ, ಆದರೆ ? ವಿಜಯನಗರದರಸುಗಳು ಕೊಟ್ಟ ಗೌರವದ ಪದವಿ "ನಾಯಕ" ಈ ಪದವನ್ನು ಜಾತಿಯ ಸಂಕೇತವಾಗಿ ಇತಿಹಾಸಕಾರರು ಜೋಡಿಸಿದ ಉದ್ದೇಶವೇನೆಂದು ತಿಳಿದು ಬರುವುದಿಲ್ಲ. ಇತಿಹಾಸಕಾರರು ಗಂಗರು, ಕದಂಬರು, ರಾಷ್ಟ್ರಕೂಟರು, ಹೊಯ್ಸಳರು ಮುಂತಾದ ರಾಜವಂಶದ ಮೂಲ ಇತಿಹಾಸ ಗೂಡುಕಟ್ಟುವುದರಲ್ಲಿ ತಪಸ್ಸಿನಂತೆ ಶ್ರದ್ದೆ ವಹಿಸಿದ್ದಾರೆ. ಇಕ್ಕೇರಿ ಅರಸರ ಮೂಲದ ಬಗೆಗೆ ಹೇಳಿದ್ದೇನು? ಕೃಷಿಕರು, ರಾಜ್ಯ ಸ್ಥಾಪನೆ ಮಾಡಿದರೆಂದು ಹೇಳಿ ಮುಗಿಸಿ ಬಿಟ್ಟಿದ್ದಾರೆ. ಇವರ ಇತಿಹಾಸ ಅಧ್ಯಯನ ಮಾಡಿದಾಗ ಶಶಾಂಕ ಗೌಡನ ವಂಶವೇ ಆಗಿರಬಹುದೆಂದು ಕಂಡು ಬರುತ್ತದೆ.

ಬಂಗಾಳ ದೇಶದ ಮಹಾರಾಜನಾಗಿ ಆಪತ್ಕಾಲದಲ್ಲಿ ಗೌಡ ಸಮುದಾಯವನ್ನು ದಕ್ಷಿಣ ಹಿಂದೂ ಸ್ಥಾನದಲ್ಲಿ ನೆಲೆಗೊಳಿಸಿ, ಮುಂದೆ ತುಳು ನಾಡಿಗೂ ತಂದ ಈ ಗೌಡ ಅರಸರನ್ನು ಗೌಡ ಸಮಾರಂಭದ ವೇಳೆ ನೆನೆಯದೆ ಹೋದರೆ ಸಮಾರಂಭಕ್ಕೆ ಖಂಡಿತ ಶೋಭೆ ಬರಲಾರದು.

ಇಕ್ಕೇರಿ ನಾಯಕರಂತೆ ಬೆಂಗಳೂರಿಗೆ ಕೆಂಪೇಗೌಡ ಅರಸುಗಳು ಬೆಂಗಳೂರನ್ನು ಕಟ್ಟಿದ್ದರಿಂದ ಇಂದು ಕರ್ನಾಟಕ ರಾಜಧಾನಿಯಾಗಿ ಭಾರತ ಅತ್ಯಂತ ಪ್ರಮುಖ ನಗರಗಳ ಸಾಲಿಗೆ ಸೇರಿದೆ. ಕೆಂಪೇಗೌಡರ ಆಡಳಿತ ಇತಿಹಾಸದಲ್ಲಿ ಬೊಬ್ಬಿಟ್ಟು ತೋರಿಸುವಂತಾಗಿದೆ. ವಿಜಯನಗರದ ರಕ್ಷಣಾ ಭಾರದಲ್ಲಿ ಇಕ್ಕೇರಿ ಮತ್ತು ಕೆಂಪೇಗೌಡನನ್ನು ವಿಜಯನಗರದಲ್ಲಿ ಬಂಧಿಸಿ ಹಲವು ವರ್ಷ ಬಂಧನದಲ್ಲಿ ಇಟ್ಟ. ಇದರಿಂದ ಇಕ್ಕೇರಿಯವರೂ ನೊಂದಿರಬಹುದು. ಈ ಎರಡು ಪ್ರಾಮಾಣಿಕ ರಾಜವಂಶವನ್ನು ವಿಜಯನಗರದ ಎಲ್ಲಾ ಅರಸರು ಪ್ರಾಮಾಣಿಕವಾಗಿ ಬಳಸಿಕೊಂಡರೂ ತುಳು ವಂಶೀಯ ರಾಮರಾಯ ತಪ್ಪಿ ನಡೆದ. ಕ್ರಿ. ಶ. 1565 ರಲ್ಲಿ ವಿಜಯನಗರಕ್ಕೆ ಒದಗಿದ ತಾಳಿಕೋಟೆಯ ಯುದ್ಧದಲ್ಲಿ ಈ ಎರಡು ರಾಜ ವಂಶದವರನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದರೆ ಖಂಡಿತವಾಗಿ ವಿಜಯನಗರ ಸೋಲು ಅನುಭವಿಸುತ್ತಿರಲಿಲ್ಲ. ತಾಳಿಕೋಟೆಯ ಯುದ್ಧದ ನಂತರ ಸಾರ್ವಭೌಮರಾಗಿ ಇಕ್ಕೇರಿ ಅರಸರು ಒಟ್ಟು 250 ವರ್ಷ ರಾಜ್ಯಭಾರ ಮಾಡಿದರು. ಕೆಂಪೇಗೌಡರ ವಂಶ 225 ವರ್ಷಗಳ ಆಡಳಿತ ನಡೆಸಿತು. ಇದು ಗೌಡರ ಆಡಳಿತದ ಮುತ್ಸದ್ದಿತನದ ಪ್ರತೀಕವೆಂದು ನಂಬಬೇಕಾಗಿದೆ.

-ಡಿ. ಜಿ. ನಡ್ಕ, ಪಡ್ಪಿನಂಗಡಿ, ಇತಿಹಾಸ ಸಂಶೋಧಕರು.

ಕೊಡಗಿನ ಬಕ್ಕತ್ ಕೊಲ್ಲಿ ವಿವಾದ - ಜಿಲ್ಲಾ ಪಂಚಾಯಿತಿ ಪ್ರತಿ ಪಕ್ಷದ ಸಭಾ ತ್ಯಾಗ.

ಬಕ್ಕತ್ ಕೊಲ್ಲಿಯಲ್ಲಿ ಜಾಗ ಒತ್ತುವರಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳದ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ನಿಲುವನ್ನು ವಿರೋಧಿಸಿ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ದಿನಾಂಕ 22-4-2003 ರಂದು ಪ್ರತಿ ಪಕ್ಷ ಸದಸ್ಯರು ಸಭಾ ತ್ಯಾಗ ಮಾಡಿ ನಿಲುವನ್ನು ಖಂಡಿಸಿದರು.

ಕೊಡವ ಜನಾಂಗದ ಹೆಸರಿನಲ್ಲಿ ಜಾಗ ಕಬಳಿಸುವ ಯತ್ನ ಪಡೆಯುತ್ತಿದೆ ಎಂದು ಪಕ್ಷ ಬೇಧ ಮರೆತು ಬಹುತೇಕ ಸದಸ್ಯರು ಸಭೆಯಲ್ಲಿ ಆರೋಪಿಸಿದರು. ಸದಸ್ಯರ ಉತ್ತರಕ್ಕೆ ಸಮಾಜಾಯಿಕೆ ನೀಡಿದ ಜಿ. ಪಂ. ಅಧ್ಯಕ್ಷ ಪಾಪು ಸಣಯ್ಯ, ಈ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹೇಳಿದಾದರೂ ಅಧ್ಯಕ್ಷರ ಉತ್ತರದಿಂದ ತಪ್ತರಾಗದ ಪ್ರತಿ ಪಕ್ಷದ ಸದಸ್ಯರು ಪ್ರತಿಭಟನೆ ನಡೆಸಿ ಸಭಾ ತ್ಯಾಗ ಮಾಡಿದರು.

ವೀರಾಜಪೇಟೆ ತಾಲ್ಲೂಕಿನ ತಡಿಯಾಂಡ ಮೊಳ್ ಬೆಟ್ಟದ ತಪ್ಪಲಿನಲ್ಲಿರುವ ಬಕ್ಕತ್ ಕೊಲ್ಲಿಯಲ್ಲಿ ಸುಮಾರು 200 ಏಕ್ರೆ ಜಾಗವನ್ನು ಕೊಡಗು ನ್ಯಾಷನಲ್ ಕೌನ್ಸಿಲ್ ಅತಿಕ್ರಮ ಮಾಡಿಕೊಂಡಿರುವ ಹಿನ್ನಲೆಯಲ್ಲಿ ವಿವಾದವೇರ್ಪಟ್ಟಿದೆ. ಈ ವಿಚಾರವಾಗಿ ಪ್ರತಿಭಟನೆ ನಡೆಸಿದ ಸಿ. ಎನ್. ಸಿ. ಕಾರ್ಯಕರ್ತರನ್ನು ಈ ಹಿಂದೆ ಬಂಧಿಸಲಾಗಿತ್ತು.

ಯುವಕ ಪಾಡಿ ಗ್ರಾಮದ ಸರ್ವೇ ನಂ. 250/9 ರಲ್ಲಿ ಜಾಗವನ್ನು ಆಕ್ರಮಿಸಿಕೊಂಡು ರಸ್ತೆ ನಿರ್ಮಿಸುತ್ತಿರುವ ಬಗ್ಗೆ ವಿವಾದ ಕಾವೇರಿದ ಪ್ರಶ್ನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾಗಳು ನೀಡಿದ ಉತ್ತರ ಸಮರ್ಪಕವಾಗಿಲ್ಲ ಎಂದು ಕಾಂಗ್ರೇಸಿನ ಚಂದ್ರಕಲಾ ಆಕ್ಷೇಪ ವ್ಯಕ್ತ ಪಡಿಸಿದರು. ಜನಾಂಗದ ಹೆಸರಿನಲ್ಲಿ ಜಾಗ ಒತ್ತುವರಿ ಮಾಡಿಕೊಳ್ಳಲು C.N.C ಸಂಘಟನೆ ಮಾಡಿರುವ ಕೃತ್ಯವನ್ನು ಖಂಡಿಸಬೇಕು. ಅಲ್ಲದೇ ಯಾವುದೇ ಕಾರಣಕ್ಕೂ ಜಾಗ ಮಂಜೂರು ಮಾಡಬಾರದೆಂದು ಒತ್ತಾಯಿಸಿ ನಿರ್ಣಯಿಸಬೇಕೆಂದು ಎಲ್ಲಾ ಸದಸ್ಯರು ಒತ್ತಾಯಿಸಿದರು. ಪೊಲೀಸರು ಸಣ್ಣ ಪುಟ್ಟ ಪ್ರಕರಣ ದಾಖಲು ಮಾಡಿರುವುದನ್ನು ನೋಡಿದಾಗ C.N.C. ಸಂಘಟನೆಯೊಂದಿಗೆ ಸಂಬಂಧ ಇದೆಯೆನ್ನುವ ಸತ್ಯ ಬಹಿರಂಗವಾಗುತ್ತದೆ ಎಂದು ದೂರಿದರು.

ಕೊಡಗಿನ ಕೊಡವ ಜನಾಂಗದವರಿಗೆ ಪ್ರತ್ಯೇಕ ಐನ್ ಮನೆ, ಸ್ಮಶಾನಗಳು, ಸಾಹಿತ್ಯ ಅಕಾಡೆಮಿ, ಇತ್ಯಾದಿಗಳು ಇವೆ. ಕೊಡವರ ಗೋರಿಯನ್ನು ನಾಚಪ್ಪ ಮಾಡಬೇಕಾಗಿಲ್ಲ. ಕೊಡವ ಜನಾಂಗದ ಹೆಸರಿನಲ್ಲಿ ಆಸ್ತಿಯನ್ನು ಕಬಳಿಸುವ ಹುನ್ನಾರ ಇದಾಗಿದೆಯೆಂದು ಜಿಲ್ಲಾಡಳಿತ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಸದಸ್ಯ ಸಿ. ಎನ್. ಅರುಣ್ ಮಾಚಯ್ಯ ಆಗ್ರಹಪಡಿಸಿದರು.

CNC ಎಂಬ ಗುಮ್ಮನ ಮುಂದಿಟ್ಟುಕೊಂಡು ಕೆಲವರು ರಾಜಕೀಯ ಮಾಡುತ್ತಿದ್ದಾರೆ. ಈ ಹಿನ್ನಲೆಯಲ್ಲೇ ಸಂಘಟನೆಯನ್ನು ಬೆಂಬಲಿಸುವ ಕುತಂತ್ರಗಾರಿಕೆ ಜಿಲ್ಲೆಯಲ್ಲಿ

35.ಮಹೋದ್ಧಾರ, 36.ಸದಃ ಸುವಾಕ, 37.ಅನುದರ, 38.ಉಗ್ರಾಶಯ

ನಡೆಯುತ್ತಿದೆ ಎಂದು ಜೆ. ಡಿ. (s)ನ ವಿ.ಪಿ. ಶಶಿಧರ್ ಹೇಳಿದರು. ಜಿಲ್ಲೆಯ ಕೊಡವರೇ ವಿರೋಧಿಸುತ್ತಿರುವ CNC ಯು ಸ್ವಯಂ ಘೋಷಿತ ಸಂಘಟನೆಯಾಗಿದೆ. ಯಾವುದೇ ಕಾರಣಕ್ಕೂ ಜಾಗವನ್ನು ಮಂಜೂರು ಮಾಡಬಾರದು ಈ ಕುರಿತು ನಿರ್ಣಯ ತೆಗೆದುಕೊಂಡು ಸರಕಾರಕ್ಕೆ ಕಳುಹಿಸಬೇಕೆಂದು ಕಾಂಗ್ರೆಸಿನ ಎಚ್. ಸಿ. ನಾಗೇಶ್ ಸಭೆಯಲ್ಲಿ ಒತ್ತಾಯಿಸಿದರು.

ನಾಚಪ್ಪನ ಕೃತ್ಯದೊಂದಿಗೆ ಅಧಿಕಾರಶಾಹಿಗಳು ನೇರವಾಗಿ ಶಾಮೀಲಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಸಹ ಅವರಿಗೆ ಸಹಕಾರ ನೀಡುತ್ತಿದ್ದಾರೆ ಎಂದು ಸಿಪಿಐ (M)ನ ಎಚ್. ಎಂ. ಕಾಳಯ್ಯ ಆರೋಪಿಸಿದರು. ಬಕ್ಕತ್ ಕೊಲ್ಲಿ ವಿವಾದಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಉತ್ತಮ ರೀತಿಯಲ್ಲಿ ಕ್ರಮಗೊಂಡಿದೆ. ಸಭೆಯಲ್ಲಿ ಯಾವುದೇ ನಿರ್ಣಯ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಕಾಂಗ್ರೆಸ್‌ನ ಸುಜು ತಿಮ್ಮಯ್ಯ ಸಮಜಾಯಿಕೆ ನೀಡಿದರು.

ನಿರ್ಣಯ ತೆಗೆದುಕೊಳ್ಳಲು ಅಧ್ಯಕ್ಷರು ಹಿಂದೇಟು ಹಾಕಿದಾಗ ಪ್ರತಿಪಕ್ಷದ ಸದಸ್ಯರಾದ ಎಚ್.ಎಂ. ಕಾಳಯ್ಯ, ವಿ. ಪಿ. ಶಶಿಧರ್, ಹೊಸೂರು ಸತೀಶ್‌ಕುಮಾರ್, ಟಿ. ಎಂ. ಪ್ರಸನ್ನ ಇವರುಗಳು ಸಭಾತ್ಯಾಗ ಮಾಡಿ ಹೊರನಡೆದರು. ಸಭಾತ್ಯಾಗದ ನಂತರ ನಿರ್ಣಯ ತೆಗೆದುಕೊಳ್ಳುವಂತೆ ಕಾಂಗ್ರೆಸಿನ ಕೆ.ಪಿ. ಚಂದ್ರಕಲಾ ಪಟ್ಟು ಹಿಡಿದರು. ಇತರ ವಿಷಯಗಳ ಚರ್ಚೆಯ ಸಂದರ್ಭದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ಅಧ್ಯಕ್ಷ ಪಾಪು ಸಣಾಯ್ಯ ಪ್ರಕಟಿಸಿ ಚರ್ಚೆಗೆ ತೆರೆ ಎಳೆದರು.

-ಸಂಗಾತಿ

ನಾಲ್ಕು ಮಕ್ಕಳಿಗೆ ಜನ್ಮವಿತ್ತ ಮಹಾತಾಯಿ !



ಇತ್ತೀಚೆಗೆ ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಮಹಿಳೆಯೋರ್ವಳು ನಾಲ್ಕು ಮಕ್ಕಳಿಗೆ ಜನ್ಮವಿತ್ತ ವಿಚಾರ ಪತ್ರಿಕೆಗಳಲ್ಲಿ ಹಾಗೂ ಇನ್ನಿತರ ದೃಶ್ಯ ಮಾಧ್ಯಮಗಳಲ್ಲೂ ಪ್ರಸಾರಗೊಂಡು ಕೊಡಗಿನ ಜನತೆಯನ್ನು ಕುತೂಹಲಕ್ಕೆಡೆ ಮಾಡಿತ್ತು.

ಈ ಘಟನೆಯ ಪುನರಾವರ್ತನೆ ಎಂಬಂತೆ ಕೇರಳದ ಕ್ಯಾಲಿಕಟ್‌ನ ಶಾಂತಿ ಆಸ್ಪತ್ರೆಯಲ್ಲಿ ಕೂಡ ಮಹಾ ತಾಯಿಯೋರ್ವಳು 4 ಮಕ್ಕಳಿಗೆ ಜನ್ಮವನ್ನಿತ್ತ ಘಟನೆ 17-02-2003 ರಂದು ನಡೆಯಿತು. ನಾಲ್ಕು ಮಕ್ಕಳಲ್ಲಿ ಒಂದು ಮಗು ಹೊಟ್ಟೆಯೊಳಗೆ ಸಾವನ್ನಪ್ಪಿದ್ದರೆ, ಉಳಿದ ಮೂರು ಮಕ್ಕಳು ಆರೋಗ್ಯವಂತರಾಗಿ ಜನಿಸಿವೆ. ಮಗು ಹೊಟ್ಟೆಯೊಳಗಡೆ ಮೃತಪಟ್ಟಿರುವ ವಿಚಾರ ಪ್ರಸವದ 5 ದಿನಗಳ ಮೊದಲೇ ತಿಳಿದು ಬಂದಿದ್ದು ಸ್ಕ್ಯಾನಿಂಗ್ ನಡೆಸುವ ಮೂಲಕ ಇದು ಬಹಿರಂಗಗೊಂಡಿತ್ತು.

ಹೀಗೆ ಜನಿಸಿದ ಮಕ್ಕಳ ತೂಕ ಕ್ರಮವಾಗಿ 1 ಕೆ. ಜಿ. 1.65 ಕೆ. ಜಿ. 1.3 ಕೆ. ಜಿ. ಹಾಗೂ 1 ಕೆ. ಜಿ. ಇದ್ದರೂ ಹೆರಿಗೆ ಯಾವುದೇ ಆಪರೇಶನ್ ಇಲ್ಲದೆ ಸಹಜ ರೀತಿಯಲ್ಲಿಯೇ ನಡೆದು ವೈದ್ಯಕೀಯ ಕ್ಷೇತ್ರವನ್ನು ದಂಗು ಬಡಿಸಿತ್ತು. ಇದೇ ರೀತಿಯ ಘಟನೆ ಮಡಿಕೇರಿಯ ಸರಕಾರಿ ಆಸ್ಪತ್ರೆಯಲ್ಲಿಯೂ ನಡೆದಿತ್ತು. ಇಲ್ಲಿ ಜನಿಸಿದ ನಾಲ್ಕು ಮಕ್ಕಳಲ್ಲಿ ಒಂದು ಮಗು ಅಸು ನೀಗಿದ್ದರೆ ಉಳಿದ ಮೂರು ಮಕ್ಕಳು ಆರೋಗ್ಯವಂತರಾಗಿ ಜನಿಸಿದ್ದಲ್ಲದೆ ಹೆರಿಗೆಯೂ ಆಪರೇಶನ್ ಇಲ್ಲದೆ ಸಹಜ ರೀತಿಯಲ್ಲಿಯೇ ನಡೆದಿತ್ತು.

ಅತ್ಯಂತ ವಿರಳ: ಮಹಿಳೆಯೋರ್ವಳು ನಾಲ್ಕು ಮಕ್ಕಳಿಗೆ ಜನ್ಮ ನೀಡುವದು ಬಹು ಅಪರೂಪವೆನಿಸಿದರೂ, ಆಗಿಂದಾಗ್ಗೆ ಅಲ್ಲೊಮ್ಮೆ, ಇಲ್ಲೊಮ್ಮೆ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಪ್ರತಿ 80 ಹೆರಿಗೆಯಲ್ಲಿ ಒಂದು ಅವಳಿ ಮಕ್ಕಳ ಜನನ ಹಾಗೂ ಸಾಧ್ಯತೆಯಿದ್ದರೆ 6400 ಹೆರಿಗೆಗಳಲ್ಲಿ ಒಂದು ತ್ರಿವಳಿ ಮಕ್ಕಳ ಜನನ ಪ್ರತಿ 5 ಲಕ್ಷಕ್ಕಿಂತ ಅಧಿಕ ಹೆರಿಗೆಗಳಲ್ಲಿ ಒಂದು ನಾಲ್ಕು ಮಕ್ಕಳ ಜನನ ಕಂಡು ಬರುವ ಸಾಧ್ಯತೆಗಳಿವೆ.

ನಾಲ್ಕು ಮಕ್ಕಳಾಗುವುದು ಹೇಗೆ ?

ಅಂಡಾಣು ಮತ್ತು ವೀರ್ಯಾಣು ಲೀನವಾಗಿ ಭ್ರೂಣ ನಂತರವೂ, ಭ್ರೂಣ ಮತ್ತೆ ಹಲವಾರು ಬಾರಿ ಸೀಳಿ ಹಲವು ಮಕ್ಕಳ ಜನನಕ್ಕೆ ಕಾರಣವಾಗುವುದು ಒಂದು ಬಗೆ (ತದ್ರೂಪದ ಅವಳಿಗಳು).

ಬಹು ಸಂಖ್ಯೆಯಲ್ಲಿ ಅಂಡಾಣುಗಳು ಬಿಡುಗಡೆಯಾಗಿ ಬೇರೆ ಬೇರೆಯಾಗಿ ವೀರ್ಯಾಣುಗಳೊಂದಿಗೆ ಫಲಿತಗೊಂಡಲ್ಲಿ ಅವು ಪ್ರತಿಯೊಂದೂ ಒಂದೊಂದು ಶಿಶುವಾಗಿ ರೂಪುಗೊಳ್ಳಬಹುದು (ಅಸಮಾನ ಅವಳಿಗಳು).

ತಾಯಿಯ ಸಂಕಟ

ಹಲವು ಮಕ್ಕಳನ್ನು ಹೊಟ್ಟೆಯೊಳಗೆ ಹೊತ್ತ ತಾಯಿಯ ಹೊಟ್ಟೆ ಅತಿಯಾಗಿ ದೊಡ್ಡದಾಗುತ್ತಿರುವದರಿಂದ ತಾಯಿಗೆ ಉಸಿರಾಟದಲ್ಲಿ ಕಷ್ಟ, ಹೃದಯಬಡಿತ ಅತಿಯಾಗುವಿಕೆ, ಸೊಂಟ ಪಕ್ಕೆಲುಬುಗಳಲ್ಲು ನೋವು, ಪಚನ ಕ್ರೀಯೆಯಲ್ಲಿ ಏರುಪೇರು, ಮಲಗಲಾಗದಿರುವಿಕೆ, ಕಾಲು ಬಾಯುವುದು, ಅತಿಯಾದ ರಕ್ತದೊತ್ತಡ, ರಕ್ತ ಹೀನತೆ ಹೀಗೆ ಹಲವಾರು ಬಗೆಯ ತೊಂದರೆಗಳು ಉದ್ಭವಿಸಬಹುದು.

ಪ್ರಕೃತಿಯ ಸಹಾಯ ಹಸ್ತವೊ ಎಂಬಂತೆ ಈ ತಾಯಂದಿರಲ್ಲಿ ಸಾಮಾನ್ಯವಾಗಿ ದಿವಸಕ್ಕಿಂತ ಮುಂಚೆಯೇ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ.

ಈ ಬಗೆಯ ಹೆರಿಗೆಯನ್ನು ಸುಸಜ್ಜಿತ ಆಸ್ಪತ್ರೆಯಲ್ಲಿ ಅತ್ಯಂತ ತಜ್ಞವೈದ್ಯರ ನೆರಳಿನಲ್ಲಿ ನಡೆಸಬೇಕಾದುದು ತಾಯಿಯ ಹಾಗೂ ಮಕ್ಕಳ ದೃಷ್ಟಿಯಿಂದ ಕ್ಷೇಮವಾಗಿದೆ.

- ಡಾ. ಎನ್. ಎಸ್. ಪ್ರವೀಣ್, ಕೇರಳ.

39.ವೃಂದಾರಕ, 40.ಜರಾಸಂಧ, 41.ಚಿತ್ರಾಯುಧ, 42.ದೃಡಸಂಘ, 43.ಸತ್ಯಸಂಘ

ಬಾಲ ಸಂಗಾತಿ ವಿಭಾಗ ಜ್ಞಾನ 10 :

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಧ್ವನಿ ವಿಜ್ಞಾನ

ಧ್ವನಿ ವಿಜ್ಞಾನಕ್ಕೆ ಸಂಬಂಧ ಪಟ್ಟಂಗೂ ನಮ್ಮ ಪೂರ್ವಿಕರ್ ಸಾವಿರಾರ್ ವರ್ಷಗಳಷ್ಟ್ ಹಿಂದೆನೆ ಏನ್ ಹೇಳಿದ್ದೊ ಅದ್ ಆಧುನಿಕ ವಿಜ್ಞಾನ ಸಿದ್ಧಾಂತಕ್ಕೆ ಹದಿನಾರ್ ಆಣೆ ಹೊಂದದಿದ್ದರೂ, ಹೆಚ್ಚಿನ ಅಂಕಗಳ್ಲಿ ಹೊಂದಾಣಿಕೆ ಕಂಡ್ ಬಂದದೆ. ಶಬರಸ್ವಾಮಿ ಧ್ವನಿಯ ಮೂಲ ಮತ್ತ್ ವಾಹಕ ಆಗಿ ಗಾಳಿನ ಹೆಸರಿಸಿಟು. ಉದ್ಯೋತಕರ ಮತ್ತೆ ಇತರ ಋಷಿಗ ಆಕಾಶನ ಭಾವಿಸ್ಯೊಳೊ ಧ್ವನಿತರಂಗಗಳೆ ಜ್ಞಾನವೂ ನಮ್ಮ ಪೂರ್ವಜರಿಗೆ ಇದ್ದೇ ಇತ್ತ್.

ವಿಜ್ಞಾನ ಬಿಕ್ಷುವು ಪ್ರತಿಧ್ವನಿಯ ವಿಶ್ಲೇಷಣೆ ಮಾಡಿ ಅದರ ಪರಿಣಾಮದ ಬಗ್ಗೆ ಹೇಳ್ದ ಹೆಚ್ಚಿನ ಅಂಶಗ ಆಧುನಿಕ ವಿಜ್ಞಾನದ ಹಲವು ಅಂಶಗಳಿಗೆ ಹತ್ರ ಆಗ್ಯಟ್ಟು. ವಾತ್ಸ್ಯಾಯನ, ಉದ್ಯೋತಕರ, ವಾಚಸ್ಪತಿ ಮುಂತಾದವು ಧ್ವನಿ ಮತ್ತೆ ಸ್ವರಗಳ ಬಗ್ಗೆ ಹೆಚ್ಚಿಗೆ ವಿಶ್ಲೇಷಣೆ ಮಾಡ್ದ್ ಕಂಡ್ ಬಂದದೆ.

ಚುಂಬಕತ್ವ

ಶಂಕರ ಮಿಶ್ರನು ಚುಂಬಕತ್ವದ ಪ್ರಾರಂಭಿಕ ತತ್ವಗಳ್ನ ನಿರೂಪಿಸಿಟ್ಟು. "ಲೋಹದ ಸೂಜಿ ಚುಂಬಕದತ್ತ ಯಾಕೆ ಆಕರ್ಷಿಸಲ್ಪಟ್ಟದೆ" ಎಂಬವೆ ಮುಂತಾದ ಹಲವು ವಿಷಯಗಳ್ನ ಆತ ತಿಳಿಸಿಟ್ಟು.

ಭೋಜನು ಕ್ರಿ. ಶ. 1050 ರ್ಲಿ ತನ್ನ ಆಡಳಿತ ಕಾಲಲಿ ಹಡಗುಗಳ ತಳಲಿ ಲೋಹನ ಬಳ್‌ಸ್‌ಬಡಿತ ಆದೇಶ ಮಾಡಿತ್ತ್. ಹಂಗೆ ಬಳ್‌ಸಿರೆ, ಸಮುದ್ರ ತಳಲಿರುವ ಶಿಲೆಗಳ್‌ಲಿ ಚುಂಬಕದ ಅಂಶ ಇದ್ದರೆ ಹಡಗ್‌ನ ಸೆಳ್‌ದ್ ಬುಟ್ಟದೆತ ಆದ್ದರ್‌ಂದ ಹಡಗು ಕಲ್ಲಿಗೆ ಡಿಕ್ಕಿ ಹೊಡ್ದ್‌ಬುಟ್ಟದೆತ ಆತ ತಿಳ್‌ಸಿತ್ತ್. ಪ್ರೊ. ಮುಖರ್ಜಿಯವು ತಮ್ಮ ಸುಪ್ರಸಿದ್ಧ ಪುಸ್ತಕವೊಂದರ್ಲಿ "ಹಿಂದುಗ ಜಾವಾಲಿ ವಸಾಹತ್‌ನ ಸ್ಥಾಪಿಸಿಕೆ ಹಡ್‌ಗ್‌ಲಿ ಕುದ್ದ್ ಜಲಪರ್ಯಟನ ಮಾಡ್‌ತಿದ್ದೊ. ಆಗ ಅವು ಕಂಪಾಸ್‌ನ ಬಳ್‌ಸಿ ದಿಕ್ಕ್‌ಗಳ ವಿವರ ಪಡೆತಿದ್ದೊ. ಅವು ಅದ್‌ನ್ನ " ಮತ್ಸ್ಯಯಂತ್ರ" ತ ಹೇಳ್‌ತ್ತಿದ್ದೊ" ತ ಬರ್ದುಟು.

ವಿದ್ಯುತ್

ಉಮಾಸ್ವತಿಗೆ ವಿದ್ಯುತ್ತ್‌ನ ಪ್ರಾರಂಭಿಕ ಪರಿಚಯ ಇದ್ದದ್ದ್ ತಿಳ್ದ್ ಬಂದದೆ. ಅಂವ ತನ್ನ ಪರಮಾಣು ವಾದಲಿ ಕೂಡಿದ್ದ ಎರಡು ಪರಮಾಣುಗಳಲ್ಲಿ ವಿರುದ್ಧ ಗುಣಗ ಇರೋಕು ತೇಳುದನ್ನ ಸ್ಪಷ್ಟ ಆಗಿ ಉಲ್ಲೇಖಿಸಿಟ್ಟು. ವಿರುದ್ಧ ಸ್ವಭಾವ ಇರುವ ಪರಮಾಣುಗಳೇ ಪರಸ್ಪರ ಆಕರ್ಷಿಸಲ್ಪಟ್ಟವೆ. ಮತ್ತೆ ಸಮಾನ ಗುಣಗ ಇರುವ ಪರಮಾಣುಗ ಒಂದಕ್ಕೊಂದು ದೂರ ಹೋದವೆ (ಸರ್‌ದವೆ) ತ ಅವು ಪ್ರತಿಪಾದಿಸ್ಯೊಳೊ.

ಮುಂದ್‌ವರ್ದದೆ. ಬಿಟ್ಟೀರ ಚೊಂದಮ್ಮ.

ಬಾಲ ಸಂಗಾತಿ ವಿಭಾಗ ಕತೆ 10 :

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಜ್ಞಾನಿಯೇ ದೊಡ್ಡಂವ

ಒಂದು ಗ್ರಾಮದ ಸ್ವಲ್ಪ ದೂರಲಿ ಮುನಿ ಅಂಗೀರಸರ ಆಶ್ರಮ ಇತ್ತ್. ಆ ಮುನಿ ದಿನಾಲೂ ಬೆಳಿಗ್ಗೆ ಬ್ರಾಹ್ಮ ಮುಹೂರ್ತಲಿ (ಗೋಧೂಳಿ ಮೂಹೂರ್ತ) (ಅಂದರೆ ಬೆಳಿಗ್ಗೆ 4 ಗಂಟೆಂದ 6 ಗಂಟೆವರೆಗೆ) ಎದ್ದ್ ಹೊಳೆಗೆ ಹೋಗಿ ಮಿಂದ್ ಬಂದ್ ಸಂಧ್ಯಾವಂದನಾದಿ (ಬೆಳಿಗ್ಗೆ ಬೆಳಕ್ ಮೂಡಿದ ಮೇಲೆ ಸೂರ್ಯ ಹುಟ್ಟುವವರೆಗೆ ಪ್ರಾಥ ಸಂಧ್ಯಾಕಾಲ, ಹಂಗೇ ಸಾಯಂಕಾಲ ಸೂರ್ಯ ಮುಳುಗಿದ ಮೇಲೆ ಕತ್ತಲಾಗುವವರೆಗೆ ಸಾಯಂಸಂಧ್ಯೆ ಅಂದರೆ ಇಲ್ಲಿ ಬೆಳಗಿನ ಪ್ರಾರ್ಥನೆ) ಕಾರ್ಯಗಳ್ನ ಮುಗ್ಸಿ, ಕೆಲವು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದೊ ಆ ಮಕ್ಕಳ ಮಧ್ಯೆ ತನ್ನ ಮಗ ಕವಿ ಕೂಡ ಇತ್ತ್. ಅಂಗೀರಸ, ತನ್ನ ಮಗ ಮತ್ತೆ ಬೇರೆ ಶಿಷ್ಯರ ಮಧ್ಯೆ ಭಿನ್ನ ಮಾಡದೆ ಒಂದೇ ತರ ವಿದ್ಯೆ ಕಲ್ಸಿದೆ. ವೇಧಾದ್ಯಯನ ಮಾಡ್ಸಿದೆ. ಕವಿ ಕೂಡ ತಂದೆಯ ತರ ಗುಣವಂತ, ವಿಧ್ಯಾವಂತ ಆದೆ. ಮತ್ತೆ ಕವಿ ಆಶ್ರಮ ನಡ್ಸಿಕೆ ಶುರು ಮಾಡ್ದೆ.

ಒಮ್ಮೆ ಕವಿಯ ತಂದೆ ತಾಯಿಯರ ಕಡೆಯ ಪಿತೃಗಳು ತಮಗೆ ವೇದಾಧ್ಯಯನ ಮಾಡಿಕೆ ಇಷ್ಟ. ನೀನ್ ಕಲ್ಸಿಯಾಂತ ಕೇಳುವೆ. ಆಗ ಕವಿ ಒಪ್ಪಿ ವೇದ ಪಾಠ ಹೇಳಿ ಕೊಡಿಕೆ ಶುರು ಮಾಡ್ದೆ. ಸ್ವಲ್ಪ ದಿನದ ನಂತರ ಪಾಠ ಮಾಡ್‌ಕ್ಕಾಕನ, ಏ ಮಕ್ಕಳೆ ನಂಗೆ ಸ್ವಲ್ಪ ಕುಡಿಯಕೆ ನೀರ್ ತಂದ್ ಕೊಡಿತ ಕೇಳ್ದೆ. ಇದರ್ನ ಕೇಳಿ ಆ ವೃದ್ಧರ್‌ಗೆ ಬೇಜಾರ್ ಆದೆ. ಕವಿ ನಮ್ಮ ಪುತ್ರ. ಆದರೆ ಅಂವ ನಮ್ಮನ್ನ ಪುತ್ರತ ಕರಿತಾ ಉಟ್ಟಲಾತ ಚಿಂತೆ ಆದೆ. ಆಮೇಲೆ ಅವೆಲ್ಲಾ ದೇವರ ಹತ್ರ ಹೋಗಿ ಹೇಳುವೆ. ಕವಿ ನಮ್ಮ ಪುತ್ರ ದೇವರೆ, ಆದರೂ ಅಂವ ನಮ್ಮನ್ನಪುತ್ರತ ಕರ್ದದೆ. ಇದ್ ನ್ಯಾಯನತಾ ಕೇಳುವೆ, ಆಗ ದೇವ್ರು ಹೇಳುವೆ. ಕವಿ ಹೇಳ್ದ್ ಸತ್ಯತ. ವೃದ್ಧರ್ ಕೇಳುವೆ ಅದ್ ಹೆಂಗೆ ನ್ಯಾಯತ. ಆಗ ದೇವ್ರು ಹೇಳ್ದೆ ಅಜ್ಞಾನನ ಮಕ್ಕಂತ ಪರಿಗಣಿಸುವೆ. ಜ್ಞಾನನ ಅಪ್ಪಂತ ಪರಿಗಣಿಸುವೆ. ಅದ್ದರ್‌ದ ಅಜ್ಞಾನಿಗಳಾದ ನೀವೆಲ್ಲಾ ಮಕ್ಕಳೇ, ಜ್ಞಾನಿಯಾದ ಕವಿಯು ತಂದೆಯ ಸ್ಥಾನದಲ್ಲಿದ್ದಾನೆ. ಆದ್ದರ್‌ಂದ ಅವನು ಹೇಳಿದ್ದೆ ಸರಿತ. ಇದನ್ನ ಕೇಳಿ ಎಲ್ಲಾ ವೃದ್ಧ ಜನಂಗಳಿಗೆ ಸಮಾಧಾನ ಆದೆ.

ಮುಂದ್‌ವರ್ದದೆ. ಬಿಟ್ಟೀರ ಚೊಂದಮ್ಮ.

ನಗೆಹನಿ :

ಪುಟ್ಟು : ಯಾಕೋ ಅಳ್ತಿದ್ದೀಯಾ?

ಕಿಟ್ಟು : ನನ್ನ ನಾಯಿ ಮರಿ ಕಾಣೆಸ್ತಿಲ್ಲ

ಪುಟ್ಟು :ಅದನ್ನು ನೋಡಿದ್ರೆ ನಿನಗೆ ಗುರುತು ಸಿಗುತ್ತೇನು?

ಕಿಟ್ಟು: ಹೌದು ಅದರ ಬಾಲ ಬಗ್ಗಿದೆ ಮತ್ತು ಆಗಾಗ ಬಾಲವನ್ನು ಅಲ್ಲಾಡಿಸುತ್ತದೆ.

ರಚನೆ : **ಕೊಡಿಯಡ್ಕ ರಮೇಶ್**, ಮಕ್ಕಂದೂರು ಗ್ರಾಮ, ಮಡಿಕೇರಿ.

44.ಅಪರಾಜಿತ, 45.ದುಷ್ಯರಾಜಯ, 46.ಉಗ್ರಸೇನ, 47.ಸೇನಾನಿ, 48.ಕುಂಡಶಾಯಿ

ದೇಶ ಹಿಂಗೆ ಆದ್ರೆ ಹೆಂಗೋ ಈಶ !

ಈ ಕೆಳಗೆ ಕೊಟ್ಟಿರುವುದನ್ನು ಓದಿ ಈ ಕೆಳಕಂಡ ವಿಚಾರಗಳು ನಿಜವೋ ಸುಳ್ಳೋ ನೀವೇ ನಿರ್ಧರಿಸಿ.

ಭಾರತದ ತಂಡ ಇತ್ತೀಚೆಗೆ ನ್ಯೂಜಿಲ್ಯಾಂಡ್ ತಂಡದೊಂದಿಗೆ ಆಡಿ ಅತ್ಯಂತ ಹೀನಾಯಮಾನವಾಗಿ ಸೋಲನ್ನಪ್ಪಿದರೂ ನಮ್ಮ ಜನ ಅದನ್ನು ಮರೆತು ಮತ್ತೆ ಭಾರತದ ತಂಡ ನಮಗೆ ಗೆಲುವನ್ನು ತಂದುಕೊಡುತ್ತಾ ರೆಂಬ ಆಸೆಯನ್ನು ಹೊತ್ತು ಬಕ ಪಕ್ಷಿಗಳಂತೆ ಕಾದು ಕುಳಿತ್ತಿದ್ದಾರೆ. ಭಾರತ ತಂಡಕ್ಕೆ ಯಾವುದೇ ಅನ್ಯ ಆಟಗಾರರಿಗೆ ದೊರಕದಷ್ಟು ಮಾನ್ಯತೆ, ಸನ್ಮಾನಗಳು, ಪಾರಿತೋಷಕಗಳು, ಅತ್ಯಧಿಕ ಸಂಭಾವನೆ ಕೂಡ! ಇದೆಲ್ಲಾ ಏತಕ್ಕಾಗಿ? ಒಂದು ವಿಧದಲ್ಲಿ ಭಾರತ ಸೋತಿದ್ದು, ನಮ್ಮ ಜನ ತಮ್ಮ ಹುಚ್ಚು ಆಶಾಭಾವನೆಯಿಂದ ಹೊರಬರಲು ಬುನಾದಿಯಾಗಬೇಕು. ನೀವೇ ಯೋಚಿಸಿ ನಾವು ಕ್ರಿಕೆಟ್ ಆಟಗಾರರಿಗೆ ಇಷ್ಟೊಂದು ಮಾನ್ಯತೆ ಏಕೆ ನೀಡುತ್ತೇವೆ- ನಮ್ಮ ದೇಶಕ್ಕೆ ಈ 11 ಜನರ ಸಿಪಾಯಿಗಳ ತಂಡ ಕೀರ್ತಿ ತಂದುಕೊಡಲೆಂದು ತಾನೆ?

ಅದೊ ನೋಡಿ ! ಭಾರತದ ಸೈನಿಕರ ಪಡೆಯೊಂದು 1700 ಅಡಿ ಎತ್ತರದಲ್ಲಿ -5 ರಿಂದ -30°C ಚಳಿಗಾಳಿಯಲ್ಲಿ ಜೀವ ಹಿಡಿದು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಶತ್ರುಧಾಳಿಗೆ ಎದೆಯೊಡ್ಡಿ ಕುಳಿತ್ತಿದ್ದಾರೆ. ಸರಿಯಾಗಿ ಊಟವಿಲ್ಲ, ಸ್ನಾನವಿಲ್ಲ, T.V. ಸಿನಿಮಾಗಳ ಮನರಂಜನೆ ಇಲ್ಲಾ, ಹೆಂಡತಿ ಮಕ್ಕಳಿಂದ ಸಾವಿರಾರು ಮೈಲಿ ದೂರ, ಮುಖ್ಯವಾಗಿ ಇವರು ವೀರಾವೇಶದಿಂದ ಹೊಡೆದಾಡಿ ಶತ್ರುಗಳ ತಲೆಯುರುಳಿಸುವ ಸಮಯದಲ್ಲಿ 'ಸಿಕ್ಸರ್' ಎಂದು ಅರಚುತ್ತಾ ಯಾರು ಸಿಳ್ಳೆ ಹೊಡೆಯುವವರಿರುವುದಿಲ್ಲ. ವೈರಿಗಳ ಗುಂಡಿಗೆ ತಾನೇ 'HIT-OUT' ಆದರೂ ಯಾರೂ ಮರುಗುವವರಿಲ್ಲ. ಗೆದ್ದಾಗ ಸಂಭಾವನೆ ಒಂದು ಕಂಚಿನ ಮೆಡಲ್ ಮತ್ತು 100 ರೂಪಾಯಿ Increment ಸತ್ತರೆ ಮನೆಯವರಿಗೆ 2 ಲಕ್ಷ.

ಭಾರತದ ಶತ್ರು ಸೈನಿಕರಲ್ಲಿ 80% ಪಾಕಿಸ್ತಾನೀಯರೇ, ಅವರು ಬೆಟ್ಟದ ಮೇಲಿನಿಂದ ದಾಳಿ ಮಾಡುವುದು ಸುಲಭ! ಆ ಧಾಳಿಗೆ ಎದೆಯೊಡ್ಡಿ ಮುನ್ನಡೆಯುವ ಭಾರತದ ಸೈನಿಕರ ಪರಿಸ್ಥಿತಿ ಹೇಗಿರಬೇಕು ಯೋಚಿಸಿ. ಸೇನಾಪಡೆಯಲ್ಲಿ Flight leiutanant ಒಬ್ಬನಿಗೆ ಬರುವ ವೇತನ ರೂ 11200/-. ಈ ಸಂಬಳಕ್ಕೆ ಆತ ತಿಂಗಳಿಗೆ 40 ಬಾರಿ ವಯಸ್ಸಾದ MIG ಪ್ಲೇನ್‌ಗಳಲ್ಲಿ ಕುಳಿತು ಗಾಯಾಳು ಸೈನಿಕರನ್ನು ಸಾಗಿಸುವ ಕೆಲಸ ಮಾಡಬೇಕು. ಹೀಗೆ ಪ್ರತಿಬಾರಿ ಪ್ರಾಣಾಪಾಯದಿಂದ ಸೈನಿಕರನ್ನು ರಕ್ಷಿಸುವಾಗಿ ಅವರಿಗೆ ರೂ 125/- ಭತ್ಯೆ ನೀಡಲಾಗುತ್ತದೆ. Tax ಹಿಡಿದು ಕೊಂಡು! ಈತ ಯಾವಾಗಲಾದರೂ ಶತ್ರುಗಳ ಗುಂಡಿನಿಂದ ಸತ್ತರೆ ಮನೆಯವರಿಗೆ ರೂ 2 ಲಕ್ಷ ಕೊಟ್ಟು, ಸಿದ್ಧವಿರುವ Condolence Message ನಲ್ಲಿ ಸತ್ತವನ ಹೆಸರು ಸೇರಿಸಿ ಓದಿಬಿಟ್ಟು ಸೆಲ್ಯೂಟ್ ಹೊಡೆದು ಮರೆತು ಬಿಡುತ್ತಾರೆ.

ಕ್ರಿಕೆಟ್ ತಂಡದ 'ಪಂದ್ಯ ಪುರುಷೋತ್ತಮ' ನಿಗೆ ಸಲ್ಲುವ ವೇತನ 3000 ಡಾಲರ್ (ರೂ. 2.1 ಲಕ್ಷಗಳು) ಕಾರ್ಗಿಲ್ 180000 ಅಡಿ ಎತ್ತರದಲ್ಲಿದೆ. Flight Leiutenant ಗಳು ಕೇವಲ 1000 ಅಡಿ ಎತ್ತರದಲ್ಲಿ ಹಾರುವಾಗ ಶತ್ರುಗಳು ತಮ್ಮ ಅಮೇರಿಕನ್ ಮಿಸ್ಸೆಲ್‌ಗಳನ್ನು ಬಳಸಿ ಹೊಡೆದುರುಳಿಸುವುದು ಅತ್ಯಂತ ಸುಲಭದ ಕೆಲಸ. Just aim & Shoot. ಆದರೂ ನಮ್ಮ ವೀರ ಸೈನಿಕರು ಪ್ರತೀ ದಿನ ಈ ಕೆಲಸ ಮಾಡುತ್ತಾರೆ. ರೂ. 125 ಭತ್ಯಕ್ಕಾಗಿ ಅಲ್ಲ ದೇಶ ರಕ್ಷಣೆಗೋಸ್ಕರ. ಪಾಕಿಸ್ತಾನೀಯರ ಕೈ ಸೆರೆಯಲ್ಲಿದ್ದ 'ನಚಿಕೇತ' ಮತ್ತೆ ಕರ್ತವ್ಯ ಪಾಲನೆಗೆಗೋಸ್ಕರ ಸೇನೆಗೆ ಮರಳಿಹೊರಟರು. ಎಷ್ಟು ಜನ ಭಾರತೀಯರು ಆತನನ್ನು ನೆನೆಸಿಕೊಂಡರು ?!

ಬಿಹಾರದಲ್ಲಿ ಒಬ್ಬಾತ ಭಾರತ ತಂಡದ ಜಯಕ್ಕೋಸ್ಕರ 111 ತೆಂಗಿನಕಾಯಿ ಒಡೆದ. ಭಾರತ ಗೆದ್ದಲ್ಲಿ 10,001 ತೆಂಗಿನಕಾಯಿ ಒಡೆಯುತ್ತಾನೆಂದ. BJPಯವರು ಗಣೇಶನಿಗೆ ಹೋಮಗಳನ್ನು ಮಾಡಿ ಪ್ರಸಾದ ವಿನಿಯೋಗಿಸಿದರು.

CEAT ಟೈರ್‌ನವರು ಮುಂಬೈನಲ್ಲಿ ಬಾರಿ ಅದ್ದೂರಿ ವೆಚ್ಚದಲ್ಲಿ ತಂಡಕ್ಕೆ ಬೀಳ್ಕೊಡುಗೆ ಶುಭ ಹಾರೈಕೆ ಸಮಾರಂಭ ಏರ್ಪಡಿಸಿದ್ದರು. ಗುಜರಾತ್‌ನಲ್ಲಿ ಒಬ್ಬ ಉಪವಾಸ ಸತ್ಯಾಗ್ರಹ ಮಾಡಿದ. ಇದೆಲ್ಲಾ ಭಾರತದ ಸೈನಿಕರ ಗೆಲುವಿಗಾಗಿ ಅಲ್ಲ - ಭಾರತ World cup' ಗೆಲ್ಲುವುದಕ್ಕೋಸ್ಕರ.

ಅಮೆರಿಕನ್‌ನ ವಾಯುಪಡೆಯವರಾಗಲಿ ನಾವಿಕರಾಗಲಿ ಸತ್ತರೆ ಎಷ್ಟೊಂದು ಕೋಲಾಹಲವಾಗುತ್ತದೆ. 5 ಜನ ಸೈನಿಕರು ಸತ್ತರೆ ದೇಶದಾದ್ಯಂತ ಪತ್ರಿಕೆಗಳು ಹುಚ್ಚೆದ್ದು ಕೂಗುತ್ತದೆ-ಯುದ್ಧವೇ ಆಗುತ್ತದೇನೋ ಎಂಬಂತೆ ಜನರು ಗಲಾಟೆಯೆಬ್ಬಿಸಿ, ಸೂಕ್ತ ನ್ಯಾಯ ಸಿಗುವಂತೆ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ನಮ್ಮ Flt. Lt.ಅಹುಜಾರವರನ್ನು ಇತ್ತೀಚೆಗೆ ಗುಂಡಿಕ್ಕಿ ಕೊಲ್ಲಲಾಯಿತು. ಅವರ 4 ವರ್ಷದ ಪುಟ್ಟ ಮಗ ಚಿತೆಗೆ ಬೆಂಕಿಯಿಟ್ಟನು. ಪತ್ರಿಕೆಗಳಲ್ಲಿನ ಮುಖ ಪುಟಗಳಲ್ಲಿ ಭಾರತದ ಇಂಗ್ಲೆಂಡ್ ವಿರುದ್ಧ ನಡೆದ ವಿಜಯದ ಸುದ್ಧಿ ಸಾಮರಸ್ಯಗಳು ತುಂಬಿದ್ದವು. ಅತ್ಯಂತ ನಿರ್ಣಾಯಕ ಪಂದ್ಯವಾದ ಭಾರತ ಹಾಗೂ ಜಿಂಬಾಬ್ವೇ ಮ್ಯಾಚ್‌ನಲ್ಲಿ ನಮ್ಮವರು 7 ಬಾಲ್‌ಗೆ 4 ರನ್ ಹೊಡೆಯಲು ಅಸಮರ್ಥರಾದರು. ಸಾಗರದಾಚೆ ನೆಲೆಸಿರುವ ಭಾರತೀಯರಿಗೂ ನಮ್ಮ ತಂಡದ ಗೆಲುವಿನ ಚಿಂತೆಯೇ ಕಾಡುತ್ತದೆ. ಭಾರತದ ಬುದ್ಧಿವಂತ ನಾಗರೀಕರಾದ ನಾವು ಏಕೆ ಹೀಗಾದೆವು?

ಕಡೇಪಕ್ಷ ಭಾರತ ತನ್ನ ಪರಮವೈರಿಯಾದ ಪಾಕಿಸ್ತಾನ ತಂಡವನ್ನಾದರೂ ಸೋಲಿಸಿ ಬರಲಿ ಎಂದು ಹಾರೈಸುವ ನಾವೇ ಧನ್ಯರು. ಅಥವಾ ಕ್ರಿಕೆಟ್‌ನಿಂದ ಲಭ್ಯವಾದ ಹಣದ ಒಂದು ಭಾಗವನ್ನಾದರೂ Army Relief Fundಗೆ ಕಳುಹಿಸಿದರೆ ಭಾರತ ಮಾತೆ ಧನ್ಯಳು ಅಲ್ಲವೇ ?

"Jai Hind"

ಎಡಿಕೇರಿ ಸುಧರ್ಶನ್, ಬೆಂಗಳೂರು.

49.ಸುಷೇಣ, 50.ವಿಶಾಲಾಕ್ಷ, 51.ದೃಢ ಹಸ್ತ, 52.ದುರಾಧರ, 53.ಸುಹಸ್ತ

ಕಾವೇರಿ ತೀರದ ದುಬಾರೆಯಲ್ಲಿ ಅಂತ್ಯಗೊಂಡ ಐಯ್ಯಂಡ್ರಕಪ್ ಕ್ರಿಕೆಟೋತ್ಸವ. ಈಗ 'ದಂಬೆಕೋಡಿ ಕಪ್‌ಗಾಗಿ' ಭರದ ಸಿದ್ಧತೆ.

ನಂಜರಾಯ ಪಟ್ಟಣದ ಪ್ರಶಾಂತವಾತಾವರಣದಲ್ಲಿ, ಐಯಂಡ್ರ ಕುಟುಂಬಸ್ಥರು ಆಯೋಜಿಸಿದ್ದ ಐಯ್ಯಂಡ್ರ ಕಪ್ ಕ್ರಿಕೆಟ್ ಉತ್ಸವ ಅತ್ಯಂತ ಯೋಜಿತ ರೀತಿಯಲ್ಲಿ ನಡೆದು ಜನ ಮನ್ನಣೆಗೆ ಪಾತ್ರವಾಯಿತು. ಈ ಪಂದ್ಯಾವಳಿಯಲ್ಲಿ 58 ಗೌಡ ಕುಟುಂಬಗಳ ತಂಡಗಳು ಪಾಲ್ಗೊಂಡು ಅಂತಿಮ ಸುತ್ತಿಗೆ ಬಾಲಾಡಿ ಮತ್ತು ಊರುಬೈಲು ತಂಡಗಳು ಪ್ರವೇಶಿಸಿ, ಕೊನೆಗೆ ಐಯ್ಯಂಡ್ರಕಪ್ ಬಾಲಾಡಿ ತಂಡದ ಮಡಿಲಿಗೆ ಸೇರಿತು. ಇದರಿಂದ ಬಾಲಾಡಿ ತಂಡ ಇದುವರೆಗೂ ಸೋಲು ಕಾಣದ ತಂಡವೆಂಬ ತನ್ನ ಖ್ಯಾತಿಯನ್ನು ಮತ್ತೆ ಮುಂದುವರಿಸಿತು.

ಫೈನಲ್ ಪಂದ್ಯದಲ್ಲಿ ಊರುಬೈಲು ತಂಡದ ವಿರುದ್ಧ 56 ರನ್‌ಗಳನ್ನು ಬಾರಿಸಿದ ಬಾಲಾಡಿ ಮನೋಜ್‌ರವರು ಉತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿ, ಜೊತೆಗೆ ಪಂದ್ಯ ಪುರುಷ ಪ್ರಶಸ್ತಿಯನ್ನೂ ತಮ್ಮದಾಗಿಸಿಕೊಂಡರು. ಬಾಲಾಡಿ ಮಧುರವರು ಸರಣಿ ಪುರುಷ ಪ್ರಶಸ್ತಿಯನ್ನೂ, ಬೈಮನ ವಿನ್ಸಿಯವರು ಉತ್ತಮ ಬೌಲರ್ ಪ್ರಶಸ್ತಿಯನ್ನು ಪಡೆದುಕೊಂಡರು.

ಉದ್ಘಾಟನಾ ಸಮಾರಂಭ:

ಪಂದ್ಯಾವಳಿಯನ್ನು ನಂಜರಾಯಪಟ್ಟಣದ ಶಾಲಾ ಮೈದಾನದಲ್ಲಿ ಏಪ್ರಿಲ್ 24 ರಂದು ನಿವೃತ್ತ ಪೊಲೀಸ್ ಅಧಿಕಾರಿ ಯಾಲದಾಳು ಕೇಶವಾನಂದರವರು ಉದ್ಘಾಟಿಸಿದರು. ಐಯಂಡ್ರ ಕುಟುಂಬದ ಪಟ್ಟೆದಾರ ಮುತ್ತಪ್ಪನವರು ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಸಭೆಯಲ್ಲಿ ಪೇರಿಯನ ಜಯಾನಂದ, ಮೂಟೇರ ನಂಜುಂಡ, ಮತ್ತು ಮಾವಾಜಿ ಗಣೇಶರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕ್ರೀಡಾಳುಗಳಿಗೆ ಶುಭ ಹಾರೈಸಿದರು.

ಸಮಾರೋಪ ಸಮಾರಂಭ : ಪಂದ್ಯಾವಳಿಯ ಸಮಾರೋಪ ಸಮಾರಂಭ ಏಪ್ರಿಲ್ 27 ರಂದು ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು 'ಅಯ್ಯಂಡ್ರ ಕಪ್' ಪಂದ್ಯಾವಳಿಯ ರೂವಾರಿಯಾಗಿರುವ ಅಯ್ಯಂಡ್ರ ರಾಘವಯ್ಯನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯನವರು, ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶರವರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಪಾಪು ಸಣ್ಣಯ್ಯನವರು, ಸದಸ್ಯ ಆರ್. ಕೆ. ಚಂದ್ರರವರು, ಪ್ರಾಧ್ಯಾಪಕ ಡಾ|| ಪದ್ಮಾಜಿಯವರು, ಗ್ರಾಮಪಂಚಾಯಿತಿ ಅಧ್ಯಕ್ಷ ಪಿ. ಡಿ. ಹರಿದಾಸ್‌ರವರು ಪಾಲ್ಗೊಂಡಿದ್ದರು. ಅಯ್ಯಂಡ್ರ ಪೂಣಚ್ಚ ಮತ್ತು ಶ್ರೀಮತಿ ಅಯ್ಯಂಡ್ರ ಜಾನಕಿ ಕುಶಾಲಪ್ಪನವರು ಬಹುಮಾನ ವಿತರಣೆ ಮಾಡಿದರು. ಅಯ್ಯಂಡ್ರ ರಶ್ಮಿಯವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಸಭೆಯಲ್ಲಿ ಅಯ್ಯಂಡ್ರ ಲೋಕನಾಥರವರು ಸ್ವಾಗತಿಸಿ, ತಮ್ಮ ನಿರೂಪಣೆಯೊಂದಿಗೆ ಕಾರ್ಯಕ್ರಮಕ್ಕೆ ಮಂಗಳ ಹಾಡಿದರು.

'ದಂಬೆಕೋಡಿ ಕಪ್'ಗೆ ಭರದ ಸಿದ್ಧತೆ: ಅಯ್ಯಂಡ್ರ ಕಪ್ ಕ್ರಿಕೆಟ್ ಪಂದ್ಯಾವಳಿ ಸಾಕಷ್ಟು ಕ್ರೀಡಾಭಿಮಾನಿಗಳನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗುತ್ತಿದ್ದಂತೆಯೇ, ಇತ್ತ ಮಡಿಕೇರಿಯಲ್ಲಿ ಮೇ 11 ರಿಂದ ಆರಂಭಗೊಳ್ಳಲಿರುವ ಪ್ರತಿಷ್ಠಿತ 'ದಂಬೆಕೊಡಿ ಕಪ್' ಕ್ರಿಕೆಟ್ ಪಂದ್ಯಾವಳಿಗಾಗಿ ಭಾರಿ ಸಿದ್ಧತೆಗಳು ಆರಂಭಗೊಂಡಿವೆ. ಅಯ್ಯಂಡ್ರ ಕಪ್ ಕ್ರಿಕೆಟೋತ್ಸವದಲ್ಲಿ ಗೌಡ ಸಾಂಸ್ಕೃತಿಕ ಅಕಾಡೆಮಿಯ ಆಶ್ರಯದಲ್ಲಿ ನಡೆಯಲಿರುವ ದಂಬೆಕೋಡಿ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಸಾಕಷ್ಟು ಪ್ರಚಾರ ನೀಡಲಾಗಿದೆ.

ದಂಬೆಕೋಡಿ ಕಪ್‌ಗೆ ಪ್ರವೇಶ ಪಡೆಯುವ ಅವಕಾಶವನ್ನು ಏಪ್ರಿಲ್ 30 ನೇ ತಾರೀಖಿನವರೆಗೆ ಮುಂದೂಡಿದ್ದರು. ಏಪ್ರಿಲ್ 27 ರ ವರೆಗೆ 95 ತಂಡಗಳು ತಮ್ಮ ಹೆಸರನ್ನು ನೋಂದಾಯಿಸಿ ಕೊಂಡವೆಯೆಂದು ತಿಳಿದು ಬಂದಿದೆ. ದಂಬೆಕೋಡಿ ಕುಟುಂಬಸ್ಥರು ಬಹಳ ಶಿಸ್ತು ಬದ್ಧ ರೀತಿಯಲ್ಲಿ ಈ ಪಂದ್ಯಾವಳಿಯನ್ನು ನಡೆಸಲು ತೀರ್ಮಾನಿಸಿದ್ದು, ಒಂದು ವೇಳೆ ಯಾವುದೇ ತಂಡದ ಬಳಿ ಸಮವಸ್ತ್ರ ಇಲ್ಲದಿದ್ದಲ್ಲಿ ಅವರಿಗೆ ನೆರವಾಗಲು ದಂಬೆಕೋಡಿ ಕುಟುಂಬಸ್ಥರೇ ಕೆಲವು ಸಮವಸ್ತ್ರಗಳನ್ನೂ ಕಾಯ್ದಿರಿಸಿರುತ್ತಾರೆ ಎಂದು ಗೌಡ ಸಾಂಸ್ಕೃತಿಕ ಅಕಾಡೆಮಿಯ ನಿರ್ದೇಶಕರೂ ಆಗಿರುವ ದಂಬೆಕೋಡಿ ಹರೀಶ್‌ರವರು 'ಸಂಗಾತಿಗೆ ತಿಳಿಸಿದ್ದಾರೆ.

ಮೇ11 ರಂದು ಮಡಿಕೇರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಪಂದ್ಯಾವಳಿ ಉದ್ಘಾಟನೆ ಗೊಳ್ಳಲಿದ್ದು ಅಂದು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ಎಲ್ಲಾ ತಂಡಗಳು ಮೈದಾನದಲ್ಲಿ ಪಥ ಸಂಚಲನ ನಡೆಸಲಿವೆ. ನಂತರ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು ಕೆಲವು ಪ್ರದರ್ಶನ ಪಂದ್ಯಗಳು ನಡೆಯಲಿವೆ ಎಂದು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶರವರು 'ಸಂಗಾತಿ'ಗೆ ತಿಳಿಸಿದ್ದಾರೆ.

ಒಟ್ಟಿನಲ್ಲಿ ಸುಮಾರು 100 ಕ್ಕೂ ಹೆಚ್ಚು ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ಯಾವ ಗೌಡ ಕುಟುಂಬ ತಂಡ ಪ್ರಬಲ ಕ್ರಿಕೆಟ್ ತಂಡವಾಗಿ ಹೊರ ಹೊಮ್ಮುತ್ತ ದೆಂಬುದನ್ನು ಕಾದು ನೋಡಬೇಕಾಗಿದೆ.

-ಪಟ್ಟಡ ಶಿವಕುಮಾರ್

ಮೇ 11 ವಿಶ್ವ ತಾಯಂದಿರ ದಿನ

1. ಮಹಿಳೆ ತಾಯ್ತನದಿಂದ ಮಾತ್ರ ಪರಿಪೂರ್ಣಳೆ?

ಎರಡು ವರ್ಷದ ಮಗುವಿನಲ್ಲೂ ಕೂಡ ತಾಯ್ತನ ಎನ್ನುವುದು ಜಾಗೃತ ವಾಗಿರುತ್ತದೆ. ಆ ಮಗು ತನ್ನ ಅಮ್ಮ ತನಗೆ ಏನೆಲ್ಲಾ ಮಾಡುತ್ತಾಳೊ ಅಂದರೆ ಸ್ನಾನ ಮಾಡಿಸುವುದು, ಬಟ್ಟೆ ಹಾಕಿ ಅಲಂಕಾರ ಮಾಡುವುದು, ಊಟ, ನಿದ್ದೆ ಮಾಡಿಸುವುದು. ಇದನ್ನೆಲ್ಲಾ ಗೊಂಬೆಗೆ ತನ್ನ ಮಗು ಎಂದು ಕೊಂಡು ಮಾಡುತ್ತದೆ. ಇದರಿಂದ ಹೆಣ್ಣಿಗೆ ತಾಯ್ತನ ಎನ್ನುವುದು ಹುಟ್ಟಿನಿಂದಲೇ ಬಂದಿದೆ ಎಂಬುದನ್ನು ತಿಳಿಯಬಹುದು.

ಮಗುವನ್ನು ಹೆತ್ತ ಮಾತ್ರಕ್ಕೆ ಆಕೆಯನ್ನು ಪರಿಪೂರ್ಣಳು ಎನ್ನಲಾಗುವುದಿಲ್ಲ. ಯಾವ ಹೆಣ್ಣಿನಲ್ಲಿ ತಾಯ್ತನವು ಪುಟಿದೇಳುತ್ತಿರುತ್ತದೆಯೊ....ಯಾವುದೇ ಮಕ್ಕಳನ್ನಾದರೂ ಸಹ ತನ್ನ ಮಕ್ಕಳನ್ನಾಗಿ ಕಾಣುವಳೊ....ತಾಯಿಗಿರಬೇಕಾದ ಪ್ರೀತಿ ವಾತ್ಸಲ್ಯ ಮಮತೆ ಸಹನೆ ಮುಂತಾದ ತಾಯ್ತನದ ಮಾನವೀಯ ಮೌಲ್ಯಗಳನ್ನು ಯಾವ ಹೆಣ್ಣು ಹೊಂದಿರುತ್ತಾಳೊ.....ಅವಳನ್ನು ಪರಿಪೂರ್ಣಳು ಎನ್ನಬಹುದು.

ಒಬ್ಬ ತಾಯಿ [ಆ ಸ್ಥಾನದಲ್ಲಿ ನಿಂತವರು (ತಾಯ್ತನ ಎನ್ನುವುದು ಕೇವಲ ಹೆಣ್ಣಿಗೆ ಮಾತ್ರ ಸೀಮಿತವಲ್ಲ)] ಯಾವ ರೀತಿಯಲ್ಲಿ ಮಗುವನ್ನು ಸಾಕಿಸಲಹುತ್ತಾಳೊ ಅದರ ಮೇಲೆ ಅವಲಂಬಿತವಾಗಿರುತ್ತದೆ. ತನ್ನ ಮಗುವನ್ನು ಸಮಾಜದಲ್ಲಿ ಒಬ್ಬ ಉತ್ತಮ ಪ್ರಜೆಯಾಗಿ, ಸದ್ಗುಣಗಳ ಸಾಕಾರ ಮೂರ್ತಿಯಾಗಿ ನಿಲ್ಲಿಸಿದಾಗ ಆಕೆ ಪರಿಪೂರ್ಣಳಾಗಬಹುದೇನೋ?

ದೇವಕ್ಕಿ ಕೃಷ್ಣನನ್ನು ಹೆತ್ತರೂ ತಾಯ್ತನದ ಪರಿಪೂರ್ಣತೆ ದೊರೆತದ್ದು ಯಶೋದೆಗೆ ಮಾತ್ರ. ಮಕ್ಕಳಿಲ್ಲದ ರಾಧೆಗೆ ಕರ್ಣ ಮಗುವಾಗಿ ಬಂದು ತಾಯ್ತನದ ಸವಿಯನ್ನು ಅವಳಿಗೆ ಉಣಿಸಿದ. ಅವನು ರಾಧೇಯನಾದನೇ ವಿನಃ ಕುಂತೀಯನಾಗಲಿಲ್ಲ. 20 ವರ್ಷದ ಅವಿವಾಹಿತೆ ಕೂಡ 60 ವರ್ಷದ ವೃದ್ಧನಿಗೆ ತಾಯಿಯಾಗಬಲ್ಲಳು.

2. ಹೆಣ್ಣಿನ ಸಾಮಾಜಿಕ ಚಟುವಟಿಕೆಗಳಿಗೆ ತಾಯ್ತನವು ನಿರ್ಭಂಧದ ಬೇಲಿ ಆಗುತ್ತದೆಯೇ? ಇದು ಒಪ್ಪುವಂತಹ ಮಾತಲ್ಲ. ಎಷ್ಟು ಜನ ಮಹಿಳೆಯರು ತಮ್ಮ ಮಕ್ಕಳು ಸಂಸಾರದ ಜವಾಬ್ದಾರಿಯನ್ನು ತಮ್ಮ ಹೊರಗಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುತ್ತಿಲ್ಲ?

ಸ್ವೇಚ್ಛಾಚಾರಿಯಾಗಿ ಯಾವುದೇ ಬಂಧನವಿಲ್ಲದೆ ನಿರ್ಭೀಡೆಯಿಂದ ಬದುಕುತ್ತಿರುವ ಕೆಲವೊಂದು ಆಧುನಿಕ ಮಹಿಳಾ ಮಣಿಗಳಿಗೆ ತಮ್ಮ ಸಾಮಾಜಿಕ ಚಟುವಟಿಕೆಗಳಿಗೆ ಮಗು ಕಾಲ್ತೊಡಕು ಆಗಬಹುದೇನೋ! ಎಳೆ ಮಗುವನ್ನು ಅದಕ್ಕೆ ಸಹಜವಾಗಿ ದೊರೆಯಬೇಕಾದ ಮಮತೆ ವಾತ್ಸಲ್ಯಗಳಿಂದ ವಂಚಿಸಿ ನಾವು ಸಮಜೋದ್ಧಾರ ಮಾಡುತ್ತೇವೆಂದು ಸದಾ ಹೊರಗಿದ್ದರೆ....... ನಾವು ಮಾಡುವ ಕಾರ್ಯದಲ್ಲಿ ಸಾರ್ಥಕತೆ ಇರುತ್ತದೆಯೇ? ಹೇಳಿ...... ಆತ್ಮ ತೃಪ್ತಿ ನಮಗಿರುತ್ತದೆಯೆ?

ಒಂದು ಮಗುವನ್ನು ಸರಿಯಾಗಿ ಸಾಕಲು ಅಸಮರ್ಥರಾದ ನಾವು ಸಮಾಜದ ಏಳುಬೀಳನ್ನು ಏನು ತಾನೆ ಸರಿಮಾಡಬಲ್ಲೆವು? ಆ..... ನೈತಿಕ ಹಕ್ಕು ನಮಗಿರುತ್ತದೆಯೇ? ಮಕ್ಕಳು, ಸಂಸಾರ, ಸಾಮಾಜಿಕ ಚಟುವಟಿಕೆಗಳನ್ನು ಸಮರ್ಥವಾಗಿ ಸರಿದೂಗಿಸಿ ಕೊಂಡು ಹೋಗುವ ಹೆಣ್ಣಿಗೆ ತಾಯ್ತನ ಖಂಡಿತವಾಗಿಯೂ ನಿರ್ಭಂಧದ ಬೇಲಿಯಾಗುವುದಿಲ್ಲ. ಈ ಸಮರ್ಥತೆ ಪ್ರತಿಯೊಬ್ಬ ಹೆಣ್ಣು ಮಕ್ಕಳಲ್ಲೂ ಇದೆ.

-ಮೂಡಗದ್ದೆ ಕೃಪಾ ಈರಪ್ಪ.

ಶುಭ ವಿವಾಹ

1. ಮೈಸೂರು ನಿವಾಸಿ ನಾಟೋಳನ ಶ್ರೀಧರ ಮತ್ತು ಸೀತಮ್ಮ ದಂಪತಿಗಳ ಮಗ ಮೋಹನ್ ಕುಮಾರನಿಗೂ ಮತ್ತು ಅರ್ವತ್ತೋಕ್ಲು ಗ್ರಾಮದ ಬಾಲಾಡಿ ಬಿದ್ದಪ್ಪನವರ ಮಗಳು ಹನಿರಾಣಿಗೂ ದಿನಾಂಕ 13-4-2003 ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ಮದುವೆ ನಡೆಯಿತು.

2. ಮಡಿಕೇರಿ ನಿವಾಸಿ ಪರಿವಾರನ ಸೋಮಣ್ಣ ಮತ್ತು ತಂಗಮ್ಮ ದಂಪತಿಗಳ ಮಗಳು ಹನಿತ (ಹನಿ)ಳಿಗೂ ಕೋಕೇರಿ ಗ್ರಾಮದ ಚಂಡೀರ ಕಾರ್ಯಪ್ಪನವರ ಪುತ್ರ ಸುಧಾಕರನಿಗೂ ಮಡಿಕೇರಿಯಲ್ಲಿರುವ ಮೇಲಿನ ಗೌಡ ಸಮಾಜದಲ್ಲಿ ದಿನಾಂಕ 13-4-2003 ರಂದು ಮದುವೆಯೂ ತುಂಬಾ ಚೆನ್ನಾಗಿ ಕಳೆಯಿತು.

3. ಕಟ್ಟೆಮಾಡು ನಿವಾಸಿ ಜೈನೀರ ವೆಂಕಟೇಶ್ ಮತ್ತು ಜೂಬಿ ದಂಪತಿಗಳ ಪುತ್ರ ಪ್ರವೀಣ್ (ಸುಧ)ನಿಗೂ ತಾಕೇರಿ ಗ್ರಾಮದ ಗುಬ್ಬನ ತಮ್ಮಣ್ಣ ಮತ್ತು ಲೀಲಾ ದಂಪತಿಗಳ ಪುತ್ರಿ ವಿನುತ (ವಿನು) ಇವರ ಮದುವೆಯು ದಿನಾಂಕ 17-4-2003 ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

4. ಕಾರಗುಂದ ಗ್ರಾಮದ ಕೊಡಗನ ದಿ|| ರಾಘವಯ್ಯನವರ ಪುತ್ರಿ ಚಂದ್ರಾವತಿ (ಸುಧ) ಎಂಬ ವಧುವಿಗೂ ಮತ್ತು ಕಾಟಕ್ಕೇರಿ ಗ್ರಾಮದ ಪೇರಿಯನ ಅಪ್ಪಯ್ಯನವರ ಪುತ್ರ ದೇವಯ್ಯನೆಂಬ ವರನಿಗೂ ದಿನಾಂಕ 17-04-2003 ರಂದು ಮಡಿಕೇರಿಯ ಕೋಟೆ ಮಹಿಳಾ ಸಮಾಜ ಕಲ್ಯಾಣ ಭವನದಲ್ಲಿ ಮದುವೆಯು ನಡೆಯಿತು.

5. ಬಾಡಗ ನಿವಾಸಿ ಸೆಟ್ಟೀಜನ ಮುದ್ದಯ್ಯನವರ ಪುತ್ರ ನರೇಂದ್ರ (ಹರಿ)ನಿಗೂ ಹಾಗೂ ಮೈಸೂರು ನಿವಾಸಿ ಹಿನಕಲ್‌ನಲ್ಲಿ ವಾಸವಿರುವ ಕೊಂಬಾಲೆ ಟಿ. ಅಪ್ಪಾಜಿಯವರ ಮಗಳು ಶೀಲಾ ಕುಮಾರಿಳಿಗೂ ಮಡಿಕೇರಿಯ ದಾಸವಾಳ ರಸ್ತೆಯಲ್ಲಿರುವ ಕೂರ್ಗ್ ಕಮ್ಯೂನಿಟಿ ಹಾಲ್‌ನಲ್ಲಿ ದಿನಾಂಕ 4-05-2003 ರಂದು ಮದುವೆಯು ನೆರವೇರಿತು.

59.ಉಪನಂದ, 60.ಚಿತ್ರಬಾಣ, 61.ಚಿತ್ರವರ್ಮ, 62.ಸುವರ್ಮ, ಮುಂದಿನ ಸಂಚಿಕೆಯಲ್ಲಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಕನ್ನಡಿಗರ ಶುಭ ನುಡಿ ಪಾಕ್ಷಿಕ ಪತ್ರಿಕೆ.

35, Chhatterpur, New Delhi - 110030. Mobile : 9810904664

ಇನ್ನು ಮುಂದೆ ದೆಹಲಿಯಲ್ಲಿ ಕನ್ನಡಿಗರಿಗೆ ಶುಭನುಡಿ ಸೇವೆಗಳು ಲಭ್ಯ.

ಮಾನ್ಯರೇ, : ಶುಭ ನುಡಿ ದೆಹಲಿಯಿಂದ ಪ್ರಕಟವಾಗುತ್ತಿರುವ ಒಂದು ಪಾಕ್ಷಿಕ ಪತ್ರಿಕೆಯಾಗಿದ್ದು ಈಗಾಗಲೇ ದೆಹಲಿ ಕನ್ನಡಿಗರಲ್ಲಿ ಪ್ರಖ್ಯಾತಿಯನ್ನು ಪಡೆದಿದೆ ಹಾಗೂ ರಾಜಧಾನಿಯಲ್ಲಿರುವ ಕನ್ನಡಿಗರಿಗಾಗಿ ಅನೇಕ ಸೇವೆಗಳನ್ನು ಒದಗಿಸುತ್ತಿದೆ.

ನಮ್ಮ ಸೇವೆಗಳಿಂದ ಸಂತೃಪ್ತಿ ಹೊಂದಿದ ಅನೇಕ ಕನ್ನಡಿಗರಿಂದ ಬರುತ್ತಿರುವ ಮೆಚ್ಚುಗೆಯ ಹಾಗೂ ಕೃತಜ್ಞತಾ ಪೂರ್ವಕ ಪತ್ರಗಳನ್ನು ನೋಡಿ ನಮ್ಮ ಮನ ತುಂಬಿಹೋಗಿದೆ ಹಾಗೂ ಕನ್ನಡಿಗರ ಅಪಾರ ಪ್ರೇಮಕ್ಕೆ ತಲೆಬಾಗಿದ್ದೇವೆ.

ನಮ್ಮ ಸೇವಾ ಚೌಕಟ್ಟನ್ನು ಮತ್ತಷ್ಟು ವಿಸ್ತರಿಸುತ್ತಾ ಕರ್ನಾಟಕದಲ್ಲಿರುವ ಕನ್ನಡಿಗರಿಗೂ ದೆಹಲಿಯಿಂದ ಹಲವಾರು ಸೇವೆಗಳನ್ನು ಮಾಹಿತಿಗಳನ್ನು ಒದಗಿಸಿಕೊಡುವ ಒಂದು ಹೊಸ ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೇವೆ.

ದೆಹಲಿಯಲ್ಲಿರುವ ಕೇಂದ್ರ ಸರಕಾರದ ವಿಭಿನ್ನ ಇಲಾಖೆಗಳು, ರಾಷ್ಟ್ರೀಯ ಸಂಸ್ಥೆಗಳು, ಕಾರ್ಪೋರೇಟ್, ಉದ್ಯಮಗಳ ಕೇಂದ್ರ ಕಛೇರಿಗಳು ಅಥವಾ ಇನ್ನಿತರ ಯಾವುದೇ ಸಂಘ ಸಂಸ್ಥೆಗಳಲ್ಲಿ ನಿಮ್ಮ ಕೆಲಸಗಳು ಬಾಕಿ ಉಳಿದಿರಬಹುದು. ಕರ್ನಾಟಕದಿಂದ ಬಂದು ಅದನ್ನು ಹಿಂಬಾಲಿಸಿಕೊಂಡು ಹೋಗಲು ನಿಮಗೆ ಸಾವಿರಾರು ರೂಪಾಯಿಗಳು ಖರ್ಚು ತಗುಲಬಹುದು. ಇದನ್ನು ತಪ್ಪಿಸಲು ನಿಮಗೆ ದೆಹಲಿಯಲ್ಲಿ ಯಾರಾದರೂ ಇದ್ದಿದ್ದಲ್ಲಿ ಎಷ್ಟೊಂದು ಚೆನ್ನಾಗಿರುತ್ತಿತ್ತು ಎಂದು ನೀವು ಅನೇಕ ಬಾರಿ ಯೋಚಿಸಿರಬಹುದು. ನಿಮ್ಮ ಚಿಂತೆ ಬಿಡಿ. ನಿಮ್ಮ ಕೆಲಸಗಳನ್ನು ನಮಗೆ ವಹಿಸಿಕೊಟ್ಟುಬಿಡು. ಬೆಣ್ಣೆಯಿಂದ ಕೂದಲನ್ನೆಳೆದಷ್ಟು ಲೀಲಾಜಾಲವಾಗಿ ಮಾಡಿಸಿಕೊಡುತ್ತೇವೆ. ಸಂಬಂಧಪಟ್ಟ ದಾಖಲು ಪತ್ರಗಳ ಫೋಟೋಕಾಪಿಗಳನ್ನು ಮತ್ತು ಏನಾಗಬೇಕೆಂದು ತಿಳಿಸಿದರೆ ಸಾಕು, ಸರಿಯಾದ ವ್ಯಕ್ತಿಯನ್ನೇ ಹಿಡಿದು ಮಾಡಿಸಿಕೊಡುತ್ತೇವೆ.

ಯಾವುದೇ ಕಾರಣ ನಿಮಿತ್ತವಾಗಿ ನಿಮಗೆ ದೆಹಲಿಗೆ ಬರಬೇಕಾದ ಅವಶ್ಯಕತೆ ಉಂಟಾಯಿತೆಂದು ಭಾವಿಸಿಕೊಳ್ಳಿರಿ. ನಿಮಗೆ ದೆಹಲಿಯಲ್ಲಿ ನಿಮ್ಮ ಬಜೆಟ್‌ಗೆ ಅನುಸಾರವಾಗಿ ವಸತಿ ವ್ಯವಸ್ಥೆ, ಹೊಟೇಲು ರೂಂ ಬುಕ್ಕಿಂಗ್, ರೈಲ್ವೇ ರಿಟರ್ನ್ ಟಿಕೆಟ್ ಬುಕ್ಕಿಂಗ್, ಟೂರಿಸ್ಟ್ ಇನ್‌ಫಾರ್ಮೇಶನ್, ಹಾಗೂ ಇನ್ನಾವುದೇ ಇತರ ಮಾಹಿತಿಗಳನ್ನು ಹಾಗೂ ದೆಹಲಿಯಲ್ಲಿ ಮಾರ್ಗದರ್ಶನಗಳನ್ನು ನೀಡಲಾಗುವುದು.

ಇದಲ್ಲದೆ ಉದ್ಯೋಗ ಮಾಹಿತಿಗಳು, ವೈವಾಹಿಕ ಮಾಹಿತಿಗಳು ಅಥವಾ ನೀವೇನಾದರೂ ಹೊಸತಾಗಿ ಸಲಹೆ ಸೂಚನೆ ನೀಡಿದಲ್ಲಿ ಅಂತಹ ಸೇವೆಗಳನ್ನು ಒದಗಿಸಲಾಗುವುದು. ಇದಕ್ಕಾಗಿ ನೀವು ಮಾಡಬೇಕಾದುದು ಇಷ್ಟೆ.

ನಿಮಗೆ ಬೇಕಾಗುವ ಸೇವೆಗಳ ಬಗ್ಗೆ ತಿಳಿಸಬೇಕು. ಯಾವುದೇ ದಾಖಲಾತಿಗಳಿದ್ದಲ್ಲಿ ಅವುಗಳ ಫೋಟೋಕಾಪಿಗಳನ್ನು ಕಳುಹಿಸಬೇಕು. ಶುಭ ನುಡಿ ಪತ್ರಿಕೆಯ ಚಂದಾಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಬೇಕು.

ನಮ್ಮ ಸೇವೆಗಳನ್ನು ನಿಮಗಾಗಿ ತೆರೆದಿದ್ದೇವೆ. ಇನ್ನೇಕೆ ತಡ, ನಿಮ್ಮ ಸಮಸ್ಯೆ, ಸಂಕಷ್ಟಗಳನ್ನು ನಿವಾರಿಸಿಕೊಳ್ಳಿರಿ ಧನ್ಯವಾದಗಳೊಂದಿಗೆ.

ಮರೆಯದೆ ಒಮ್ಮೆ ಸಂಪರ್ಕಿಸಿ - ಸಮಸ್ಯೆ ಬಗೆಹರಿಸಿಕೊಳ್ಳಿ

ಪ್ರಕಟಣೆ : ಕೊಡಗು ಸಂಗಾತಿ

ಎ. ಎ. ಚಿತ್ತರಂಜನ್ ದಾಸ್, ಸಂಪಾದಕರು
ಸಂಗಾತಿ ಚಂದದಾರರು, ಮತ್ತು ಹಿತೈಷಿಗಳು

ತಿದ್ದುಪಡಿ : ಕೊಡಗು ಸಂಗಾತಿ ಸಂಪುಟ 7, ಸಂಚಿಕೆ 1-2 (ಏಪ್ರಿಲ್) ರಲ್ಲಿ ಜಾಹಿರಾತಿನ 2 ನೇ ಪುಟದಲ್ಲಿ ಕೊಡಪಾಲು ಕಿರಣ್ ಬಾಲಕೃಷ್ಣ ಎಂಬುದನ್ನು ಕೊಡಪಾಲು ಕಿಶನ್ ಬಾಲಕೃಷ್ಣನೆಂದು ಹಿತೈಷಿಗಳು ಓದಿಕೊಳ್ಳುವುದು. ಅಚಾತುರ್ಯಕ್ಕೆ ವಿಷಾದಿಸುತ್ತೇವೆ.

-ಸಂಪಾದಕ

ನಿಧನ: ಮಡಿಕೇರಿ ಸಮೀಪ ಮೇಕೇರಿ ಗ್ರಾಮದ ಮೇಚನ ಉತ್ತಯ್ಯನವರು ದಿನಾಂಕ 7-4-2003 ರಲ್ಲಿ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 62 ವರ್ಷ ಪ್ರಾಯವಾಗಿತ್ತು. ಪತ್ನಿ, ಒಂದು ಗಂಡು ಮತ್ತು ಒಂದು ಹೆಣ್ಣು ಮಗಳು, ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

-ಪಣಿಲೆಮನೆ, ಉದಯ್‌ಕುಮಾರ್, ಮೇಕೇರಿ.



ದಿ॥ ಪಾರ್ವಾಡಿ ಲಕ್ಷ್ಮಿ ಕೃಷ್ಣಪ್ಪ.

ನಿಧನ

ಮಡಿಕೇರಿ ನಿವಾಸಿ ಪಾರ್ವಾಡಿ ದಿ॥ಕೃಷ್ಣಪ್ಪ ಲಾಯರ್‌ನವರ ಧರ್ಮಪತ್ನಿ ಲಕ್ಷ್ಮಿಯವರು ದಿನಾಂಕ 26-03-2003 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 77 ವರ್ಷ ಪ್ರಾಯವಾಗಿತ್ತು. ಮೃತರು 3 ಗಂಡು ಮತ್ತು 1 ಹೆಣ್ಣು ಮಗಳಲ್ಲದೆ ಮೊಮ್ಮಕ್ಕಳು ಮರಿಮಕ್ಕಳು ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ವರದಿ : ಪರ್ಲಕೋಟಿ ನಿಂಗಪ್ಪ, ಕಗ್ಗೊಡ್ಲು.

Reg. No. KA/SK/MYS-88/2003 Registered : 10-01-96 TCI Kar. 09592

ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ (ರಿ.) ಮತ್ತೆ
ದಂಬೆಕೋಡಿ ಕುಟುಂಬಸ್ತರ ಸಂಯುಕ್ತಾಶ್ರಯಲಿ ನಡ್ಸುವ

ದಂಬೆಕೋಡಿ ಕಪ್ -2003

ಉದ್ಘಾಟನಾ ಸಮಾರಂಭ

ಇದೇ ಮೇ 11 ನೇ ತಾರೀಖ್ ಹೊತ್ತಾರೆ 9 ಗಂಟೆಗೆ ಮಡಿಕೇರಿಯಲ್ಲಿರ್ರು ಮ್ಯಾನ್ ಕಾಂಪೌಂಡ್ ಮೈದಾನಲಿ ದಂಬೆಕೋಡಿ ಕ್ರಿಕೆಟ್ ಕಪ್ ನಡ್ಡದೆ. 120 ಕ್ಕೂ ಜಾಸ್ತಿ ತಂಡಗಳಿಂದ ಆಕರ್ಷಕ ಪಥ ಸಂಚಲನ ಉಟ್ಟು. ಸಾಂಸ್ಕೃತಿಕ ಕಾರ್ಯಕ್ರಮಗ ನಡ್ಡವೆ. ಎಲ್ಲವೂ ಬಂದ್ ಭಾಗವಹಿಸಕ್ಕು ಮತ್ತೆ ಪ್ರೋತ್ಸಾಹಿಸಿ ಸಹಕರಿಸಕ್ಕು. ಸಹಬಾಳ್ವೆಯ ಸಂಘಟನೆಯೇ ನಮ್ಮ ಧ್ಯೇಯ. ಎಲ್ಲಾವುಕ್ಕು ಸ್ವಾಗತ ಸುಸ್ವಾಗತ ಉಟ್ಟು.

ಪ್ರಕಟಣೆ : ಅಧ್ಯಕ್ಷರ್ ಮತ್ತೆ ಆಡಳಿತ ಮಂಡಳಿಯವು, ಮತ್ತೆ ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ (ರಿ.) ಮಡಿಕೇರಿ. ಮತ್ತೆ ದಂಬೆಕೋಡಿ ಕುಟುಂಬಸ್ಥರ್.

ಕೊಡಗು ಎಜುಕೇಷನ್ ಅಕಾಡೆಮಿ, ಬೆಂಗಳೂರು :

Chapter IV : (ಸೀಮಿತ ವಿಷಯ): ಉದ್ಯೋಗಸ್ತರು.

10 ಕುಟುಂಬ 18 ಗೋತ್ರದ ಗೌಡ ಭಾಂದವರಲ್ಲಿ ಸರ್ಕಾರಿ ಉದ್ಯೋಗ, ಅರೆ ಸರ್ಕಾರಿ ಉದ್ಯೋಗದಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವವರು ನಿವೃತ್ತಿದಾರರು ಯಾರೇ ಆದರೂ ಅವರನ್ನು ಒಂದು ಸೂರಿನಡಿಯಲ್ಲಿ ಸೇರಿಸುವ ಪ್ರಯತ್ನವಾಗಿದೆ. ಆಸಕ್ತರು ಈ ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸುವುದು.

ವಿಳಾಸ : ಮೊಟ್ಟನ ರವಿಕುಮಾರ್ Advocate, Secretary, KEA, C/o 156/1B, I Floor, R.V. Road, Near Minerva Circle, Opp. Hero Honda Show Room, Bangalore - 4 Ph.: 080/3539555 Mobile : 9844172183

ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ.

C/o ಕೊಡಗು ಗೌಡ ವಿದ್ಯಾರ್ಥಿನಿಲಯ ಜಯಲಕ್ಷ್ಮಿಪುರಂ, ಮೈಸೂರು - 12

ಪ್ರಕಟಣೆ :

ನಮ್ಮ ಜನಾಂಗದಲ್ಲಿರುವ ಅನಾಥ ಮಕ್ಕಳನ್ನು ಗುರುತಿಸಿ ಅಂಥವರನ್ನು ನಮ್ಮ ಸಂಘದ ವತಿಯಿಂದ ವಿದ್ಯಾಭ್ಯಾಸ ಕೊಡುವ ಉದ್ದೇಶವಿಟ್ಟು ಕೊಂಡಿರುವುದರಿಂದ, ನಮ್ಮ ಜನಾಂಗದಲ್ಲಿ ಯಾವುದೇ ಅನಾಥ ಮಕ್ಕಳಿದ್ದಲ್ಲಿ ಅಂದರೆ ಅವರಿಗೆ ತಂದೆ ತಾಯಿ, ಅಣ್ಣ, ತಮ್ಮ, ಅಕ್ಕ ತಂಗಿ, ಬಹಳ ಹತ್ತಿರದ ಸಂಬಂಧಿಕರು ಹಾಗೂ ಆಸ್ತಿ ಪಾಸ್ತಿ ಇರಬಾರದು. ಅಂಥವರ ಹೆಸರು ಮನೆ ಹೆಸರು, ತಂದೆ ಹೆಸರು ಹಾಗೂ ಪೂರ್ತಿ ವಿವರ ಮತ್ತು ವಿಳಾಸದೊಂದಿಗೆ ನಮ್ಮ ಸಂಘದ ಕಾರ್ಯದರ್ಶಿಯವರಿಗೆ ಮೇಲ್ಕಂಡ ವಿಳಾಸಕ್ಕೆ ತಿಳಿಸಬೇಕೆಂದು ವಿನಂತಿ. ಹೆಚ್ಚಿನ ಮಾಹಿತಿಗಾಗಿ ಅಧ್ಯಕ್ಷರು (Phone No. 0821/363574) ಅಥವಾ ಕಾರ್ಯದರ್ಶಿ (0821/302650) ಇವರನ್ನು ಸಂಪರ್ಕಿಸಿರಿ.

ತಾ|| 18-4-2003

ತಡಿಯಪ್ಪನ ಕುಮಾರ ಜಯ, ಅಧ್ಯಕ್ಷರು, **ಕೊ. ಗೌ. ಮಾ. ಸೈ. ಕ್ಷೇ. ಸಂಘ**, ಮೈಸೂರು.

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.